ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 9 ಶನಿವಾರ 2022

ಸಂಪುಟ: 43 | ಸಂಚಿಕೆ: 349 | ಪುಟಗಳು: 12


ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಜ್ಯದಲ್ಲಿ ಶಾಂತಿ ಕದಡುವ ಹುನ್ನಾರ

ಮುಖ್ಯಮಂತ್ರಿ ಬೊಮ್ಮಾಯಿ ಎಚ್ಚರಿಕೆ



ಕಟ್ಟುನಿಟ್ಟಿನ ಕ್ರಮಕ್ಕೆ ಪೊಲೀಸರಿಗೆ ಸೂಚನೆ

ಬೆಂಗಳೂರು, ಏ.8 (ಕೆಎಂಶಿ)–ಕರ್ನಾಟಕದಲ್ಲಿ ಶಾಂತಿ ಕದಡುವ ಹುನ್ನಾರ ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ದುಷ್ಟ ಶಕ್ತಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು. ಈ ವಿಷಯದಲ್ಲಿ ಯಾವುದೇ ಚಾನ್ಸ್ ತೆಗೆದುಕೊಳ್ಳಬೇಡಿ ಎಂದು ತಿಳಿಸಿದ್ದೇವೆ. ಕೆಲವು ಕಿಡಿಗೇಡಿಗಳು ಬೆದರಿಕೆ ಕರೆ ಮಾಡುವುದು, ಅನಗತ್ಯ ಹೇಳಿಕೆ ನೀಡಿ, ಸಾರ್ವಜನಿಕರಲ್ಲಿ ಭಯ ಭೀತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಇಂತಹವರನ್ನು ತಕ್ಷಣವೇ ಬಂಧಿಸುವಂತೆ ಸೂಚಿಸಿದ್ದೇನೆ.

ಇಂದು ಬೆಳಗ್ಗೆ ನಗರದ ಖಾಸಗಿ ಶಾಲೆಗಳಿಗೆ ಬೆದರಿಕೆ ಕರೆಗಳು ಬಂದು, ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಆತಂಕ ಉಂಟು ಮಾಡಿವೆ. ಯಾರೂ ಅತಂಕಪಡುವ ಅಗತ್ಯವಿಲ್ಲ ಎಂದ ಮುಖ್ಯಮಂತ್ರಿಯವರು, ಎಲ್ಲಾ ರೀತಿ ಮುಂಜಾಗ್ರತ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದರು. ಈ ಬಗ್ಗೆ ತನಿಖೆ ನಡೆಯುತ್ತಿದೆ. ಯಾರು ಕರೆ ಮಾಡಿದರು. ಎಲ್ಲಿಂದ ಕರೆ ಬಂದಿತು ಎಂಬ ಬಗ್ಗೆ ತನಿಖೆ ಆರಂಭವಾಗಿದೆ. ಕಳೆದ ಕೆಲವು ದಿನಗಳಿಂದ ಸಮಾಜದ ಸ್ವಾಸ್ಥ್ಯವನ್ನು ಕದಡಿ ರಾಜಕೀಯ ಲಾಭ ಮಾಡಿಕೊಳ್ಳಲು ಕೆಲ ಸಂಘಟನೆಗಳು ಪ್ರಯತ್ನಿಸುತ್ತಿವೆ.

ಇವೆಲ್ಲದರ ಬಗ್ಗೆಯೂ ಬಿಗಿ ಕ್ರಮ ಕೈಗೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಮುಖ್ಯಮಂತ್ರಿಯವರು ತಿಳಿಸಿದರು. ಪೊಲೀಸರಿಗೆ ಯಾವುದೇ ಛಾನ್ಸ್ ತೆಗೆದುಕೊಳ್ಳಬೇಡಿ ಎಂದು ಸೂಚಿಸಿದ್ದೇನೆ. ಬೆದರಿಕೆ ಕರೆ ಮಾಡಿದವರನ್ನು ಬಂಧನ ಮಾಡುತ್ತೇವೆ ಕಾಲ್ ಡಿಟೈಲ್ಸ್ ಚೆಕ್ ಮಾಡಲು ಹೇಳಿದ್ದೇವೆ. ಎಲ್ಲಾ ರೀತಿ ಮುಂಜಾಗ್ರತಾ ಕ್ರಮಗಳನ್ನು ಪೊಲೀಸರು ತೆಗೆದುಕೊಳ್ಳುತ್ತಾರೆ ಎಂದು ಮಾಹಿತಿ ನೀಡಿದರು.

ಸಿಎಂಗೆ ಗುಪ್ತಚರ ಇಲಾಖೆ ವಿವರ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಘಟನೆ ಕುರಿತು ಗುಪ್ತಚರ ಇಲಾಖೆ ಎಡಿಜಿಪಿ ದಯಾನಂದ್ ಸಮಗ್ರ ವಿವರ ನೀಡಿದ್ದಾರೆ. ಶಾಲೆಗಳಿಗೆ ಇಮೇಲ್ ಮೂಲಕ ಬೆದರಿಕೆ ಬಂದಿದ್ದು, ಪೊಲೀಸರು ತಪಾಸಣೆ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ಬೆಂಗಳೂರು ಆರು ಖಾಸಗಿ ಶಾಲೆಗಳಿಗೆ 'ಬಾಂಬ್' ಬೆದರಿಕೆ

ಪೊಲೀಸರು, ಬಾಂಬ್ ನಿಷ್ಕ್ರಿಯ ದಳ ಪರಿಶೀಲನೆ: ಹುಸಿ ಕರೆ ಎಂಬುದು ದೃಢ

ಬೆಂಗಳೂರು, ಏ.8 (ಕೆಎಂಶಿ)– ಬೆಂಗಳೂರು ನಗರ ಹಾಗೂ ಹೊರ ವಲಯದ 6 ಖಾಸಗಿ ಶಾಲೆಗಳಲ್ಲಿ ಬಾಂಬ್ ಇರಿಸಿರುವುದಾಗಿ ಏಕಕಾಲದಲ್ಲಿ ಇ–ಮೇಲ್ ಮುಖಾಂತರ ಬೆದರಿಕೆ ಕರೆ ಬಂದಿತ್ತು.



ಈ ಮಾಹಿತಿ ಬೆನ್ನಲ್ಲೇ ಸ್ಥಳೀಯ ಪೊಲೀಸರು ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಇಂಚಿಂಚೂ ಸ್ಥಳ ಪರಿಶೀಲಿಸಿದರು. ಎಲ್ಲಿಯೂ ಯಾವುದೇ ರೀತಿಯ ಆತಂಕಕಾರಿ ವಸ್ತುಗಳು ಪತ್ತೆಯಾಗದ ಕಾರಣ ಇದೊಂದು ಹುಸಿ ಬಾಂಬ್ ಕರೆ ಎಂಬುದು ದೃಢಪಟ್ಟಿದೆ.

ಬಾಂಬ್ ಇಟ್ಟಿರುವ ಬಗ್ಗೆ ಆಯಾ ಶಾಲಾ ಆಡಳಿತ ಮಂಡಳಿಗೆ ಕರೆ ಮಾಡಿದ ಹಿನ್ನೆಲೆಯಲ್ಲಿ ಪೋಷಕರು ತಮ್ಮ ಮಕ್ಕಳು ಓದುತ್ತಿರುವ ಶಾಲೆಗಳತ್ತ ಗಾಬರಿಗೊಂಡು ಧಾವಿಸಿದ್ದರು. ಮಕ್ಕಳನ್ನು ತುರ್ತಾಗಿ ಕರೆದುಕೊಂಡು ಹೋಗುವಂತೆ ತಿಳಿಸಿದ ಹಿನ್ನೆಲೆಯಲ್ಲಿ ಪೋಷಕರು ಶಾಲೆಗಳಿಗೆ ದೌಡಾಯಿಸಿ ಮಕ್ಕಳನ್ನು ಕರೆದುಕೊಂಡು ಹೋದರು. ಶಾಲೆಗೆ ಸೈಕಲ್‌ನಲ್ಲಿ ಬರುವ ವಿದ್ಯಾರ್ಥಿಗಳನ್ನು ತಕ್ಷಣ ಮನೆಗೆ ಹೋಗುವಂತೆ ಸೂಚಿಸಲಾಗಿತ್ತು.

ಇಮೇಲ್‌ನಲ್ಲಿ ಏನಿತ್ತು: ಶಾಲೆಗಳಲ್ಲಿ ಶಕ್ತಿಯುತ ಬಾಂಬ್ ಇಡಲಾಗಿದೆ. ತಮಾಷೆ ಮಾಡುತ್ತಿಲ್ಲ. ಪವರ್‌ಫುಲ್ ಬಾಂಬ್ ಇಡಲಾಗಿದೆ. ಕೂಡಲೇ ಪೊಲೀಸರಿಗೆ ಕರೆ ಮಾಡಿ. ನೂರಾರು ಮಕ್ಕಳನ್ನು ಕಾಪಾಡಿ, ಎಲ್ಲವೂ ನಿಮ್ಮ ಕೈಯ್ಯಲ್ಲಿದೆ ಎಂದು ದುಷ್ಕರ್ಮಿಗಳು ಆಯಾ ಶಾಲಾ ಆಡಳಿತ ಮಂಡಳಿಗೆ ಬೆದರಿಕೆ ಹಾಕಿದ್ದರು. ● 9ನೇ ಪುಟಕ್ಕೆ

ಬಿಜೆಪಿ, ಕಾಂಗ್ರೆಸ್ ಕಿತ್ತೊಗೆಯಲು ಕನ್ನಡಿಗರಿಂದ ನನಗೆ ಸುಪಾರಿ



- ಮೈತ್ರಿ ಸರ್ಕಾರವನ್ನು ಅಪಮಾರ್ಗದಲ್ಲಿ ಕಾಂಗ್ರೆಸ್ ಕೆಡವಿತು
- ಬಿಜೆಪಿ ಅಪಮಾರ್ಗದಲ್ಲಿ ಸರ್ಕಾರ ರಚನೆ ಮಾಡಿತು

ಬೆಂಗಳೂರು, ಏ. 8– ಕಾಂಗ್ರೆಸ್ ವಿರೋಧಿಸಲು ಬಿಜೆಪಿ ನಾಯಕರು ನನಗೆ ಸುಪಾರಿ ಕೊಟ್ಟಿದ್ದಾರೆ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಿದ್ದಾರೆ. ನನಗೆ ಸುಪಾರಿ ಕೊಟ್ಟಿರೋದು ಬಿಜೆಪಿಯವರಲ್ಲ, ಕನ್ನಡಿಗರು. ಎರಡು ರಾಷ್ಟ್ರೀಯ ಪಕ್ಷಗಳನ್ನು ಹೊರ ಹಾಕಲು ಕನ್ನಡಿಗರು ಸುಪಾರಿ ಕೊಟ್ಟಿದ್ದಾರೆ. ನೀರಾವರಿ ಯೋಜನೆಗಳ ಬಗ್ಗೆ ಮಾತನಾಡೋದಕ್ಕೆ ಸುಪಾರಿ ಕೊಟ್ಟಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಬೆಂಗಳೂರಿನಲ್ಲಿ ಬೆಲೆ ಏರಿಕೆ ವಿರುದ್ಧ ಜೆಡಿಎಸ್ ಪಕ್ಷವು ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ಬಿಜೆಪಿ ನಾಯಕರು ಎಷ್ಟು ಕಾರಣವೋ, ಕಾಂಗ್ರೆಸ್ ನಾಯಕರು ಅಷ್ಟೇ ಕಾರಣ. ಅಪಮಾರ್ಗದ ಮೂಲಕ ನನ್ನ ನೇತೃತ್ವದ ಮೈತ್ರಿ ಸರ್ಕಾರವನ್ನು ತೆಗೆದರು. ಅದೇ ರೀತಿಯ ಅಪ ಮಾರ್ಗದ ಮೂಲಕ ಬಿಜೆಪಿ ಸರ್ಕಾರ ಬಂತು. ಆದರೆ ಇವತ್ತು ಬಿಜೆಪಿ ಸರ್ಕಾರವನ್ನು ಕಾಂಗ್ರೆಸ್ ನಾಯಕರು ಅನೈತಿಕ ಸರ್ಕಾರ ಎಂದು ಹೇಳುತ್ತಿದ್ದಾರೆ. ಇದನ್ನು ರಾಜ್ಯದ ಜನರು ಗಮನಿಸ ಬೇಕು ಎಂದು ರಾಜ್ಯ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರ ಮೇಲೆ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ದಾಸರಹಳ್ಳಿಯ ಜನತೆಗೆ ಅಧಿಕಾರಿಗಳು ಕಿರುಕುಳ ಕೊಟ್ಟರೆ ಸರಿ ಇರೋದಿಲ್ಲ. ನಮ್ಮ ಕಾರ್ಯಕರ್ತರು ಕಾನೂನು ಮೀರಿ ಕೆಲಸ ಮಾಡಲ್ಲ ಎಂದು ಎಚ್ಚರಿಕೆ ನೀಡಿದ ಕುಮಾರಸ್ವಾಮಿ, ಇಂದು ಗುಂಡಿಗಳಿಗೆ ಜನ ಬಲಿಯಾಗುತ್ತಿದ್ದಾರೆ. ರಸ್ತೆ ದಾಟಲು ಹೋಗಿ ಹೆಣ್ಣು ಮಗಳು ಸಾವನ್ನಪ್ಪಿದ್ದಾಳೆ ಅಂದರೆ ಏನು ಅರ್ಥ. ಕಳಪೆ ಕಾಮಗಾರಿಗಳಿಂದ ಹೀಗೆ ಆಗುತ್ತಿದೆ. ಕೋರ್ಟ್ ಛೀಮಾರಿ ಹಾಕುತ್ತಿದೆ. ಅಪಘಾತದಲ್ಲಿ ಸಾವನ್ನಪ್ಪಿದರೆ ಅವರ ಬಗ್ಗೆ ಕನಿಕರ ಇಲ್ಲ ಎಂದು ಗುಡುಗಿದ್ದಾರೆ.

ಸರ್ಕಾರ ಮತ್ತು ಬಿಬಿಎಂಪಿ ವಿರುದ್ಧ ಟೀಕಾ ಪ್ರಹಾರ: ಬೆಂಗಳೂರಿಗೆ ಸರಿಯಾದ ಸೌಕರ್ಯ ನೀಡಿ ಎಂದು ಉದ್ಯಮಿ ಟಿ.ವಿ ಮೋಹನ್ ದಾಸ್ ಪೈ ಅವರು ಪ್ರಧಾನಿಗೆ ಪತ್ರ ಬರೆದಿದ್ದಾರೆ. ರಾಜ್ಯದ ಸ್ಥಿತಿಯನ್ನು ಬಿಜೆಪಿ ಎಲ್ಲಿಗೆ ತಂದಿದೆ? ಯಾವುದೇ ಕೆಲಸ ಆಗಬೇಕಾದರೆ ಸರ್ಕಾರಕ್ಕೆ ನ್ಯಾಯಾಲಯವೇ ಆದೇಶ ಕೊಡಬೇಕು ಅಥವಾ ಮೋದಿ ಅವರೇ ಹೇಳಬೇಕಾ? ಎಂದು ರಾಜ್ಯ ಸರ್ಕಾರದ ಕಾರ್ಯವೈಖರಿ ಕುರಿತು ವ್ಯಂಗ್ಯ ವಾಡಿದ್ದಾರೆ. ರಾಷ್ಟ್ರೀಯ ಪಕ್ಷಗಳು ಯಾವ ರೀತಿ ಚುನಾವಣೆ ನಡೆಸುತ್ತಿವೆ ಎನ್ನುವುದು ನನಗೆ ಗೊತ್ತಿದೆ. ಕಾಂಗ್ರೆಸ್, ಬಿಜೆಪಿಗೆ ಕನ್ನಡಿಗರು ರಾಜ್ಯವನ್ನು ಗುತ್ತಿಗೆ ಕೊಟ್ಟಿಲ್ಲ. ಇದನ್ನು ಎರಡೂ ಪಕ್ಷಗಳು ನೆನಪಿಟ್ಟುಕೊಳ್ಳಬೇಕು. ನಾನು ಒಂದು ವರ್ಗದ ಜನರನ್ನು ಓಲೈಸುತ್ತಿಲ್ಲ. ಎಲ್ಲರ ಪರವಾಗಿ ನಾನು ದನಿ ಎತ್ತಿದ್ದೇನೆ. ನಾನು ಸಿಎಂ ಆಗಲು ಈ ಹೋರಾಟ ಅಲ್ಲ. ನಾಡಿನ ಜನರಿಗಾಗಿ ನನ್ನ ಹೋರಾಟ, ಉತ್ತಮ ಬದುಕು ಕಟ್ಟಿಕೊಡೋದಿಕ್ಕೆ ನನ್ನ ಹೋರಾಟ. ನಮ್ಮ ಮತ ಮಾರಾಟಕಿಲ್ಲ ಎನ್ನುವ ವಾತಾವರಣವನ್ನು ರಾಜ್ಯದಲ್ಲಿ ತರುತ್ತೇವೆ. ಅಂಥಹ ವಾತಾವರಣ ಹಳ್ಳಿ ಹಳ್ಳಿಯಲ್ಲಿ ಪ್ರಾರಂಭ ಮಾಡುತ್ತೇವೆ. ಈ ಮೂಲಕ ಬಿಜೆಪಿ ಸರ್ಕಾರ ಕಿತ್ತೊಗೆಯುವ ಕೆಲಸ ಮಾಡುತ್ತೇವೆ ಎಂದಿದ್ದಾರೆ.

ಬಾಲಕನ ಸಾವು ಪ್ರಕರಣ

ಕೇಬಲ್ ಆಪರೇಟರ್‌ಗೆ 2 ವರ್ಷ ಜೈಲು

ಮೈಸೂರು, ಏ. 8– ವಿದ್ಯುತ್ ಕಂಬಕ್ಕೆ ಕೇಬಲ್ ವೈರ್ ಅಳವಡಿಸಿ, ಬಾಲಕನ ಸಾವಿಗೆ ಕಾರಣನಾದ ಕೇಬಲ್ ಆಪರೇಟರ್‌ಗೆ 2 ವರ್ಷ ಜೈಲು ಶಿಕ್ಷೆ ವಿಧಿಸಿ, ಮೈಸೂರಿನ 3ನೇ ಅಧಿಕ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಎಂ. ವಿನೋದ್ ಕುಮಾರ್ ತೀರ್ಪು ನೀಡಿದ್ದಾರೆ. ಅಲ್ಲದೇ ಮೃತ ಬಾಲಕನ ಕುಟುಂಬಕ್ಕೆ ಕೇಬಲ್ ಆಪರೇಟರ್ 2 ಲಕ್ಷ ರೂ. ಪರಿಹಾರ ನೀಡಬೇಕೆಂದು ಆದೇಶ ನೀಡಿದ್ದಾರೆ.

ವಿವರ: ಮೈಸೂರಿನ ತರಂಗ ದರ್ಶಿನಿ ಕೇಬಲ್ ಘಟಕದ ಮುಖ್ಯಸ್ಥ ಎಂ.ಎಸ್. ಚಂದ್ರಶೇಖರ್ ಅವರು ಸುಭಾಷ್‌ನಗರದಲ್ಲಿ ಕೇಬಲ್ ವೈರ್ ಅನ್ನು ವಿದ್ಯುತ್ ಕಂಬಕ್ಕೆ ಅಳವಡಿಸಿದ್ದರು. ಈ ವೈರ್‌ಅನ್ನು ಅಲ್ಲಿನ ರಾಜರಾಜೇಶ್ವರಿ ದೇವಸ್ಥಾನದ ಪಕ್ಕದಲ್ಲಿರುವ ಕನ್ನಡ ಧ್ವಜಸ್ತಂಭಕ್ಕೆ ಕಟ್ಟಿದ್ದರು. 2006ರ ಸೆಪ್ಟೆಂಬರ್ 8ರಂದು ರಾತ್ರಿ ರಾಜೇಂದ್ರನಗರ ನಿವಾಸಿ ಎಂ. ಲಕ್ಷ್ಮಣ್ ಎಂಬುವರ ಪುತ್ರ ಹೇಮಂತ್ ಕುಮಾರ್ (17) ತನ್ನ ಅಜ್ಜಿಯೊಂದಿಗೆ ದೇವಸ್ಥಾನಕ್ಕೆ ಬಂದಿದ್ದ ವೇಳೆ ಪಕ್ಕದಲ್ಲಿದ್ದ ಕನ್ನಡ ಧ್ವಜ ಸ್ಥಂಬವನ್ನು ಮುಟ್ಟಿದಾಗ ವಿದ್ಯುತ್‌ಸ್ಪರ್ಶದಿಂದ ಮೃತಪಟ್ಟಿದ್ದಾನೆ. ಕೇಬಲ್ ವೈರ್ ಅನ್ನು ಅಕ್ರಮವಾಗಿ ವಿದ್ಯುತ್ ಕಂಬ ಮತ್ತು ಕಬ್ಬಿಣದ ಧ್ವಜಸ್ತಂಭಕ್ಕೆ ಅಳವಡಿಸಲಾಗಿದ್ದು, ಕೇಬಲ್ ವೈರ್‌ಗೆ ವಿದ್ಯುತ್ ಕಂಬದಲ್ಲಿ ಹಾದು ಹೋಗಿದ್ದ ವಯರ್‌ಗಳು, ತಾಗಿ ಅದು ಕನ್ನಡ ಧ್ವಜಸ್ತಂಬಕ್ಕೂ ವಿದ್ಯುತ್ ಹರಿದಿದೆ. ಅದನ್ನು ಮುಟ್ಟಿ ಬಾಲಕ ಸಾವನ್ನಪ್ಪಿದ್ದಾನೆ.

ರಾಜ್ಯ ಸರ್ಕಾರದ ಮಟ್ಟದಲ್ಲಿ ಮಹತ್ತರ ಮಾರ್ಪಾಡು ಸಂಭವ

ಪ್ರಮುಖ ನಾಯಕರಿಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಭಿಪ್ರಾಯ ಸಂಗ್ರಹ



ಮಾಜಿ ಸಿಎಂ ಜಗದೀಶ್ ಶೆಟ್ಟರ್ ಗುರುವಾರ ನವದೆಹಲಿಯಲ್ಲಿ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದರು.

ಬೆಂಗಳೂರು, ಏ.8 (ಕೆಎಂಶಿ)–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಾಯಕತ್ವ, ಸರ್ಕಾರದ ಕಾರ್ಯ ವೈಖರಿ ಹಾಗೂ ರಾಜ್ಯದಲ್ಲಿ ಪಕ್ಷದ ಸ್ಥಿತಿ ಕುರಿತಂತೆ ಬಿಜೆಪಿ ವರಿಷ್ಠರು ರಾಜ್ಯದ ಪ್ರಮುಖ ನಾಯಕರ ಅಭಿಪ್ರಾಯ ಸಂಗ್ರಹ ಆರಂಭಿಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯ ಬಿಜೆಪಿ ಆಯ್ದ ನಾಯಕರನ್ನು ದೆಹಲಿಗೆ ಕರೆಸಿಕೊಂಡು ಪಕ್ಷ ಸಂಘಟನೆ ಮತ್ತು ಪಕ್ಷದ ಆಡಳಿತದ ಬಗ್ಗೆ ಮಾಹಿತಿ ಪಡೆಯುತ್ತಿದ್ದಾರೆ.

ಇದರ ನಡುವೆ ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್, ಕರ್ನಾಟಕದ ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಸುದೀರ್ಘ ವರದಿ ನೀಡಿದ್ದಾರೆ. ಕಳೆದ ಕೆಲವು ದಿನಗಳಿಂದ ನಾಯಕತ್ವ ಬದಲಾವಣೆ ಬಗ್ಗೆ ಪಕ್ಷದ ವಲಯಗಳಲ್ಲಿ ಕೇಳಿ ಬರುತ್ತಿದ್ದ ಮಾತುಗಳು ಇದೀಗ ದೆಹಲಿ ಅಂಗಳಕ್ಕೆ ತಲುಪಿದೆ. ಇದಕ್ಕೆ ಪುಷ್ಟಿ ನೀಡುವಂತೆ ಅಮಿತ್ ಶಾ ಅವರು ರಾಜ್ಯ ಬಿಜೆಪಿಯ ಕೆಲ ಪ್ರಮುಖ ನಾಯಕರನ್ನು ದೆಹಲಿಗೆ ಕರೆಸಿಕೊಂಡು ವಾಸ್ತವದ ಮಾಹಿತಿ ಪಡೆಯುತ್ತಿದ್ದಾರೆ.

ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರ ಜೊತೆ ನಿನ್ನೆ 30 ನಿಮಿಷಗಳ ಕಾಲ ಮುಖ್ಯಮಂತ್ರಿಯವರ ಕಾರ್ಯವೈಖರಿ, ಸರ್ಕಾರದ ನಡೆ, ಪಕ್ಷ ಸಂಘಟನೆ, ಮುಂಬರುವ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ವಿವರ ಪಡೆದಿದ್ದಾರೆ. ಅಷ್ಟೇ ಅಲ್ಲ ಬೊಮ್ಮಾಯಿ ಸಂಪುಟದಲ್ಲಿ ಸಚಿವರ ಕಾರ್ಯವೈಖರಿ ಮತ್ತು ಅವರ ನಡಾವಳಿಕೆಯ ಬಗ್ಗೆಯೂ ಮಾಹಿತಿ ಪಡೆದಿದ್ದಾರೆ. ವಿಧಾನಸಭಾ ಚುನಾವಣೆಯನ್ನು ಎದುರಿಸಲು ಜಾತಿ ಸಮೀಕರಣಕ್ಕೆ ಸಂಬಂಧಿಸಿದಂತೆ ಯಾರ ನಾಯಕತ್ವದಲ್ಲಿ ಚುನಾವಣೆಗೆ ಹೋಗಬೇಕೆಂಬುದರ ● 9ನೇ ಪುಟಕ್ಕೆ

ಕೃಷಿ ಕಾಯ್ದೆ ವಾಪಸ್‌ಗೆ ಆಗ್ರಹಿಸಿ ಏ. 21ಕ್ಕೆ ಭಾರೀ ಪ್ರತಿಭಟನೆ

ಬೆಳಗಾವಿ, ಏ. 8– ಕರ್ನಾಟಕದಲ್ಲಿ ಭೂ ಸುಧಾರಣಾ ಕಾಯ್ದೆ, ಕೃಷಿ ಮಾರುಕಟ್ಟೆ, ಜಾನುವಾರು ಹತ್ಯೆ ಕಾಯ್ದೆ, ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿಯಾಗಿ, ವಿಧಾನಮಂಡಲದಲ್ಲಿ ಅಂಗೀಕಾರ ಪಡೆದಿದ್ದು, ಇವುಗಳನ್ನು ವಾಪಸ್ ಪಡೆಯಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಪಟ್ಟುಹಿಡಿದಿದ್ದಾರೆ.

ಬೆಳಗಾವಿಯ ಸಾಹಿತ್ಯ ಭವನದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಕೋಡಿಹಳ್ಳಿ ಚಂದ್ರಶೇಖರ್, ಏಪ್ರಿಲ್ 21ರಂದು ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ರೈತರ ಬೃಹತ್ ಸಮಾವೇಶ ನಡೆಯಲಿದೆ ಎಂದರು.

26/11ರ ಮುಂಬೈ ದಾಳಿಯ ಮಾಸ್ಟರ್ ಮೈಂಡ್ ಹಫೀಜ್ ಸಯ್ಯದ್‌ಗೆ 31 ವರ್ಷ ಜೈಲುಶಿಕ್ಷೆ

ಕರಾಚಿ, ಏ. 8– ಕಳೆದ 26/11ರ ಮುಂಬೈ ಭಯೋತ್ಪಾದಕ ದಾಳಿಯ ಮಾಸ್ಟರ್ ಮೈಂಡ್ ಹಫೀಜ್ ಸಯ್ಯದ್‌ಗೆ ಪಾಕಿಸ್ತಾನದ ಭಯೋತ್ಪಾದನಾ ವಿರೋಧಿ ನ್ಯಾಯಾಲಯವು 31 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.



ಪಾಕಿಸ್ತಾನ ಮೂಲದ ಉಗ್ರ ಸಂಘಟನೆ ಜಮಾತ್ ಉದ್ ದವಾ ಮುಖ್ಯಸ್ಥ ಹಫೀಜ್ ಸಯ್ಯದ್‌ಗೆ ಎರಡು ಪ್ರಕರಣಗಳಲ್ಲಿ ಈ ಜೈಲು ಶಿಕ್ಷೆಯನ್ನು ವಿಧಿಸಲಾಗಿದೆ. ಇದರ ಜೊತೆಗೆ ಅವರ ಎಲ್ಲಾ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಕೋರ್ಟ್ ಆದೇಶಿಸಿದೆ.

ಹಫೀಜ್ ಸಯ್ಯದ್‌ಗೆ ನಿರ್ಮಿಸಿದ್ದು ಎಂದು ಹೇಳಲಾದ ಮಸೀದಿ ಮತ್ತು ಮದರಸಾವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸೂಚಿಸಲಾಗಿದೆ. ಅಲ್ಲದೇ ಭಯೋತ್ಪಾದನೆಯ ಮಾಸ್ಟರ್‌ಮೈಂಡ್‌ಗೆ 3,40,000 ದಂಡವನ್ನೂ ವಿಧಿಸಲಾಗಿದೆ.

15 ವರ್ಷಗಳ ಜೈಲು ಶಿಕ್ಷೆ: ಭಯೋತ್ಪಾದನೆಗೆ ಹಣ ಒದಗಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ 2020ರಲ್ಲಿ ಭಯೋತ್ಪಾದನಾ ವಿರೋಧಿ ನ್ಯಾಯಾಲಯವು ಹಫೀಜ್ ಸಯ್ಯದ್‌ಗೆ 15 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿತ್ತು. ಈ ಹಿಂದೆ ಪಾಕಿಸ್ತಾನದಲ್ಲಿ ಹಲವು ರೀತಿಯಲ್ಲಿ ಬಂಧನಕ್ಕೆ ಒಳಗಾಗಿರುವ ಹಫೀಜ್, ಕೆಲವೊಮ್ಮೆ ಗೃಹಬಂಧನಕ್ಕೆ ಒಳಗಾಗಿದ್ದರು. ಅದಾಗ್ಯೂ, ಭಾರತದ ವಿರುದ್ಧ ಮುಕ್ತವಾಗಿ ಪ್ರಚೋದನಕಾರಿ ಭಾಷಣಗಳನ್ನು ಮಾಡುತ್ತಾ ಓಡಾಡುತ್ತಿದ್ದನು.

2019ರಲ್ಲಿ ಹಫೀಜ್ ಸಯ್ಯದ್ ಬಂಧನ: ಕಳೆದ 2019ರಲ್ಲಿ ಪಾಕಿಸ್ತಾನದಲ್ಲಿ ಜಮಾತ್ ಉದ್ ದವಾ ಮುಖ್ಯಸ್ಥ ಹಫೀಜ್ ಸಯ್ಯದ್ ಅನ್ನು ಬಂಧಿಸಲಾಗಿತ್ತು. ಭಯೋತ್ಪಾದನಾ ನಿಗ್ರಹ ನ್ಯಾಯಾಲಯದ ಮುಂದೆ ಹಾಜರಾಗಲು ಲಾಹೋರ್‌ನಿಂದ ಗುಜ್ರಾನ್‌ವಾಲಾಗೆ ಸಯ್ಯದ್ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಪಂಜಾಬ್‌ನ ಭಯೋತ್ಪಾದನಾ ನಿಗ್ರಹ ಇಲಾಖೆ (ಸಿಟಿಡಿ) ಅವನನ್ನು ಬಂಧಿಸಿತ್ತು. ಇದಕ್ಕೂ ಮೊದಲು 2001 ರಿಂದ ಎಂಟು ● 9ನೇ ಪುಟಕ್ಕೆ

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಶಾಸಕ ಜಿ.ಟಿ.ದೇವೇಗೌಡರ ಅಭಿವೃದ್ಧಿ ಕಾರ್ಯಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ

- ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ
- ಜಿಟಿಡಿ ಜೊತೆ ಸೇರಿ ಮೈಸೂರು ವಿವಿ ಉದ್ಯೋಗಿಗಳ ಬಡಾವಣೆಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ
- ಚಾಮುಂಡೇಶ್ವರಿಯಲ್ಲಿ ನನ್ನ ಸೋಲು ಜನತೆ ನಿರ್ಧಾರವಾಗಿತ್ತು
- ಗತ ಬಾಂಧವ್ಯ ಮೆರೆದ ಸಿದ್ದರಾಮಯ್ಯ-ಜಿಟಿಡಿ: ಬೆಂಬಲಿಗರಲ್ಲಿ ಉತ್ಸಾಹ ಇಮ್ಮಡಿ

ಮೈಸೂರು, ಏ.8(ಎಸ್‌ಬಿಡಿ)– ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಶಾಸಕ ಜಿ.ಟಿ.ದೇವೇಗೌಡರು ನಡೆಸುವ ಅಭಿವೃದ್ಧಿ ಕಾರ್ಯಗಳಿಗೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಲಿಂಗಾಂಬುದಿಪಾಳ್ಯದಲ್ಲಿರುವ ಮೈಸೂರು ವಿಶ್ವವಿದ್ಯಾಲಯ ಉದ್ಯೋಗಿಗಳ ಬಡಾವಣೆಯಲ್ಲಿ ಶುಕ್ರವಾರ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿ ಮಾತನಾಡಿ, ಚಾಮುಂಡೇಶ್ವರಿ ಕ್ಷೇತ್ರದ ವಿವಿಧ ಬಡಾವಣೆಗಳಲ್ಲಿ ಶಾಸಕ ಜಿ.ಟಿ. ದೇವೇಗೌಡ ಅವರು ಅಭಿವೃದ್ಧಿ ಕೆಲಸಗಳನ್ನು ಮುತುವರ್ಜಿ ವಹಿಸಿ ಮಾಡುತ್ತಾರೆ. ಇವರ ಅಭಿವೃದ್ಧಿ ಕೆಲಸದಲ್ಲಿ ನನ್ನ ಪೂರ್ಣ ಬೆಂಬಲವಿದ್ದು, ಅಗತ್ಯವಿದ್ದರೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಾನೂ ಮಾತನಾಡುತ್ತೇನೆ ಎಂದು ಜಿಟಿಡಿ ಉಪಸ್ಥಿತಿಯಲ್ಲೇ ನುಡಿದರು.

ವಿಶ್ವವಿದ್ಯಾಲಯ ಉದ್ಯೋಗಿಗಳ ಬಡಾವಣೆ, ಲಿಂಗಾಂಬುದಿಪಾಳ್ಯ ಹಾಗೂ ಸುತ್ತಮುತ್ತಲಿನ ಬಡಾವಣೆಗಳಿಗೆ ಆದಷ್ಟು ಬೇಗ ಕಬಿನಿ ನೀರು ಕಲ್ಪಿಸಬೇಕು. ನಾನು ಶಾಸಕನಾಗಿದ್ದ ಅವಧಿಯಲ್ಲಿ ನೀರು ಕಲ್ಪಿಸಲು ಕ್ರಮಕೈಗೊಂಡಿದ್ದರೂ ಆಗಿರಲಿಲ್ಲ. ಈಗ ಜಿ.ಟಿ.ದೇವೇಗೌಡ ಶಾಸಕನಾಗಿರುವುದರಿಂದ ಮೊದಲು ನೀರಿನ ವ್ಯವಸ್ಥೆ ಮಾಡಬೇಕು. ಅಗತ್ಯವಿದ್ದರೆ ● 9ನೇ ಪುಟಕ್ಕೆ



ಮೈಸೂರು ವಿವಿ ಉದ್ಯೋಗಿಗಳ ಬಡಾವಣೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಶಾಸಕ ಜಿ.ಟಿ.ದೇವೇಗೌಡ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿದರು.

ನಾನೂ ರೆಕಾರ್ಡ್ ಮಾಡಿಸುತ್ತಿದ್ದೇನೆ...

ಮೈಸೂರು: ನನ್ನ ಹೇಳಿಕೆಯನ್ನು ರೆಕಾರ್ಡ್ ಮಾಡಿಸುತ್ತಿದ್ದೇನೆ ಎಂದು ಹೇಳುವ ಮೂಲಕ ಮಾಜಿ ಸಿಎಂ ಸಿದ್ದರಾಮಯ್ಯ, ಮಾಧ್ಯಮಗಳನ್ನು ಎಚ್ಚರಿಸಿದ್ದಾರೆ!

ಹಿಂದೂಪರ ಸಂಘಟನೆಗಳು ಮುಸ್ಲಿಂ ಟ್ರಾವೆಲ್ಸ್ ಬಳಸದಂತೆ ಹೊಸ ಅಭಿಯಾನ ಆರಂಭಿಸಿರುವ ಬಗ್ಗೆ ಹೆಲಿಪ್ಯಾಡ್ ಬಳಿ ಮಾಧ್ಯಮದವರು ಪ್ರಶ್ನಿಸಿದಾಗ ಉತ್ತರಿಸಲು ಮುಂದಾದ ಸಿದ್ದರಾಮಯ್ಯ ಥಟ್ಟನೆ ಮಾತು ನಿಲ್ಲಿಸಿ, 'ನೀವೆಲ್ಲಾ ಸ್ಟೇಟ್‌ಮೆಂಟ್‌ಗಳನ್ನು ಕಾಂಟ್ರವರ್ಸಿ ಮಾಡ್ತೀರಿ' ಎಂದರು. ಆಗ ಮಾಧ್ಯಮದವರು 'ಹಾಗೇನಿಲ್ಲ' ಎಂದರು. ಮಾತು ಮುಂದುವರೆಸಿದ ಸಿದ್ದರಾಮಯ್ಯ 'ಏನ್ ಏನಿಲ್ಲಾ ಹಿಂದೆ ಎಲ್ಲಾ ಮಾಡಿಲ್ವ, ಹಿಂದೆ ಕಾಂಟ್ರವರ್ಸಿ ಮಾಡಿದ್ದೀರಿ. ಅದೆಲ್ಲಾ ಮಾಡೋಕ್ ಹೋಗ್ಬಾರ್ದು. ಏನ್ ಹೇಳ್ತೀವಿ ಅದನ್ನು ಪೂರ್ತಿಯಾಗಿ ಸರಿಯಾಗಿ ಹಾಕಬೇಕು. ಅದಕ್ಕೆ ಎಲ್ಲವನ್ನೂ ರೆಕಾರ್ಡ್ ಮಾಡ್ಕೊಳ್ಳಿ ಎಂದು ನಮ್ಮವರಿಗೆ ಹೇಳಿದ್ದೀನಿ' ಎಂದರು.

ಇತ್ತೀಚೆಗೆ ಶಾಲಾ–ಕಾಲೇಜುಗಳಲ್ಲಿ ದುಪ್ಪಟ ಹಾಕಿಕೊಳ್ಳುವ ಸಂಬಂಧ ಸರ್ಕಾರದ ಆದೇಶದ ಬಗ್ಗೆ ಮೈಸೂರಿನಲ್ಲಿ ಪ್ರತಿಕ್ರಿಯಿಸಿದ್ದ ಸಿದ್ದರಾಮಯ್ಯ, ಈ ವಿಚಾರವಾಗಿ ಜೈನ ಸಮುದಾಯದ ಮಹಿಳೆಯರು, ಸ್ವಾಮೀಜಿಗಳನ್ನು ಉದಾಹರಿಸಿದ್ದರು. ಇದು ವಿವಾದಕ್ಕೆ ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ಇಂದು ಸಿದ್ದರಾಮಯ್ಯ ಬಹಳ ಎಚ್ಚರಿಕೆಯಿಂದ ಹೇಳಿಕೆ ನೀಡಿದ್ದಲ್ಲದೆ, ತಮ್ಮ ಸುರಕ್ಷತಾ ದೃಷ್ಟಿಯಿಂದ ತಾವೂ ರೆಕಾರ್ಡ್ ಮಾಡಿಕೊಳ್ಳುತ್ತಿರುವುದನ್ನು ಬಹಿರಂಗಪಡಿಸಿದರು.

2023ರಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದೇ ಬರುತ್ತೆ...

ಸರಗೂರು, ಏ.8(ನಾಗೇಶ್)– ಕಾಂಗ್ರೆಸ್ ಪಕ್ಷ 2023ಕ್ಕೆ ಅಧಿಕಾರಕ್ಕೆ ಬಂದೇ ಬರುತ್ತದೆ. ಆಗ ನೂತನ ತಾಲೂಕುಗಳಿಗೆ ಮೂಲ ಸೌಕರ್ಯ ಕಲ್ಪಿಸುವುದಾಗಿ ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ತಾವು ಮುಖ್ಯಮಂತ್ರಿಯಾಗಿದ್ದಾಗ ಕೊನೆಯ ಅವಧಿಯಲ್ಲಿ 53 ಹೊಸ ತಾಲೂಕು ಘೋಷಣೆ ಮಾಡಿದೆ. ಅವುಗಳಿಗೆ ಜೆಡಿಎಸ್‌ನ ಹೆಚ್.ಡಿ. ಕುಮಾರಸ್ವಾಮಿಯಾಗಲೀ, ಬಿಜೆಪಿಯ ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿಯಾಗಲೀ ತಮ್ಮ ಆಡಳಿತಾವಧಿಯಲ್ಲಿ ಮೂಲ ಸೌಲಭ್ಯ ಒದಗಿಸಲು ಮೀನಾಮೇಷ ಎಣಿಸಿದರು. ಈಗಲೂ ಅಭಿವೃದ್ಧಿ ಕಡೆಗಣಿಸುತ್ತಿದ್ದಾರೆ. 2023ಕ್ಕೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದೆ. ಆಗ ನೂತನ ತಾಲೂಕುಗಳಿಗೆ ಮೂಲ ಸೌಲಭ್ಯ ಒದಗಿಸುವ ಮೂಲಕ, ಅವುಗಳ ಅಭಿವೃದ್ಧಿಗೆ ಒತ್ತು ನೀಡುವುದಾಗಿ ಭರವಸೆ ನೀಡಿದರು.

ಸರಗೂರು ತಾಲೂಕಿನ ಮೊಳೆಯೂರು ಗ್ರಾಮದಲ್ಲಿ ಶುಕ್ರವಾರ ಕುರುಬ ಸಮಾಜದಿಂದ ಶ್ರೀಬೀರೇಶ್ವರ ಕುಮಾರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ನಿರ್ಮಿಸಲಾಗಿರುವ ಕನಕ ಭವನ ಉದ್ಘಾಟಿಸಿ, ನಂತರ ವೇದಿಕೆ ಸಮಾರಂಭದಲ್ಲಿ ಮಾತನಾಡುತ್ತಾ ನೆರೆದಿದ್ದ ಜನರಲ್ಲಿ ವಿಶ್ವಾಸ ತುಂಬಿದರು.

ಅಲ್‌ಖೈದಾ ಹೇಳಿಕೆ ಹಿಂದೆ ಆರ್‌ಎಸ್‌ಎಸ್ ಕೈವಾಡ ಆರೋಪಕ್ಕೆ ಸಚಿವ ಶ್ರೀನಿವಾಸ ಪೂಜಾರಿ ಕಿಡಿ

ಕಾಂಗ್ರೆಸ್ ಬಿಜೆಪಿಯನ್ನು ಯಾವಾಗಲೂ ಹೊಗಳಿಲ್ಲ

ಮೈಸೂರು, ಏ.8(ಆರ್‌ಕೆಬಿ)– ಅಲ್ ಖೈದಾ ಹೇಳಿಕೆ ಹಿಂದೆ ಆರ್‌ಎಸ್‌ಎಸ್ ಕೈವಾಡವಿದೆ ಎಂಬ ಆರೋಪ ವಿಚಾರಕ್ಕೆ ಸಂಬಂಧಿಸಿದಂತೆ ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಕಿಡಿಕಾರಿದ್ದಾರೆ.



ಮೈಸೂರಿನಲ್ಲಿ ಶುಕ್ರವಾರ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಬಿಜೆಪಿಯನ್ನು ಕಾಂಗ್ರೆಸ್ ಎಂದೂ ಹೊಗಳಿಲ್ಲ. ಯಾವಾಗ ಬಿಜೆಪಿ ಸರ್ಕಾರ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ ಎಂದು ಸಿದ್ದರಾಮಯ್ಯ ಮತ್ತು ಡಿ.ಕೆಶಿವಕುಮಾರ್ ಎಂದಾದರೂ ಹೇಳಿದ್ದಾರೆಯೇ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ಸರ್ವರಿಗೂ ನ್ಯಾಯ ನೀಡುವ ದಿಕ್ಕಿನಲ್ಲಿ ಕಠಿಣವಾದ ಕಾನೂನು ಸುವ್ಯವಸ್ಥೆ ಕಾಪಾಡಿಕೊಂಡು ಬಂದಿದೆ. ಹಿಜಾಬ್ ಸೇರಿದಂತೆ ಎಲ್ಲ ಪ್ರಕರಣವನ್ನು ಕಾನೂನು ಚೌಕಟ್ಟಿನಲ್ಲಿ ಬಗೆ ಹರಿಸಿದೆ. ಯಾರಿಗೂ ಆತಂಕ ಬೇಡ, ಎಲ್ಲದಕ್ಕೂ ನಾವು ಉತ್ತರ ಕೊಡಲು ಸಿದ್ಧವಿದ್ದೇವೆ ಎಂದು ಹೇಳಿದರು.

ಮುಸ್ಲಿಂ ವ್ಯಾಪಾರಿಗಳ ವಿರುದ್ಧ ವ್ಯಾಪಾರ ದಂಗಲ್ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಕೋಟಾ ಶ್ರೀನಿವಾಸ ಪೂಜಾರಿ, ಯಾರೋ ಒಬ್ಬರು ಟೀಕೆ–ಪ್ರತಿ ಟೀಕೆ ಮಾಡಿರುತ್ತಾರೆ. ಆದರೆ ಸರ್ಕಾರ ಎಲ್ಲರನ್ನೂ ಸಮಾನವಾಗಿ ತೆಗೆದುಕೊಂಡು ಹೋಗುತ್ತಿದೆ. ಇದರಲ್ಲಿ ಮೂಗು ತೂರಿಸಲು ಸರ್ಕಾರಕ್ಕೆ ಪ್ರಚಾರದ ಹುಚ್ಚು ಇಲ್ಲ. ಸರ್ಕಾರ ಜನರ ಭಾವನೆ ಅರ್ಥ ಮಾಡಿಕೊಂಡು ಆಡಳಿತ ನಡೆಸುತ್ತಿದೆ ಎಂದು ತಿಳಿಸಿದರು.

ದಿನದಿಂದ ದಿನಕ್ಕೆ ನಮ್ಮ ಜವಾಬ್ದಾರಿ ಹೆಚ್ಚುತ್ತಾ ಇದೆ. ಸಮರ್ಥ ಸಮೃದ್ಧಿ , ಶಕ್ತಿ ಶಾಲಿ, ಸ್ವಾಭಿಮಾನಿ ಭಾರತ ನಿರ್ಮಾಣಕ್ಕೆ ಮೋದಿ ಅವರು ಪ್ರಧಾನಿ ಆಗಿದ್ದಾರೆ. ನಮ್ಮ ವಿರೋಧಿಗಳು ಆಶ್ಚರ್ಯ ಪಡುವ ನಿಟ್ಟಿನಲ್ಲಿ ದೇಶ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆ. ಉಕ್ರೇನ್‌ನಿಂದ ಬಂದ ವಿದ್ಯಾರ್ಥಿ ನನ್ನ ಮನೆಗೆ ಬಂದಿದ್ದರು. ನನ್ನ ಬಳಿ ವಿದ್ಯಾರ್ಥಿನಿ ಹೇಳಿದ ಮಾತು ಹೆಮ್ಮೆ ಅನಿಸಿತು. ನಮಗೆ ಬದುಕುತ್ತೇವೆ ಎಂಬುದಕ್ಕೆ ಒಂದೇ ಒಂದು ನಂಬಿಕೆ ಇದ್ದಿದ್ದು ಭಾರತದವರು ಅಂತ. ನಾವು ಬದುಕಿ ಬರುತ್ತೇವೆ ಎಂಬ ನಂಬಿಕೆ ಇತ್ತು. ಭಾರತ ನಮ್ಮ ರಕ್ಷಣೆಗೆ ಬಂತು. ಭಾರತದ ತ್ರಿವರ್ಣ ಧ್ವಜ ನೋಡಿದ ತಕ್ಷಣ ಉಕ್ರೇನ್, ರಷ್ಯಾ ಸೈನಿಕರು ನಮ್ಮ ತಂಟೆಗೆ ಬರಲಿಲ್ಲ ಎಂದು ವಿದ್ಯಾರ್ಥಿನಿ ಹೇಳಿದ್ದನ್ನು ಕೇಳಿದರೆ ನಾವು ಹೆಮ್ಮೆಪಡಲೇಬೇಕು ಎಂದು ಹೇಳಿದರು. ರಾಷ್ಟ್ರದಲ್ಲಾದ ಬದಲಾವಣೆ ಗಮನಿಸಿದರೆ ನಮಗೆ ಹೆಮ್ಮೆ ಎನಿಸುತ್ತದೆ. ಕಾಶ್ಮೀರದ ಈಗಿನ ಸ್ಥಿತಿ ನಮಗೆ ಆಶ್ಚರ್ಯವಾಗುತ್ತದೆ. ಏಕೆಂದರೆ ಅಲ್ಲಿ ತ್ರಿವರ್ಣ ಧ್ವಜ ರಾರಾಜಿಸುತ್ತಿದೆ. ರಾಜ್ಯ, ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆ ಜನರಿಗೆ ತಲುಪಿಸುವ ಜವಾಬ್ದಾರಿ ನಮ್ಮದು ಎಂದು ಸಚಿವರು ತಿಳಿಸಿದರು.



ವಿಶ್ವ ಆರೋಗ್ಯ ದಿನದ ಅಂಗವಾಗಿ ಮೈಸೂರಿನ ಕೊಲ್ಲಾಪುರದ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಮೈಸೂರು ಯುವ ಬಳಗದ ವತಿಯಿಂದ ಮುಡಾ ಸದಸ್ಯ ನವೀನ್‌ಕುಮಾರ್ ನೇತೃತ್ವದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಮಧುಮೇಹ, ರಕ್ತದೊತ್ತಡ ಪರೀಕ್ಷೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಕೊಲ್ಲಾಪುರ ಮಹಾಲಕ್ಷ್ಮಿ ದೇವಸ್ಥಾನದ ಅಧ್ಯಕ್ಷರಾದ ನಾಗರಾಜ್, ಸುದರ್ಶನ್, ಜಗದೀಶ್, ಜವರಪ್ಪ, ನಾಗಣ್ಣ ಇತರರು ಉಪಸ್ಥಿತರಿದ್ದರು.

ನಾಳೆ 'ಸಂಗೀತದೊಂದಿಗೆ ಒಂದು ಸಂಜೆ'

ಹಳೆಯ ಕನ್ನಡ, ಹಿಂದಿ ಚಿತ್ರಗೀತೆಗಳ ಗಾಯನ



ಮೈಸೂರು, ಏ.8(ಆರ್‌ಕೆಬಿ)– ಮೈಸೂರಿನ ವಿ.ಜಾರ್ಜ್ ಪ್ರಭಾಕರ್ ಆರ್ಕೆಸ್ಟ್ರಾ ಮತ್ತು ಫಜಲ್ ತಂಡದ 40ನೇ ವಾರ್ಷಿಕೋತ್ಸವದ ಅಂಗವಾಗಿ ಏ.10ರಂದು ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ 'ಸಂಗೀತದೊಂದಿಗೆ ಒಂದು ಸಂಜೆ' ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ವಿ.ಜಾರ್ಜ್ ಪ್ರಭಾಕರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಳೆಯ ಕನ್ನಡ ಮತ್ತು ಹಿಂದಿ ಚಲನಚಿತ್ರ ಗೀತೆಗಳನ್ನು ಯಾವುದೇ ಕರೋಕೆ ಸಂಗೀತ ಬಳಸದೆ ಸಕ್ರಿಯ ಸಂಗೀತದೊಂದಿಗೆ ಹಾಡಲಾಗುವುದು ಎಂದು ತಿಳಿಸಿದರು.

ಇದೇ ವೇಳೆ ಮಾತನಾಡಿದ ಕಲಾವಿದ ಕೃಷ್ಣಮೂರ್ತಿ, ಕರೋಕೆ ಹಾವಳಿಯಿಂದಾಗಿ ಲೈವ್ ಸಂಗೀತಗಾರರಿಗೆ ಮತ್ತು ಲೈವ್ ಸಂಗೀತದೊಂದಿಗೆ ಹಾಡುವ ಆರ್ಕೆಸ್ಟ್ರಾ ಗಾಯಕರಿಗೆ ತೊಂದರೆ ಉಂಟಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಆರ್ಕೆಸ್ಟ್ರಾ ತಂಡಗಳಲ್ಲಿ ಅಂದು ಸೇವಾ ಮನೋಭಾವ ಇರುತ್ತಿತ್ತು ಆದರೆ ಇಂದು ಆ ಮನೋಭಾವ ಇಲ್ಲದಂತಾಗಿದೆ. ಹೀಗಾಗಿಯೇ ಕರೋಕೆ ಸಂಸ್ಕೃತಿ ಬೆಳೆಯುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ತಂಡದ ಕೆ.ಎಲ್.ಹರೀಶ್‌ಗೌಡ, ಕುಮಾರಸ್ವಾಮಿ, ಪ್ರದೀಪ್ ಉಪಸ್ಥಿತರಿದ್ದರು.


ಇಂದು ಮೈಸೂರು ಬಿವಿಬಿಯಲ್ಲಿ ತ್ಯಾಗರಾಜ, ಹರಿದಾಸ ಆರಾಧನಾ ಮಹೋತ್ಸವ

ಮೈಸೂರು, ಏ. 8– ಭಾರತೀಯ ವಿದ್ಯಾಭವನ (ಬಿವಿಬಿ), ಮೈಸೂರು ಕೇಂದ್ರ ಮತ್ತು ಕಲಾಭಾರತಿ ಹಾಗೂ ಭಾರತೀಯ ವಿದ್ಯಾ ಭವನ ಶಾಲೆಗಳ ಸಂಯುಕ್ತ ಆಶ್ರಯದಲ್ಲಿ ನಾಳೆ (ಏ. 9) ಬೆಳಗ್ಗೆ 9.30 ಗಂಟೆಗೆ ಭಾರತೀಯ ವಿದ್ಯಾ ಭವನದ ವೈ.ಟಿ. ತಾತಾಚಾರಿ ಸಭಾಂಗಣದಲ್ಲಿ ತ್ಯಾಗರಾಜ, ಹರಿದಾಸ ಆರಾಧನಾ ಮಹೋತ್ಸವ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿವಿಬಿ, ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ. ಗಣಪತಿ ಅವರು ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸ್ವರಸಂಕುಲ ಸಂಗೀತ ಶಾಲೆ ನಿರ್ದೇಶಕ ಪಂಡಿತ್ ವೀರಭದ್ರಯ್ಯ ಹಿರೇಮಠ್ ಭಾಗವಹಿಸುವರು. ಈ ವೇಳೆ ಬಿವಿಬಿ ಗೌರವ ಕಾರ್ಯದರ್ಶಿ ಪಿ.ಎಸ್. ಗಣಪತಿ, ಖಜಾಂಚಿ ಪ್ರೊ. ಎ.ಟಿ. ಭಾಷ್ಯಂ ಉಪಸ್ಥಿತರಿರುವರು. ಕಾರ್ಯಕ್ರಮದಲ್ಲಿ ಸ್ವರಸಂಕುಲ ಸಂಗೀತ ಶಾಲೆ ನಿರ್ದೇಶಕ ಪಂಡಿತ್ ವೀರಭದ್ರಯ್ಯ ಹಿರೇಮಠ್ ಅವರನ್ನು ಸನ್ಮಾನಿಸಲಾಗುವುದು.


ಕಲಾಭಾರತಿ ಹಾಗೂ ಭಾರತೀಯ ವಿದ್ಯಾಭವನ ಶಾಲೆಯ ವಿದ್ಯಾರ್ಥಿಗಳಿಂದ ದೇವತಾಪೂಜೆ, ಪಿಳ್ಳಾರಿ ಗೀತೆಗಳ ಗಾಯನ, ವಿದುಷಿ ಗಾಯತ್ರಿ ಸತ್ಯನಾರಾಯಣ ಅವರ ಶಿಷ್ಯ ವೃಂದದವರಿಂದ ತ್ಯಾಗರಾಜರ ಪಂಚರತ್ನ ಕೃತಿಗಳ ಗೋಷ್ಠಿಗಾಯನ, ಭರತನಾಟ್ಯ ಶಿಕ್ಷಕಿ ವಿದುಷಿ ಮೇಘನಾ ಅವರಿಂದ ಭರತನಾಟ್ಯ, ಭಾರತೀಯ ವಿದ್ಯಾಭವನ ಶಾಲೆಯ ವಿದ್ಯಾರ್ಥಿಗಳಿಂದ ಹರಿದಾಸರ ದೇವರ ನಾಮಗಳ ಹಾಡುಗಾರಿಕೆ, ಭಾರತೀಯ ವಿದ್ಯಾಭವನ ಶಾಲೆಯ ವಿದ್ಯಾರ್ಥಿನಿಯರಿಂದ ತ್ಯಾಗರಾಜರ ಉತ್ಸವ ಸಂಪ್ರದಾಯ ಕೃತಿಗಳ ಗಾಯನ ನಡೆಯಲಿದೆ.

ಕುಮಾರ್ ನಿಧನ



ಮೈಸೂರು, ಏ.8– ಮೈಸೂರಿನ ಯರಗನಹಳ್ಳಿ ನಿವಾಸಿ ಕುಮಾರ್(50) ಅವರು ಗುರುವಾರ ನಿಧನರಾದರು. ಮೃತರು ಪತ್ನಿ ಲಕ್ಷ್ಮೀ, ಪುತ್ರರಾದ ಕಿರಣ್, ವರುಣ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ಸ್ವಗ್ರಾಮ ಸುತ್ತೂರಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ದೇವಿರಮ್ಮ



ಮೈಸೂರು, ಏ.8– ಮೈಸೂರಿನ ಮಹದೇಶ್ವರ ಬಡಾವಣೆ ನಿವಾಸಿ ಲೇಟ್ ನಿಂಗಯ್ಯ ಅವರ ಪತ್ನಿ, ಕೆ.ಆರ್.ಆಸ್ಪತ್ರೆ ನಿವೃತ್ತ ನೌಕರರಾದ ದೇವಿರಮ್ಮ(85) ಗುರುವಾರ ನಿಧನರಾದರು.

ಮೃತರು ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು(ಏ.8) ಮಧ್ಯಾಹ್ನ 12.30ಕ್ಕೆ ಗೋಕುಲಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಮಕೃಷ್ಣನಗರದಲ್ಲಿ ಅನಧಿಕೃತ ಶೆಡ್‌ಗಳು ನೆಲಸಮ

50 ಕೋಟಿ ರೂ. ಮೌಲ್ಯದ 2 ಎಕರೆ ಜಾಗ ಮುಡಾ ವಶಕ್ಕೆ





ಮೈಸೂರು, ಏ.8(ಆರ್‌ಕೆ)– ಮೈಸೂರಿನ ರಾಮಕೃಷ್ಣನಗರದಲ್ಲಿ ಒತ್ತುವರಿ ಮಾಡಿ ಅನಧಿಕೃತವಾಗಿ ತಲೆಎತ್ತಿದ್ದ 25ಕ್ಕೂ ಹೆಚ್ಚು ಶೆಡ್ ಹಾಗೂ ಪೆಟ್ಟಿಗೆ ಅಂಗಡಿಗಳನ್ನು ನೆಲಸಮಗೊಳಿಸಿದ ಮುಡಾ ಅಧಿಕಾರಿಗಳು ಸುಮಾರು 50 ಕೋಟಿ ರೂ. ಬೆಲೆಬಾಳುವ 2 ಎಕರೆ ಜಾಗವನ್ನು ಶುಕ್ರವಾರ ವಶಕ್ಕೆ ಪಡೆದಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರ ನಿರ್ದೇಶನದಂತೆ ಆಯುಕ್ತ ಡಾ. ಡಿ.ಬಿ.ನಟೇಶ್ ಅವರ ನೇತೃತ್ವದಲ್ಲಿ ಮೈಸೂರಿನ ರಾಮಕೃಷ್ಣನಗರದ ಶ್ರೀ ರಾಮಕೃಷ್ಣ ಪರಮಹಂಸ ಸರ್ಕಲ್ ಸಮೀಪ ಉಪ ನೋಂದಣಾಧಿಕಾರಿ ಕಚೇರಿ ಹಾಗೂ ಮುಡಾ ಕಾಂಪ್ಲೆಕ್ಸ್ ಎದುರಿನಲ್ಲಿ ಮುಡಾ ಆಸ್ತಿಯನ್ನು ಒತ್ತುವರಿ ಮಾಡಿ ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್‌ಗಳು ಮತ್ತು ಅಂಗಡಿ ಮುಂಗಟ್ಟುಗಳನ್ನು ಜೆಸಿಬಿ ಮೂಲಕ ನೆಲಸಮಗೊಳಿಸಿ ಅಲ್ಲಿ ಸ್ವಾಧೀನಾನುಭವದಲ್ಲಿದ್ದವರನ್ನು ಅಧಿಕಾರಿಗಳು ತೆರವುಗೊಳಿಸಿದರು.

> ಮುಡಾ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ನಂತರ ಈವರೆಗೆ 60 ಎಕರೆ ಭೂಮಿ ಹಾಗೂ 120 ನಿವೇಶನ ಸೇರಿದಂತೆ ಪ್ರಾಧಿಕಾರದ ಸುಮಾರು 700 ಕೋಟಿ ರೂ. ಮೌಲ್ಯದ ಆಸ್ತಿಯನ್ನು ರಕ್ಷಿಸಿದ್ದೇನೆ.
> -ಡಾ. ಡಿ.ಬಿ. ನಟೇಶ್, ಮುಡಾ ಆಯುಕ್ತ



ಇಂದು ಮುಂಜಾನೆ 6 ಗಂಟೆಯಿಂದ ಮಧ್ಯಾಹ್ನ 1.30 ಗಂಟೆವರೆಗೂ 4 ಜೆಸಿಬಿ, 8 ಟ್ರಾಕ್ಟರ್‌ಗಳು, 25ಕ್ಕೂ ಹೆಚ್ಚು ಗ್ಯಾಂಗ್‌ಮನ್‌ಗಳು ಕಾರ್ಯಾಚರಣೆ ನಡೆಸಿದರು.

ಮುಡಾ ಆಯುಕ್ತ ಡಾ. ನಟೇಶ್ ಅವರೇ ಖುದ್ದು ಹಾಜರಿದ್ದು, ತೆರವು ಕಾರ್ಯಾಚರಣೆ ನಡೆಸಿ 2.05 ಎಕರೆ ಪ್ರದೇಶದ ಬೆಲೆಬಾಳುವ ಆಸ್ತಿಯನ್ನು ಪ್ರಾಧಿಕಾರದ ವಶಕ್ಕೆ ಪಡೆದರು.

ಸದರಿ ಜಾಗದಲ್ಲಿ ಅನಧಿಕೃತ ವ್ಯಕ್ತಿಗಳು ಶೆಡ್‌ಗಳನ್ನು ನಿರ್ಮಿಸಿ ವಾಸವಿದ್ದರೆ, ಕೆಲವರು ಬೇರೆಯವರಿಗೆ ಬಾಡಿಗೆಗೆ ನೀಡಿದ್ದರು, ಅಲ್ಲದೇ ಸುತ್ತ ತಾತ್ಕಾಲಿಕ ಅಂಗಡಿಗಳನ್ನು ನಿರ್ಮಿಸಿ ಜೆರಾಕ್ಸ್ ಅಂಗಡಿ, ಡೀಡ್ ರೈಟರ್ ಕಚೇರಿ, ಛಾಪಾ ಕಾಗದದ ಅಂಗಡಿ, ಕಂಪ್ಯೂಟರ್ ಟೈಪಿಂಗ್ ಸೆಂಟರ್ ವಹಿವಾಟು ನಡೆಸುತ್ತಿದ್ದವು.

ತೆರವು ಕಾರ್ಯಾಚರಣೆ ವೇಳೆ ಅಲ್ಲಿ ವಾಸಿಸುತ್ತಿದ್ದವರು ವಾಗ್ವಾದಕ್ಕಿಳಿದು ಈ ಹಿಂದೆ ಭೂ ಮಾಲೀಕರು 5 ರೂ., 10 ರೂ., ಛಾಪಾ ಕಾಗದದಲ್ಲಿ ಬರೆದುಕೊಟ್ಟಿರುವ ನೋಂದಣಿ ರಹಿತ ಪತ್ರಗಳನ್ನು ತೋರಿಸಿ ತಾವು ಖರೀದಿಸಿರುವುದಾಗಿ ವಾದಿಸಿದರಾದರೂ ಭೂ ಸ್ವಾಧೀನ ಪಡಿಸಿಕೊಂಡ ಜಾಗದಲ್ಲಿ ಒತ್ತುವರಿ ಮಾಡಿ ಸ್ವಾಧೀನಾನುಭವದಲ್ಲಿರುವುದು ಕಾನೂನು ಬಾಹಿರ ಎಂದು ಮುಡಾ ಆಯುಕ್ತರು ಎಚ್ಚರಿಕೆ ನೀಡಿದರು.

ದಟ್ಟಗಳ್ಳಿ 2ನೇ ಹಂತದ ವಸತಿ ಬಡಾವಣೆಗಾಗಿ 1986–87ನೇ ಸಾಲಿನಲ್ಲಿ ಸಿಐಟಿಬಿಯಿಂದ ದಟ್ಟಗಳ್ಳಿ ಗ್ರಾಮದ ಸರ್ವೇ ನಂಬರ್ 26/1ಮತ್ತು 28/2ಬಿಯಲ್ಲಿ ಒಟ್ಟು 2 ಎಕರೆ 5 ಗುಂಟೆ ಜಮೀನನ್ನು 4 ಮತ್ತು 6 ಅಧಿಸೂಚನೆ ಹೊರಡಿಸಿ ಭೂ ಸ್ವಾಧೀನಪಡಿಸಿಕೊಂಡು ಅದರ ಮಾಲೀಕ ಚಿಕ್ಕರೇವಣಪ್ಪ ಎಂಬುವರಿಗೆ ಪರಿಹಾರದ ಹಣವನ್ನು ಪಾವತಿಸಲಾಗಿದೆ ಎಂದು ಮುಡಾ ಆಯುಕ್ತ ಡಾ.ಡಿ.ಬಿ. ನಟೇಶ್ ತಮ್ಮೊಂದಿಗೆ ವಾಗ್ವಾದಕ್ಕಿಳಿದವರಿಗೆ ಮನವರಿಕೆ ಮಾಡಿಕೊಟ್ಟರು.

ಈ ನಡುವೆ 1985–86ರಲ್ಲಿ ಸುಮಾರು 45 ಮಂದಿ, ಭೂ ಮಾಲೀಕ ಚಿಕ್ಕ ರೇವಣಪ್ಪ ಅವರಿಂದ 5, 10 ರೂ. ಛಾಪಾ ಕಾಗದದಲ್ಲಿ ಜಾಗವನ್ನು ಖರೀದಿಸಲು ಅಗ್ರಿಮೆಂಟ್ ಮಾಡಿಕೊಂಡಿದ್ದು, ಆ ದಾಖಲಾತಿ ನೋಂದಣಿಯಾಗಿಲ್ಲದ ಕಾರಣ ಅವು ಸಿಂಧುವಾಗುವುದಿಲ್ಲ ಎಂದು ಅವರು ತಿಳಿಸಿದರು.


ಮಾಲೀಕರು ಕಾಲವಾದ ನಂತರ ಅವರು ಬರೆದುಕೊಟ್ಟಿದ್ದರು ಎನ್ನಲಾದ ಅನ್‌ರಿಜಿಸ್ಟರ್ಡ್ ಪತ್ರ ಗಳನ್ನಿರಿಸಿಕೊಂಡು ಸದರಿ ಜಾಗದಲ್ಲಿ ತಾತ್ಕಾಲಿಕ ಶೆಡ್ ನಿರ್ಮಿಸಿ ವಾಸಿಸುತ್ತಿದ್ದರಲ್ಲದೇ ಕೆಲವರು ಬಾಡಿಗೆಗೆ ನೀಡಿದ್ದಾರೆ. ಈ ಹಿಂದೆಯೂ ಮುಡಾದಿಂದ ತೆರವು ಕಾರ್ಯಾಚರಣೆಗೆ ಪ್ರಯತ್ನ ನಡೆದಿತ್ತು. ಬೇರೆ ಬೇರೆ ಕಾರಣಗಳಿಂದಾಗಿ ವಿಳಂಬವಾಗಿತ್ತು. ಇದೀಗ ಅನಿವಾರ್ಯವಾಗಿ ತೆರವುಗೊಳಿಸಬೇಕಾಯಿತು ಎಂದು ಆಯುಕ್ತರು ತಿಳಿಸಿದರು.

ಮುಡಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಶಂಕರ, ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳಾದ ಸುನೀಲ್, ಮೋಹನ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ನಾಗೇಶ್, ಕಿರಣ್, ಶಿವಣ್ಣ ಮಹೇಶ್, ಭಾಸ್ಕರ್, ವಿಶೇಷ ಭೂ ಸ್ವಾಧೀನಾಧಿಕಾರಿ ಹರ್ಷ ಹಾಗೂ ಸಿಬ್ಬಂದಿ ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಷಣ್ಮುಗ ವರ್ಮ ನೇತೃತ್ವದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆಗೆ ಸೂಕ್ತ ಬಂದೋಬಸ್ತ್ ಮಾಡಿದ್ದರು.

ಮೈಸೂರಿಗೆ ಮರಳಿದ ಮಹದೇಶ್: ಸದ್ಯದಲ್ಲೇ ರಾಜಕೀಯ ನಿರ್ಧಾರ

ಮೈಸೂರು, ಏ.8– ಕೊಲೆ ಪ್ರಕರಣವೊಂದರಲ್ಲಿ ನ್ಯಾಯಾಲಯದಿಂದ ಖುಲಾಸೆಗೊಂಡ ಮೈಸೂರಿನ ಮಾಜಿ ಕಾರ್ಪೊರೇಟರ್ ಸಿ. ಮಹದೇಶ್ ಬಳ್ಳಾರಿ ಜೈಲಿನಿಂದ ಬಿಡುಗಡೆ ನಂತರ ಶುಕ್ರವಾರ ಮೈಸೂರಿಗೆ ಮರಳಿದ್ದಾರೆ.

ಇಂದು ಸಂಜೆ 5.40ರ ವೇಳೆಗೆ ಮೈಸೂರಿನ ಒಂಟಿಕೊಪ್ಪಲಿನ 3ನೇ ಮುಖ್ಯರಸ್ತೆಯ ಲ್ಲಿರುವ ತಮ್ಮ ನಿವಾಸಕ್ಕೆ ಮಹದೇಶ ಆಗ ಮಿಸಿದರು. ಈ ವೇಳೆ ಅವರ ಬೆಂಬಲಿಗರು ಭಾರೀ ಸಂಖ್ಯೆಯಲ್ಲಿ ನೆರೆದಿದ್ದರು.




ಈ ವೇಳೆ ಮಾಧ್ಯಮದೊಂದಿಗೆ ಮಾತ ನಾಡಿದ ಸಿ.ಮಹದೇಶ್, ಆರು ವರ್ಷ ಜೈಲಿನಲ್ಲಿದ್ದೆ ನಾನು ನನ್ನ ಸಹೋದರ ಮಂಜು ಮತ್ತು ಇತರರನ್ನು ನಿರಪರಾಧಿಗಳೆಂದು ಕೋರ್ಟ್ ಬಿಡುಗಡೆ ಮಾಡಿದೆ. ಈ ಕೇಸ್ ಬಗ್ಗೆ ನಮಗೆ ಏನೇನು ಗೊತ್ತಿಲ್ಲ. ಒಂದು ಕೇಸ್‌ನಲ್ಲಿ ನಮಗೆ ಕೋರ್ಟ್ ಎರಡು ಜೀವಾವಧಿ ಶಿಕ್ಷೆ ವಿಧಿಸಿತು. ಆ ಕೇಸ್‌ನಲ್ಲಿ ನಿರಪರಾಧಿಗಳು ಎಂದು ಕೋರ್ಟ್ ತೀರ್ಪು ನೀಡಿದೆ. ನಮ್ಮ ಮೇಲೆ ಕೋಕಾ ಕಾಯ್ದೆಯಡಿ ಯಲ್ಲಿ ಕೇಸ್ ಹಾಕಿದ್ದರು. ಈ ಕೇಸ್‌ನಲ್ಲಿ ಬೇರೆ ಜನಾಂಗದವರು ಬೇರೆ ರಾಜಕೀಯ ಪಕ್ಷದವರು ನಮ್ಮನ್ನು ಸಿಕ್ಕಿಸಿದ್ದಾರೆ. ನಾನು ಎರಡು ಬಾರಿ ಕಾರ್ಪೊರೇಟರ್ ಆಗಿ ಒಳ್ಳೆ ಕೆಲಸ ಮಾಡಿದ್ದೆ. ಅದಕ್ಕಾಗಿ ಜನರು ನನ್ನ ಪತ್ನಿ ಶ್ರೀಮತಿ ಭಾಗ್ಯ ಅವರನ್ನು ಗೆಲ್ಲಿಸಿದ್ದರು. ಮುಂದಿನ ವಾರ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರನ್ನು ಭೇಟಿ ಮಾಡುತ್ತೇನೆ. ಅವರು ಕೈಗೊಳ್ಳುವ ನಿರ್ಧಾರ ಹಾಗೂ ಜೆಡಿಎಸ್ ಕಾರ್ಯಕರ್ತರು ಮತ್ತು ಕ್ಷೇತ್ರದ ಜನರು ನೀಡುವ ಸಲಹೆಯಂತೆ ಮುಂದಿನ ರಾಜಕೀಯ ನಿರ್ಧಾರ ಕೈಗೊಳ್ಳುತ್ತೇನೆ ಎಂದು ಹೇಳಿದರು.

ಮನ್ ಕಿ ಬಾತ್: ಸಾರ್ವಜನಿಕರ ಸಲಹೆಗೆ ಪ್ರಧಾನಿ ಮೋದಿ ಆಹ್ವಾನ

ಬೆಂಗಳೂರು, ಏ. 8– ಜನಪ್ರಿಯ ರೇಡಿಯೋ ಕಾರ್ಯಕ್ರಮ 'ಮನ್ ಕಿ ಬಾತ್'ಗಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸಲಹೆಗಳನ್ನು ಆಹ್ವಾನಿಸಿದ್ದಾರೆ. ತಿಂಗಳಿಗೆ ಒಮ್ಮೆ ಪ್ರಸಾರವಾಗುವ ಮನ್ ಕಿ ಬಾತ್ ಕಾರ್ಯಕ್ರಮದ 88ನೇ ಸಂಚಿಕೆ ಏಪ್ರಿಲ್ 24 ರಂದು ಮನ್ ಕಿ ಬಾತ್ ಪ್ರಸಾರವಾಗಲಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿಯವರು ಸಾರ್ವಜನಿಕರಿಂದ ಸಲಹೆಗಳ ಆಹ್ವಾನಿಸಿದ್ದಾರೆ.

ಈ ಬಾರಿಯ ಕಾರ್ಯಕ್ರಮಕ್ಕೆ ಪ್ರಧಾನಿ ಮೋದಿಯವರು ವಿಶೇಷ ವಿಷಯವೊಂದನ್ನು ಆರಿಸಿಕೊಂಡಿದ್ದು, ತಳಮಟ್ಟದಲ್ಲಿ ಬದಲಾವಣೆಗೆ ದುಡಿಯುತ್ತಿರುವವರು ಹಾಗೂ ಅವಿಶ್ರಾಂತ ಶ್ರಮಿಸುತ್ತಿರುವವರ ಬಗ್ಗೆ ಮಾತನಾಡಿದ್ದಾರೆ. 'ನಿಮಗೂ ಅಂಥ ಸ್ಫೂರ್ತಿದಾಯಕ ಚೇತನಗಳ ವಿವರ ತಿಳಿದಿದ್ದರೆ ನನ್ನ ಗಮನಕ್ಕೆ ತನ್ನಿ' ಎಂದು ಮೋದಿ ಕೋರಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಮನ್ ಕಿ ಬಾತ್‌ಗಾಗಿ ಮಾಹಿತಿ ನೀಡಲು ಇಚ್ಛಿಸುವವರು ನಮೋ ಆ್ಯಪ್ ಅಥವಾ MyGov ಆ್ಯಪ್‌ಗಳ (ವೆಬ್‌ಸೈಟ್) ಮೂಲಕ ತಮ್ಮ ಅನಿಸಿಕೆ ಹಂಚಿಕೊಳ್ಳಬಹುದು. 1800–11–7800 ಟೋಲ್‌ಫ್ರೀ ಸಂಖ್ಯೆಗೆ ಕರೆ ಮಾಡಿ ಮೆಸೇಜ್ ರೆಕಾರ್ಡ್ ಮಾಡಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.04.2022 ಶನಿವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ಅಷ್ಟಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಭಾರತೀಯ ಜೈನ್ ಮಿಲನ್, ವಲಯ–8 :** ಜಿನ ಭಜನಾ ರಾಜ್ಯ ಮಟ್ಟದ ಸ್ಪರ್ಧೆ, ಉದ್ಘಾಟನೆ : ಶ್ರೀ ಕ್ಷೇತ್ರ ಕನಕಗಿರಿ ಶ್ರೀ ಭುವನಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀಮತಿ ತ್ರಿಶಿಕಾ ಯದುವೀರ ಒಡೆಯರ್, ಮೈಕ್ರೋ ಲ್ಯಾಬ್ಸ್ ವ್ಯವಸ್ಥಾಪಕ ನಿರ್ದೇಶಕ ದಿಲೀಪ್ ಸುರಾನಾ, ಉಪಸ್ಥಿತರು : ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ವೀರ್ ಧರ್ಮಸ್ಥಳ ಸುರೇಂದ್ರಕುಮಾರ್, ಉಪಾಧ್ಯಕ್ಷೆ ವೀರಾಂಗನಾ ಅನಿತಾ ಸುರೇಂದ್ರಕುಮಾರ್, ಬೆಂಗಳೂರು ವಲಯ–8ರ ಅಧ್ಯಕ್ಷ ವೀರ್ ಪುಷ್ಪರಾಜ್ ಜೈನ್, ಸ್ಥಳ:ಕಲಾಮಂದಿರ, ವಿನೋಬಾ ರಸ್ತೆ, ಬೆಳಗ್ಗೆ 9.30ಕ್ಕೆ

■ **ಭಾರತೀಯ ವಿದ್ಯಾ ಭವನ :** ತ್ಯಾಗರಾಜ, ಹರಿದಾಸ ಆರಾಧನಾ ಮಹೋತ್ಸವ, ಅಧ್ಯಕ್ಷತೆ : ಬಿವಿಬಿ, ಮೈಸೂರು ಕೇಂದ್ರ ಅಧ್ಯಕ್ಷ ಕೆ.ಬಿ. ಗಣಪತಿ, ಮುಖ್ಯ ಅತಿಥಿಗಳು : ಸ್ವರಸಂಕುಲ ಸಂಗೀತ ಶಾಲೆ ನಿರ್ದೇಶಕ ಪಂಡಿತ್ ವೀರಭದ್ರಯ್ಯ ಹಿರೇಮಠ್, ಉಪಸ್ಥಿತರು : ಬಿವಿಬಿ ಕಾರ್ಯದರ್ಶಿ ಪಿ.ಎಸ್. ಗಣಪತಿ, ಖಜಾಂಚಿ ಪ್ರೊ. ಎ.ಟಿ. ಭಾಷ್ಯಂ, ಕಲಾಭಾರತಿ ಹಾಗೂ ಭಾರತೀಯ ವಿದ್ಯಾಭವನ ಶಾಲೆಯ ವಿದ್ಯಾರ್ಥಿಗಳಿಂದ ದೇವತಾಪೂಜೆ, ಪಿಳ್ಳಾರಿ ಗೀತೆಗಳ ಗಾಯನ, ಸ್ವರಸಂಕುಲ ಸಂಗೀತ ಶಾಲೆ ನಿರ್ದೇಶಕ ಪಂಡಿತ್ ವೀರಭದ್ರಯ್ಯ ಹಿರೇಮಠ್ ಅವರಿಗೆ ಸನ್ಮಾನ, ವಿದುಷಿ ಗಾಯತ್ರಿ ಸತ್ಯನಾರಾಯಣ ಅವರ ಶಿಷ್ಯ ವೃಂದದವರಿಂದ ತ್ಯಾಗರಾಜರ ಪಂಚರತ್ನ ಕೃತಿಗಳ ಗೋಷ್ಠಿಗಾಯನ, ಭರತನಾಟ್ಯ ಶಿಕ್ಷಕಿ ವಿದುಷಿ ಮೇಘನಾ ಅವರಿಂದ ಭರತನಾಟ್ಯ, ಭಾರತೀಯ ವಿದ್ಯಾಭವನ ಶಾಲೆಯ ವಿದ್ಯಾರ್ಥಿಗಳಿಂದ ಹರಿದಾಸರ ದೇವರ ನಾಮಗಳ ಹಾಡುಗಾರಿಕೆ, ಭಾರತೀಯ ವಿದ್ಯಾಭವನ ಶಾಲೆಯ ವಿದ್ಯಾರ್ಥಿನಿಯರಿಂದ ತ್ಯಾಗರಾಜರ ಉತ್ಸವ ಸಂಪ್ರದಾಯ ಕೃತಿಗಳ ಗಾಯನ, ಸ್ಥಳ: ವೈ.ಟಿ. ತಾತಾಚಾರಿ ಸಭಾಂಗಣ, ಭಾರತೀಯ ವಿದ್ಯಾ ಭವನ, ಬೆಳಗ್ಗೆ 9.30 ರಿಂದ.

■ **ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ :** ಔಷಧ ವಿಜ್ಞಾನಗಳು ಕುರಿತು ರಾಷ್ಟ್ರೀಯ ಸಮ್ಮೇಳನ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ :** 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ಬೆಳಗ್ಗೆ 10 ರಿಂದ ಶ್ರೀಮತಿ ಭಾಗ್ಯಮ್ಮ ಮತ್ತು ಸಂಗಡಿಗರಿಂದ ಭಜನೆ, ಸಂಜೆ 6 ರಿಂದ ವಿದುಷಿ ಶ್ರೀಮತಿ ಎಂ.ಆರ್. ಸುಧಾ ಮತ್ತು ವೃಂದದವರಿಂದ ಶಾಸ್ತ್ರೀಯ ಸಂಗೀತ ಗಾಯನ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ಮೈಸೂರು ಮೆಡಿಕಲ್ ಕಾಲೇಜು ಅಲ್ಯೂಮ್ನಿ ಅಸೋಸಿಯೇಷನ್ :** ಮಾ ಉತ್ಸವ, ಬೆಳಗ್ಗೆ 10ಕ್ಕೆ ವೈಜ್ಞಾನಿಕ ಕಾರ್ಯಕ್ರಮ, ಉದ್ಘಾಟನೆ : ವೈದ್ಯಕೀಯ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕರಾದ ಡಾ. ಆರ್. ಸೀತಾಲಕ್ಷ್ಮಿ, ಅಧ್ಯಕ್ಷತೆ : ಮಾ ಅಧ್ಯಕ್ಷ ಡಾ. ಬಿ.ಎನ್. ಆನಂದರವಿ, ಸಂಜೆ 5.15ಕ್ಕೆ ಡೈನಿಂಗ್ ಹಾಲ್ ಉದ್ಘಾಟನಾ ಸಮಾರಂಭ ಆರ್‌ಜಿಯುಹೆಚ್‌ಎಸ್ ಕುಲಪತಿ ಡಾ. ಕಾಂತ ಎಸ್. ಜಾಧವ್ ಅವರಿಂದ, ಮಾ ಉತ್ಸವ, ಉದ್ಘಾಟನೆ : ಆರ್‌ಜಿಯುಹೆಚ್‌ಎಸ್ ಕುಲಪತಿ ಡಾ. ಎಂ.ಕೆ. ರಮೇಶ್, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಸ್ಥಳ: ಎಂಎಂಸಿ ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಸಂಜೆ 5.30ಕ್ಕೆ.

■ **ಅಭಿರುಚಿ ಮತ್ತು ಭಾರತೀಯ ವಿದ್ಯಾರ್ಥಿ ಸಂಘ :** ಪ್ರೊ. ಪಿ.ವಿ. ನಂಜರಾಜ ಅರಸು ಅವರ ಟಿಪ್ಪು ಮಾನ್ಯತೆ ಸಿಗದ ಸುಲ್ತಾನ್ ಅಂದು : ಇಂದು ಕೃತಿ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ : ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಎಚ್.ಎನ್. ನಾಗಮೋಹನ ದಾಸ್, ಕೃತಿ ಲೋಕಾರ್ಪಣೆ : ವಿಧಾನ ಪರಿಷತ್ ವಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್, ಶಾಸಕರಾದ ಅಡಗೂರು ಹೆಚ್. ವಿಶ್ವನಾಥ್, ತನ್ವೀರ್ ಸೇಠ್, ಕೃತಿ ಕುರಿತು : ನಿವೃತ್ತ ಪ್ರಾಧ್ಯಾಪಕ ಪ್ರೊ. ಮಹೇಶ್‌ಚಂದ್ರ ಗುರು, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20ಗೀತಾರಾಧನ, 6.35 ಭ'ವ'ದ ಬಯಲಿಗರು–ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ– ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಡಾ.ಎಂ.ಎ. ಜ್ಯೋತಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 7.15 ತ್ಯಾಜ್ಯ ನಿಭಾಯಿಸುವ ರೀತಿ–ಪ್ರಾಯೋಜಿತ ಕಾರ್ಯಕ್ರಮ, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಎನ್. ಭಾರತಿ – ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05ವನಿತಾ ವಿಹಾರ, 12.45 ಜನಪದಗೀತೆ–ಕೆಂಪಮ್ಮ ಮತ್ತು ತಂಡ, 1.20 ಭಾವಗೀತೆ, 3.35 ಮಕ್ಕಳ ಮಂಟಪ– ಪ್ರತಿಭಾ ಪಲ್ಲವ, ಕುಮಾರಿ ಭವ್ಯಾ ಹಾಗೂ ಕಲಾ ಶಿಕ್ಷಕಿ ಸಂಗೀತಾ ಅವರೊಂದಿಗೆ ಸಂದರ್ಶನ, 4.00 ನಾಟಕ, 4.30 ನೆನಪಿನಂಗಳ – ಹಿರಿಯ ಸಾಹಿತಿ ಸುಜನಾ (ಪ್ರೊ.ಎಸ್.ನಾರಾಯಣ ಶೆಟ್ಟಿ) ಅವರೊಂದಿಗೆ ಡಾ.ವಸಂತ ಕುಮಾರ್ ಪೆರ್ಲ ಅವರು ನಡೆಸಿರುವ ಸಂವಾದ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00ಜನಪದ ಸಂಗೀತ–ಕೆಂಚಮ್ಮ ಮತ್ತು ತಂಡ, 9.15 ಸ್ವಾತಂತ್ರ್ಯ ಚಳವಳಿಯಲ್ಲಿ ವಿಜ್ಞಾನಿಗಳು, ಮಾತನಾಡುತ್ತಾರೆ ಹರ್ಷವರ್ಧನ ಬಿ., 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ಚಂದ್ರಶೇಖರ್ ವಾಜೆ – ಗಾಯನ, 11.00 ಸವಿನೆನಪು

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–66, ತಿಂಗಳ ಸಾಧಕರು ವಿದುಷಿ ದಿನಮಣಿ ಶ್ರೀನಿವಾಸಮೂರ್ತಿ, ಮುಖ್ಯ ಅತಿಥಿಗಳು : ಪತ್ರಕರ್ತ ರಂಗನಾಥ್ ಮೈಸೂರು, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ:ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್:** ಶ್ರೀರಾಮನವಮಿ ಸಂಗೀತ ಕಾರ್ಯಕ್ರಮ, ಬೆಳಗ್ಗೆ 10ರಿಂದ ವಿದ್ವಾನ್ ಎಂ. ನಿಶಾಂತ್ ಅವರಿಂದ ಗಾಯನ, ಮೈಸೂರು ಸುಮಂತ್–ಪಿಟೀಲು, ನಿಕ್ಷಿತ್ ಪುತ್ತೂರು – ಮೃದಂಗ, ವಿ.ಎಸ್. ರಮೇಶ್–ಮೋರ್ಸಿಂಗ್, ಸಂಜೆ 5.15 ರಿಂದ ವಿದುಷಿ ಮೇಧಾ ಮಂಜುನಾಥ್ ಅವರಿಂದ ಗಾಯನ, ಮೋಹನ್ ಕೇಶವಕುಮಾರ್ – ಪಿಟೀಲು, ನಂದನ್ ಕಶ್ಯಪ್–ಮೃದಂಗ, ಸಂಜೆ 6.15 ರಿಂದ ಡಾ. ಜ್ಯೋತ್ಸ್ನ ಶ್ರೀಕಾಂತ್ ಮತ್ತು ಡಾ. ರವೀಂದ್ರ ಕಾಟೋಟಿ ಅವರಿಂದ ಜುಗಲ್‌ಬಂದಿ ಗಾಯನ, ಹೆಚ್.ಎಸ್. ಸುಧೀಂದ್ರ–ಮೃದಂಗ, ಗುರುಮೂರ್ತಿ ವೈದ್ಯ–ತಬಲ, ಸ್ಥಳ : ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಮೈಸೂರು.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 13ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30 ರಿಂದ ಶ್ರೀ ವಿದ್ಯಾ ಷೋಡಶ ದುರ್ಗಾ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಎನ್. ರವಿಚಂದ್ರನ್, ಅಧ್ಯಕ್ಷತೆ : ಎನ್‌ಐಇ ಆಡಳಿತ ಮಂಡಳಿ ಅಧ್ಯಕ್ಷ ಡಾ. ಎಂ.ಎಸ್. ರಂಗನಾಥ್, ಸ್ಥಳ: ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಸೆಮಿನಾರ್ ಹಾಲ್, ಎನ್‌ಐಇ, ಸಂಜೆ 4ಕ್ಕೆ.

■ **ಭಾವಸಾರ್ ವಿಷನ್ ಇಂಡಿಯಾ, ರಾಯಲ್ ಕ್ಲಬ್ ಮೈಸೂರು :** ಪದಗ್ರಹಣ ಸಮಾರಂಭ, ಉದ್ಘಾಟನೆ : ಭಾವಸಾರ್ ವಿಷನ್ ಇಂಡಿಯಾ ಸ್ಥಾಪಕ ಎಸ್.ಬಿ. ನಾರಾಯಣರಾವ್ ತಾತೂಸ್ಕರ್, ಸತೀಶ್ ಜಾದವ್, ಪ್ರಕಾಶ್ ರಾಶಿಂಕರ್, ಗೌರವ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ಸಿದ್ದುಮಾಲತ್ಕರ್, ಸ್ಥಳ: ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಶ್ರೀ ಶಂಕರ ಜಯಂತಿ ಸಭಾ :** ಶ್ರೀರಾಮನವಮಿ ಕಾರ್ಯಕ್ರಮಗಳು, ಸಂಜೆ 5 ರಿಂದ ಶ್ರೀ ವಿಶ್ವೇಶ ಕೃಷ್ಣ ಭಜನಾ ಮಂಡಳಿ ಅವರಿಂದ ಭಕ್ತಿಗೀತೆಗಳು, ಸಂಜೆ 6 ರಿಂದ ವಿದ್ವಾನ್ ಹರೀಶ್ ಪಾಂಡವ್ ಅವರಿಂದ ಸ್ಯಾಕ್ಸೋಫೋನ್ ವಾದನ, ಸ್ಥಳ: ಸಮುದಾಯ ಭವನ, ತೆಂಗಿನತೋಪು, ಸರಸ್ವತಿಪುರಂ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ರಾಮೋತ್ಸವ ಕಾರ್ಯಕ್ರಮಗಳು, ಶ್ರೀ ಸಾಯಿ ಸೌದಾಮಿನಿ ತಂಡದಿಂದ ಭಜನೆ, ಡಾ. ವಸುಂಧರಾ ದೊರೆಸ್ವಾಮಿ ಅವರಿಂದ 'ಶಬರಿ' ನೃತ್ಯ ರೂಪಕ, ಸ್ಥಳ : ಗಣಪತಿ ದೇವಸ್ಥಾನ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6.30ಕ್ಕೆ

ಮೈಸೂರು ರೈಲು ನಿಲ್ದಾಣದಲ್ಲಿ ಶ್ರೀಗಂಧ ಉತ್ಪನ್ನಗಳ ಮಾರಾಟ ಮಳಿಗೆ ಆರಂಭ



ಮೈಸೂರು, ಏ. 8(ಆರ್‌ಕೆ)– ಮೈಸೂರು ರೈಲು ನಿಲ್ದಾಣದಲ್ಲಿ ಶ್ರೀಗಂಧದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆ ಇಂದು ಆರಂಭವಾಯಿತು.

ಏಪ್ರಿಲ್ 22ರವರೆಗೆ ತೆರೆದಿರುವ ಮಳಿಗೆಯಲ್ಲಿ ಶ್ರೀಗಂಧದ ಸಾಬೂನು, ಗಂಧದ ಎಣ್ಣೆ, ಸುಗಂಧ ದ್ರವ್ಯಗಳು, ಟಾಲ್ಕಮ್ ಪೌಡರ್, ಹ್ಯಾಂಡ್ ವಾಶ್, ಫೇಸ್ ವಾಶ್, ಅಗರಬತ್ತಿಯಂತಹ ಉತ್ಪನ್ನಗಳನ್ನು ಪ್ರದರ್ಶಿಸಿ ಪ್ರಚುರಪಡಿಸಿ ಮಾರಾಟ ಮಾಡಲಾಗುವುದು.

ಹೆಚ್ಚುವರಿ ವಿಭಾಗೀಯ ರೈಲ್ವೇ ವ್ಯವಸ್ಥಾಪಕ ಬುಡಟಿ ಶ್ರೀನಿವಾಸುಲು, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಮಂಜುನಾಥ ಕನಮಡಿ ಹಾಗೂ ಇತರರು ತಾತ್ಕಾಲಿಕ ಮಳಿಗೆ ಉದ್ಘಾಟನೆ ವೇಳೆ ಉಪಸ್ಥಿತರಿದ್ದರು.

ರೈಲಿಗೆ ಸಿಲುಕಿ ಅಪರಿಚಿತ ಸಾವು

ಮೈಸೂರು, ಏ.8– ಮಂದಗೆರೆ ಅಕ್ಕಿ ಹೆಬ್ಬಾಳು ರೈಲು ನಿಲ್ದಾಣಗಳ ನಡುವೆ ರೈಲ್ವೆ ಗೇಟ್ ಹತ್ತಿರ ರೈಲು ಗಾಡಿಗೆ ಸಿಕ್ಕಿ 35 ವರ್ಷದ ವ್ಯಕ್ತಿ ಮೃತ ಪಟ್ಟಿದ್ದಾರೆ. ವಯಸ್ಸು 35 ರಿಂದ 40 ವರ್ಷ, ಎತ್ತರ 5.3 ಅಡಿ, ಕೋಲು ಮುಖ, ಎಣ್ಣೆಗೆಂಪು ಮೈಬಣ್ಣ, ಕೃಶವಾದ ಶರೀರ, ತಲೆಯಲ್ಲಿ ಸುಮಾರು 3 ಇಂಚು ಉದ್ದದ ಕಪ್ಪು ಕೂದಲು, ಕುರುಚಲು ಗಡ್ಡ ಮೀಸೆ ಹೊಂದಿದ್ದು, ಗ್ರೇ ಕಲರ್‌ನ ಅರ್ಧ ತೋಳಿನ ಶರ್ಟ್, ಹಸಿರು ನೀಲಿ ಬಿಳಿ ಬಣ್ಣದ ತುಂಬು ತೋಳಿನ ಸ್ವೆಟರ್ ಬೂದು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ವಾರಸುದಾರರು ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 0821–2516579 ಅನ್ನು ಸಂಪರ್ಕಿಸಬಹುದು ಎಂದು ರೈಲ್ವೆ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಪಂಚಮುಖಿ ಆಂಜನೇಯ ದೇವಸ್ಥಾನದಲ್ಲಿ ಶ್ರೀರಾಮ ನವಮಿ

ಮೈಸೂರು, ಏ.8(ಆರ್‌ಕೆ)– ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯ ದೇವಸ್ಥಾನದಲ್ಲಿ ಏಪ್ರಿಲ್ 9 ರಂದು ಚಾಂದ್ರಮಾನ ಶ್ರೀರಾಮ ನವಮಿ ಪ್ರಯುಕ್ತ ಶ್ರೀರಾಮತಾರಕ ಹೋಮ ಏರ್ಪಡಿಸಲಾಗಿದೆ. ಎಂದು ದೇವಸ್ಥಾನದ ಅರ್ಚಕ ವಿದ್ವಾನ್ ಕೃಷ್ಣಮೂರ್ತಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗಂಡ : "ನೀನು ಒಮ್ಮೆಯಾದ್ರೂ ಪ್ರೇಮದಿಂದ ಮಾತಾಡಿದೀಂಯೇನೆ ನಂಜೊತೆಗೆ? ಯಾವಾಗ್ಲೂ ವಟವಟಾಂತ ಏನಾದ್ರೂ ಅನ್ನುತ್ಲೇ ಇರ್ತಿ.

ಹೆಂಡತಿ : "ಪ್ರೇಮದಿಂದ ಮಾತಾಡೋದಕ್ಕೆ ನಾನೇನು ನಿಮ್ಮ ಪ್ರೇಯಸೀನಾ? ನಾನು ನಿಮ್ಮ ಹೆಂಡ್ತಿ ಅನ್ನೋದನ್ನ ನೆನಪಿನಲ್ಲಿಟ್ಕೊಳ್ಳಿ"!!!

ಮೈಸೂರು ಮಿತ್ರ

ಶನಿವಾರ, 9 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ವಿರೋಧ ಎಲ್ಲಿ ಇರುವುದಿಲ್ಲವೋ, ಅಲ್ಲಿ ಜಯವೆಂಬುದೇ ಇರುವುದಿಲ್ಲ.

–ಬರ್ನಾಡ್ ಷಾ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಚಿಂತೆಯಿಲ್ಲದವನಿಗೆ ಸಂತೆಯಲ್ಲೂ ನಿದ್ದೆ

ನಿಮ್ಮ ಪತ್ರಗಳು

ಹುಷಾರು?..ಸಾಯಲಿಕ್ಕೂ ತೆರಿಗೆ

ಮಾನ್ಯರೆ,

ಪ್ರತಿ ವರುಷದ ಏಪ್ರಿಲ್ ಮಾಹೆ ನಗರ(ನರಕ)ಪಾಲಿಕೆಯ ಆಸ್ತಿ ತೆರಿಗೆ ತಿಂಗಳು. ತರಹೇವಾರಿ ಕರಗಳನ್ನು ವಿಧಿಸಿ, ಮನಸ್ಸೋ ಇಚ್ಛೆ ಕರ ಏರಿಕೆ ಮಾಡಿದ ಪಾಲಿಕೆ, ಪ್ರಸ್ತುತ ಆಯವ್ಯಯ ವರುಷದಿಂದ ಒಂದು ಹೊಸ ತರಹದ ಕರವನ್ನು ನಾಗರಿಕರಿಗೆ ಸೇರ್ಪಡೆ ಮಾಡಿದೆ. ಅದುವೆ, ಸ್ಮಶಾನ ತೆರಿಗೆ, ವರುಷಕ್ಕೆ ರೂ. 150. ಅದು ಯಾಕೆ ಇದನ್ನು ಪಾವತಿಸಬೇಕು. ಇದನ್ನು ಯಾರು ಸಮ್ಮತಿಸಿದರು. ಪಾಲಿಕೆ ಸದಸ್ಯರೂ ಒಳಗೊಳಗೇ ಒಪ್ಪಿರಲಿಕ್ಕೂ ಸಾಕು.

ಆಯ್ತು, ಸತ್ತರೂ ತೆರಿಗೆ, ವರ್ಷೇವಾರು ಅದನ್ನೂ ಪರಿಷ್ಕರಿಸುತ್ತಾ ಏರಿಸಬಹುದಲ್ಲವೇ? ಅಂದ ಹಾಗೆ, ಇನ್ನು ಮುಂದೆ ಉಸಿರು ತೆರಿಗೆ, ಪ್ರಕೃತಿಯ ಗಾಳಿ ಸೇವನೆಗೆಂದು ಒಂದಿಷ್ಟು ಮೊತ್ತ, ಹಸಿರು ತೆರಿಗೆ, ಪ್ರತಿ ಮನೆ ಮುಂದೆ ಮರ ಗಿಡ ಇರದಿದ್ದರೆ ಎಂದು ಒಂದಿಷ್ಟು, ಬಸಿರು ತೆರಿಗೆ, ಪ್ರತಿ ಮನೆಯಲ್ಲಿ ಯಾರಾದರೂ ಮಕ್ಕಳನ್ನು ಹೆತ್ತರೆ ಎಂದು, ಹೀಗೆ ಇನ್ನೂ ಮತ್ತಷ್ಟು ವಿನೂತನ ಕರಗಳ ಸೇರ್ಪಡೆಯಾದಲ್ಲಿ, ಯಾರೂ ಆಶ್ಚರ್ಯಪಡಬೇಕಾಗಿಲ್ಲವಷ್ಟೆ.

–ವಿಜಯ್ ಹೆಮ್ಮಿಗೆ, ಮೈಸೂರು

ಕುಡುಕರ ಗಮನಕ್ಕೆ!

ಮಾನ್ಯರೆ,

ಮದ್ಯ ಸೇವಿಸಿ ವಾಹನ ಸವಾರಿ ಮಾಡಿದರೆ ಅಥವಾ ವಾಹನ ಚಲಾಯಿಸಿದರೆ 10,000 ರೂಪಾಯಿ ದಂಡ ವಿಧಿಸಲಾಗುವುದು.

ಈ ಮಾಹಿತಿಯನ್ನು ಮದ್ಯದಂಗಡಿ ಹಾಗೂ ಬಾರ್ & ರೆಸ್ಟೋರೆಂಟ್ ಎದುರು ಫಲಕಗಳ ಮೂಲಕ ಪ್ರಕಟಪಡಿಸಿದರೆ ಕುಡಕರ ಹಣದ ಜೊತೆಗೆ ಅಮಾಯಕರ ಪ್ರಾಣಗಳೂ ಉಳಿಯಬಹುದು. ಈ ವಿಚಾರವಾಗಿ ಸರಕಾರ ಕ್ರಮ ಕೈಗೊಳ್ಳಲಿ!

–ಪಿ.ಜೆ.ರಾಘವೇಂದ್ರ ಮೈಸೂರು

ಕೆರೆಗೆ ಕಸ : ಪಕ್ಷಿಗಳು, ಜಲಚರಗಳಿಗೆ ಕಂಟಕ



ಮಾನ್ಯರೆ,

ಮೈಸೂರಿನ ಹೊರ ವರ್ತುಲ ರಸ್ತೆಯಲ್ಲಿರುವ ಆದಿತ್ಯ ವೃತ್ತದ ಬಳಿ, ಹೆಚ್.ಡಿ. ಕೋಟೆ ರಸ್ತೆಯ ಸರ್ವೀಸ್ ರಸ್ತೆ ಬಳಿಯಲ್ಲಿನ ಮುಡಾದಿಂದ ಅನುಮೋದಿತ ಲೇಔಟ್ ನಿವಾಸಿಗಳು ಕಸ, ಘನತ್ಯಾಜ್ಯವನ್ನು ತಂದು ಕೆರೆಗೆ ಎಸೆಯುತ್ತಿದ್ದಾರೆ. ಇದರಿಂದ ಪಕ್ಷಿಗಳು, ಜಲಚರ ಪ್ರಾಣಿಗಳು ಸಾಯುವುದಲ್ಲದೆ, ಪ್ರತಿನಿತ್ಯ ವಾಯು ವಿಹಾರಿಗಳಿಗೆ ದುರ್ವಾಸನೆ ಬೀರುತ್ತಿದೆ. ಇದರಿಂದ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ರಸ್ತೆ ಬದಿಯಲ್ಲಿ ಕಸ ಸುರಿಯುವುದರಿಂದ ವಾಹನಗಳು ಚಲಿಸುವಾಗ ಅದರ ವೇಗಕ್ಕೆ ಕಸ ಪಾದಚಾರಿಗಳ ಮುಖಕ್ಕೆ ರಾಚುತ್ತದೆ. ಇದರಿಂದ ತುಂಬಾ ತೊಂದರೆಯಾಗಿದೆ. ಆದ್ದರಿಂದ ಸಂಬಂಧಪಟ್ಟ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಾಳಜಿ ವಹಿಸಿ ರಿಂಗ್ ರಸ್ತೆಯ ಜಂಕ್ಷನ್‌ನಲ್ಲಿ ಕಸದ ತೊಟ್ಟಿಯನ್ನು ಅಳವಡಿಸಿದರೆ, ಮುಡಾ ಅನುಮೋದಿತ ನಿವಾಸಿಗಳು ಕಸ ತಂದು ತೊಟ್ಟಿಗೆ ಹಾಕಬಹುದು. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ.

–ರಾಮ್, ದಟ್ಟಗಳ್ಳಿ, ಮೈಸೂರು.

ಪರಿಶಿಷ್ಟ ಜಾತಿ–ವರ್ಗದ ಕಲ್ಯಾಣದ ಅನುದಾನ ಎಲ್ಲಿ ಹೋಯಿತು?

ಮಾನ್ಯರೆ,

ಇತ್ತೀಚೆಗೆ ನಡೆದ ಒಂದು ಕಾರ್ಯಕ್ರಮದಲ್ಲಿ (ಮುಕ್ತ ಗಂಗೋತ್ರಿ ಘಟಿಕೋತ್ಸವ) ಪರಿಶಿಷ್ಟ ಜಾತಿ, ವರ್ಗದ ಕಲ್ಯಾಣಕ್ಕೆ ಮೀಸಲಾದ 2020–21ರ ಅನುದಾನ 26000 ಕೋಟಿ ಮತ್ತು 2021–22ರ ಅನುದಾನ 29000 ಕೋಟಿ ಎಲ್ಲಿ ಹೋಯಿತು ಎಂದು ಉನ್ನತ ಶಿಕ್ಷಣ ಸಚಿವರು ಕಳವಳ ವ್ಯಕ್ತಪಡಿಸಿದ್ದಾರೆ.

ಪರಿಶಿಷ್ಟರ ಕಲ್ಯಾಣ ವಿಷಯದಲ್ಲಿ ಲೋಪವಿದೆಯೇ, ಭ್ರಷ್ಟಾಚಾರ, ಅವ್ಯವಹಾರ ನಡೆಯುತ್ತಿದೆಯೇ, ಇಷ್ಟು ದೊಡ್ಡ ಮೊತ್ತದ ಹಣ ಎಲ್ಲಿಗೆ ಹೋಗಿದೆ. ಸಾರ್ವಜನಿಕರಿಗೆ ಅನುಮಾನ ಬರುವುದು ತಪ್ಪಲ್ಲ. ಇಷ್ಟು ದೊಡ್ಡ ಮಟ್ಟದ ಅನುದಾನ ಮಾಯವಾಗಿದೆ ಅಂದರೆ ಇದರ ಹಿಂದೆ ದೊಡ್ಡ ಪ್ರಭಾವಿತ, ದುಷ್ಟಕೂಟಗಳು ಇರಲೇಬೇಕಲ್ಲ.

ನನಗೆ ತಿಳಿದ ಮಟ್ಟಿಗೆ 2–3 ವರ್ಷಗಳ ಹಿಂದೆ ಇದೇ ಸಮುದಾಯದ ಉನ್ನತ ಅಧಿಕಾರಿಯೊಬ್ಬರು, ಸರ್ಕಾರ ಕೊಡಮಾಡಲ್ಪಟ್ಟಿರುವ ಯಾವುದೇ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ಸಿಕ್ಕಿಲ್ಲವೆಂಬ ದೂರನ್ನು ಸುಪ್ರೀಂಕೋರ್ಟ್‌ನಲ್ಲೂ ದಾಖಲಿಸಿದ್ದಾರೆ. ಹಾಗಾದರೆ, ಇಲ್ಲಿ ಒಂದು ಯಕ್ಷ ಪ್ರಶ್ನೆ ಇದೆ. ಈ ಸವಲತ್ತುಗಳನ್ನೆಲ್ಲಾ, ಅರ್ಹರಲ್ಲದ ಮತ್ಯಾರೋ ಅನುಭವಿಸುತ್ತಿರಬೇಕು. ಇವುಗಳನ್ನೆಲ್ಲಾ ಪತ್ತೆ ಮಾಡಬೇಕಾದುದು ಸರ್ಕಾರದ ಜವಾಬ್ದಾರಿಯಲ್ಲವೆ?

ಸರ್ಕಾರದ ಅನುದಾನ ಮಾಯವಾಗುತ್ತಿದೆ ಅನ್ನುವುದಕ್ಕೆ ಉದಾಹರಣೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿತ್ತು. ಅದರಲ್ಲಿ ಒಂದು ಯೋಜನೆಗೆ 20000 ಕೋಟಿ ಸಿಕ್ಕಿತ್ತು. ಆಡಿಟರ್ ಜನರಲ್ ಅವರಿಂದ ಇದಕ್ಕೆ ಆಕ್ಷೇಪಣೆಯು ಆಯಿತು. ಯೋಜನೆಯ ಬಾಬ್ತು ಅನುದಾನ ಖರ್ಚಾಗಿದೆ. ಆದರೆ ಈ ಯೋಜನೆ ಫಲಾನುಭವಿಗಳ ತಲುಪಿಲ್ಲ. ಸರ್ಕಾರಕ್ಕೆ ಶ್ರೀಸಾಮಾನ್ಯನ ತೆರಿಗೆ ಹಣಕ್ಕೆ ಬೆಲೆಯೇ ಇಲ್ಲವೆ?

ಮಾನ್ಯ ಮುಖ್ಯಮಂತ್ರಿಗಳು, ಈ ದಿಕ್ಕಿನಲ್ಲಿ ಸೂಕ್ತವಾಗಿ, ಶೀಘ್ರವಾಗಿ ಕ್ರಮ ಕೈಗೊಳ್ಳುವರೆ? ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಅವರು ನಿಜಕ್ಕೂ ಈ ವಿಚಾರದಲ್ಲಿ ಕಂಗಾಲಾಗಿದ್ದಾರೆ. ಒಂದು ಖಾತೆಯಲ್ಲೇ ಇಷ್ಟೊಂದು ಅನುದಾನ ಮಾಯ ಆಗುತ್ತದೆಯೆಂದರೆ ಉಳಿದ ಖಾತೆಗಳ ಗತಿಯೇನು? ಸರ್ಕಾರ ಇಲಾಖಾ ಅಗತ್ಯತೆಗೆ ತಕ್ಕಂತೆ, ಆರ್ಥಿಕ ಚೌಕಟ್ಟಿನಲ್ಲಿ, ಅನುದಾನ ನೀಡುವುದು ಸರ್ಕಾರದ ಜವಾಬ್ದಾರಿಯೇ ಆದರೂ ಅದನ್ನು ಸಮರ್ಪಕವಾಗಿ ಸದ್ವಿನಿಯೋಗ ಮಾಡಬೇಕೆಂಬ ಹೊಣೆ ಇಲಾಖಾಧಿಕಾರಿಗಳದ್ದು ಆಗಿರುತ್ತದೆ ಅನ್ನುವುದನ್ನು ಮರೆಯುವಂತಿಲ್ಲ.

– ಎ.ಎಸ್. ಗೋಪಾಲಕೃಷ್ಣ, ಮೈಸೂರು.



ಪ್ರೊ. ಎ.ವಿ. ನರಸಿಂಹಮೂರ್ತಿ


ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು


ಪುಟ್ಟಣ್ಣ ಎಂಬ ಹೆಸರಿನ ಮೂವರು ಮಹನೀಯರ ಕೊಡುಗೆಗಳು



ಎಂ.ಎಸ್. ಪುಟ್ಟಣ್ಣ



ಪುಟ್ಟಣ್ಣ ಚೆಟ್ಟಿ



ಪುಟ್ಟಣ್ಣ ಕಣಗಾಲ್

ಮೊದಲನೆಯ ಮಹನೀಯರೇ ಎಂ.ಎಸ್. ಪುಟ್ಟಣ್ಣನವರು. ಇವರು ಪ್ರಸಿದ್ಧ ಕಾದಂಬರಿಕಾರರು. ಇವರು ಹುಟ್ಟಿದ್ದು ಮೈಸೂರಿನಲ್ಲಿ. ನಂತರ ಇವರು ಮಹಾರಾಜಾ ಕಾಲೇಜಿನಲ್ಲಿ ಬಿಎ ಓದುತ್ತಿದ್ದಾಗ, ಮೈಸೂರಿನಲ್ಲಿ ಭೀಕರ ಕ್ಷಾಮ ಉಂಟಾದುದರಿಂದ ಪುಟ್ಟಣ್ಣನವರು ವಿದ್ಯಾಭ್ಯಾಸವನ್ನು ಮಧ್ಯದಲ್ಲೇ ನಿಲ್ಲಿಸಿದರು. ತಮ್ಮ ಮನೆಯವರ ಸಂಸಾರದ ನಿರ್ವಹಣೆಗಾಗಿ ಕೋಲಾರದಲ್ಲಿದ್ದ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿ 1878ರಲ್ಲಿ ಸೇರಿಕೊಂಡರು. ಆಗ ಇವರ ತಿಂಗಳಿನ ಸಂಬಳ ಎಪ್ಪತ್ತೈದು ರೂಪಾಯಿಗಳು. ಇದರಿಂದ ಸಂಸಾರದ ಊಟ, ತಿಂಡಿಗಳಿಗೆ ಹಾಗೂ ಅತಿಥಿ ಸತ್ಕಾರಗಳಿಗೆ ಸಾಕಾಗುತ್ತಿತ್ತು ಎಂದು ಸಂತೋಷಪಟ್ಟರು.

1880ರಲ್ಲಿ ಇವರನ್ನು ಮೈಸೂರು ಸರ್ಕಾರದ ವಿದ್ಯಾಧಿಕಾರಿಗಳು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೈಸೂರಿನಲ್ಲಿದ್ದ ಮಹಾರಾಜಾ ಕಾಲೇಜಿಗೆ ವರ್ಗ ಮಾಡಿದರು. 1882ರಲ್ಲಿ ಇವರು ಮದರಾಸಿಗೆ ಹೋಗಿ, ಅಲ್ಲಿನ ವಿಶ್ವವಿದ್ಯಾನಿಲಯದಿಂದ ಬಿಎ ಪದವಿಯನ್ನು ಗಳಿಸಿದರು. ನಂತರ ಮಹಾರಾಜಾ ಕಾಲೇಜು ಮುಖ್ಯಸ್ಥರಾಗಿದ್ದ ಎಚ್.ಜಿ. ಭಾಭಾ ಅವರೊಡನೆ ಭಿನ್ನಾಭಿಪ್ರಾಯಗಳುಂಟಾದ್ದರಿಂದ ಇವರು 1883ರಲ್ಲಿ ರಾಜೀನಾಮೆ ನೀಡಿದರು. ನಂತರ ಇವರು ಮೈಸೂರಿನಲ್ಲಿದ್ದ **ಚೀಫ್ ಕೋರ್ಟಿನಲ್ಲಿ** ಭಾಷಾಂತರಕಾರರಾದರು. 1897ರಲ್ಲಿ ಮೈಸೂರಿನ ಅಧಿಕಾರಿಗಳು ಇವರನ್ನು ಚಿತ್ರದುರ್ಗದ **ಅಮಲ್ದಾರ್** ಆಗಿ ನೇಮಕ ಮಾಡಿದರು. ನಂತರ ಇವರು ನೆಲಮಂಗಲ, ಚಾಮರಾಜನಗರ, ಬಾಗೇಪಲ್ಲಿ, ಮುಳಬಾಗಿಲು, ಹೊಸದುರ್ಗಗಳಲ್ಲಿ ಉತ್ತಮ ಕಾರ್ಯಗಳನ್ನು ಮಾಡಿ ಪ್ರಸಿದ್ಧರಾದರು. 1908ರಲ್ಲಿ ಇವರು ನಿವೃತ್ತರಾದರು.

ದಿವಾನ್ ರಂಗಾಚಾರ್ಲು ಹಾಗೂ ವಿದ್ಯಾಭ್ಯಾಸದ ಡೈರೆಕ್ಟರ್ ಆಗಿದ್ದ ಲೂಯಿ ರೈಸ್ ಅವರ ಉತ್ತೇಜನದಿಂದ ಪುಟ್ಟಣ್ಣನವರು ತಮ್ಮ ಉಪಾಧ್ಯಾಯ ವೃತ್ತಿಯಲ್ಲಿ ಬರವಣಿಗೆಯ ಕೆಲಸವನ್ನು ಆರಂಭಿಸಿದರು. ತಮ್ಮ ಆಪ್ತ ಸ್ನೇಹಿತರಾದ ಎಂ.ಬಿ. ಶ್ರೀನಿವಾಸ ಅಯ್ಯಂಗಾರ್ಯರೊಂದಿಗೆ ಸೇರಿ ಸ್ವಲ್ಪ ಕಾಲ **ಸಾಹಿತ್ಯ ರಚನೆ** ಮಾಡಿ ಆನಂತರ ಇವರು ಸ್ವತಂತ್ರವಾಗಿ ಕಾರ್ಯನಿರ್ವಹಿಸಿದರು.

ಪುಟ್ಟಣ್ಣನವರು ಪ್ರಖ್ಯಾತ ಸಾಹಿತಿಗಳೂ ಆಗಿದ್ದರು. ಇವರು ರಚಿಸಿದ ಕೃತಿಗಳೆಂದರೆ **ಮಾಡಿದ್ದುಣ್ಣೋ ಮಹಾರಾಯ, ಮುಸುಕ ತೆಗೆಯೇ ಮಾಯಾಂಗನೆ, ಅವರಿಲ್ಲದ ಊಟ, ಪೇಟೆಯ ಮಾತೇನಜ್ಜಿ, ನೀತಿ ಚಿಂತಾಮಣಿ, ಸುಮತಿ ಮದನ ಕುಮಾರರ ಚರಿತ್ರೆ, ಕುಣಿಗಲ್ ರಾಮಾಶಾಸ್ತ್ರಿಗಳ ಚರಿತ್ರೆ, ಮಹಮದ್ ಗವಾನನ ಇತಿಹಾಸ, ಸಾಲಾರ್ ಜಂಗನ ಚರಿತ್ರೆ, ಹಿಂದೂ ಚರಿತ್ರ ದರ್ಪಣ, ಹಿಂದೂ ಚರಿತ್ರ ಸಂಗ್ರಹ, ಚಿತ್ರದುರ್ಗದ ಪಾಳೇಗಾರರು, ಹೇಮಚಂದ್ರ, ರಾಜವಿಲಾಸ(ಷೇಕ್ಸ್‌ಪಿಯರ್‌ನ ನಾಟಕಾನುವಾದ) ಗುಮ್ಮನಾಯಕ ಪಾಳೇಗಾರರು, ಜಯಸಿಂಹ ರಾಜಚರಿತೆ (ನಾಟಕ)** ಹಾಗೂ **ಕನ್ನಡದ ಒಂದನೆಯ ಪುಸ್ತಕ ಮತ್ತು ಕನ್ನಡ ಲೇಖಕನ ಲಕ್ಷಣ.**

ಕನ್ನಡದಲ್ಲಿ ಇವರು ಮಕ್ಕಳಿಗಾಗಿ ಬರೆದ ಲೇಖನಗಳೆಂದರೆ **ಗುರು ಶಿಷ್ಯ ಸಂಬಂಧ, ಕಾಲನಿಯಮ** ಮುಂತಾದವು ಇವರಿಗೆ ಕನ್ನಡ ನಾಡಿನ ವೀರರ ಬಗೆಗೆ ಹೆಚ್ಚಿನ ಅಭಿಮಾನವಿದ್ದಿತ್ತು. ಈ ದೃಷ್ಟಿಯಿಂದ ಇವರು ಬರೆದ ಕೃತಿಗಳೆಂದರೆ ಚಿತ್ರದುರ್ಗದ ತಿಮ್ಮಣ್ಣ ನಾಯಕ, ಕದರಪ್ಪ ನಾಯಕ, ಗಂಧಗತ್ತಿ, ಯುದ್ಧ ವೀರ ಮದಕರಿ ನಾಯಕ, ಚಿತ್ರದುರ್ಗದ ಓಬವ್ವ, ದೊಡ್ಡ ವಸಂತ ನಾಯಕ ಮುಂತಾದ ಕೃತಿಗಳನ್ನು ಇವರು ನೀಡಿದ್ದಾರೆ. **ಹಿತಬೋಧಿನಿ** ಎಂಬ ಮಾಸ ಪತ್ರಿಕೆಯನ್ನು ಕೆಲಕಾಲ ಇವರು ನಡೆಸಿದರು. ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಏಳಿಗೆಗಾಗಿ ಇವರು ಉತ್ತಮ ಕೆಲಸಗಳನ್ನು ಮಾಡಿದರು ಹಾಗೂ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದರು.

ಪುಟ್ಟಣ್ಣನವರ ರಚನೆಗಳನ್ನು ಗಮನಿಸಿದಾಗ ಇವರು ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗೆ ನೀಡಿದ ಕೊಡುಗೆ ಗೊತ್ತಾಗುತ್ತದೆ. **ಸಾಮಾಜಿಕ** ಹಾಗೂ **ಐತಿಹಾಸಿಕ** ಕಾದಂಬರಿಗಳಿಗೆ ಕನ್ನಡ ಭಾಷೆಯಲ್ಲೇ ಸಾಕಷ್ಟು ಅವಕಾಶಗಳಿವೆ ಎಂದು ತಿಳಿಸಿದವರಲ್ಲಿ ಇವರೇ ಮೊದಲನೆಯವರು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಸಾಹಿತ್ಯ ಪರಿಷತ್ತಿನ ಅಧಿಕಾರಿಗಳು, ಇವರ ಕಾದಂಬರಿಗಳು ಕೇವಲ ಮನರಂಜನೆಗಾಗಿ ಮಾತ್ರವಲ್ಲವೆಂಬುದನ್ನು ಅರಿತಿದ್ದರು. ಅಂತಹಾ ಸಮಯದಲ್ಲಿ ಇವರು ಕಾದಂಬರಿಗಳ ಮೂಲಕ ಕನ್ನಡ ಕಾದಂಬರಿ ಸಾಹಿತ್ಯಕ್ಕೆ ಸುಭದ್ರವಾದ ಅಡಿಪಾಯವನ್ನು ಹಾಕಿದರು. **ಜೀವನ ಚರಿತ್ರೆಗಳನ್ನು** ಬರೆಯುವುದರಲ್ಲಿ ಇವರು ಶ್ರದ್ಧೆ ತೋರಿದರು. ಪುಟ್ಟಣ್ಣನವರ ಇತಿಹಾಸ ಕೃತಿಗಳ ಅಧ್ಯಯನ ಇವರ **ದೇಶಾಭಿಮಾನವನ್ನು** ಹಾಗೂ ಇಲ್ಲಿನ **ಸಂಸ್ಕೃತಿಯ** ಬಗ್ಗೆ ಇವರಿಗಿದ್ದ ಶ್ರೇಷ್ಠ **ಪಾಂಡಿತ್ಯವನ್ನು** ಬಿಂಬಿಸುತ್ತದೆ. ಇವರು ಬರೆದ ಸಂಶೋಧನಾ ಕೃತಿಗಳಲ್ಲಿ ಮುಖ್ಯವಾಗಿ ಕಂಡು ಬರುವುದು ಇತಿಹಾಸದ ರಚನೆಗೆ ಬೇಕಾದ ಆಕರಗಳ **ಸಂಗ್ರಹಣೆ** ಎಲ್ಲ ಕನ್ನಡಿಗರನ್ನೂ ಅಚ್ಚರಿಗೊಳಿಸುತ್ತದೆ. ಇವರ ಅನುವಾದಗಳು **ಕನ್ನಡ** ಹಾಗೂ **ಇಂಗ್ಲಿಷ್** ಭಾಷೆಗಳಲ್ಲಿದ್ದ ಜ್ಞಾನದ ಮೇಲಿನ ಪಾಂಡಿತ್ಯವನ್ನು ತೋರಿಸುತ್ತದೆ. ಇವರು ಮಕ್ಕಳಿಗಾಗಿ ಬರೆದಿರುವ ಪುಸ್ತಕಗಳು ಹಾಗೂ ಶೈಕ್ಷಣಿಕ ಗ್ರಂಥಗಳು ಮಕ್ಕಳ ಬಗ್ಗೆ ಇವರಿಗಿದ್ದ ಕಾಳಜಿಯನ್ನು ತೋರ್ಪಡಿಸುತ್ತದೆ. ಇವರು ಮಕ್ಕಳಿಗಾಗಿ ಬರೆದಿರುವ ಕಥೆಗಳು **ಸತ್ಯಕ್ಕೆ ಗೆಲುವು** ಹಾಗೂ **ಅಸತ್ಯಕ್ಕೆ ಸೋಲು** ಎಂಬುದನ್ನು ಎಲ್ಲರ ಮನ ಮುಟ್ಟುವಂತೆ ತೋರಿಸುತ್ತದೆ.

ಇವರ ಕಥೆ ಹಾಗೂ ಕಾದಂಬರಿಗಳ ವೈಶಿಷ್ಟ್ಯವೆಂದರೆ ಆಡಂಬರವಿಲ್ಲದ **ಆಡುನುಡಿಯ** ಭಾಷೆಯ ಸೊಗಡು ತುಂಬಿರುವುದರಿಂದ, ಸಾಮಾನ್ಯ ಓದುಗರಿಗೂ ಅತ್ಯಂತ ಪ್ರಿಯವಾಗುತ್ತದೆ. ಇವರು ಸಾಹಿತ್ಯ ರಚನೆ ಮಾಡುವ ಸಮಯದಲ್ಲಿ ಹೊಸಗನ್ನಡ ಇನ್ನೂ ಅಭಿವೃದ್ಧಿಯಾಗಿರಲಿಲ್ಲ. ಆದರೂ ಇವರ ಬರವಣಿಗೆಯ ಶೈಲಿಯಿಂದ ಜನರಿಗೆ ತೀರಾ ಹತ್ತಿರವಾದರು.

ಪುಟ್ಟಣ್ಣನವರ ಸಾಧನೆಗಳನ್ನು ಗಮನಿಸಿದಾಗ, ಇವರು ಪುಸ್ತಕ ಬರೆಯುವುದರಲ್ಲಿ ಹಾಗೂ ಯಾವುದಾದರೂ ಭಾರತೀಯ ಇತಿಹಾಸ ಹಾಗೂ ಸಂಸ್ಕೃತಿಯನ್ನು ಕನ್ನಡದಲ್ಲಿ ಬರೆಯುವಾಗ ಮೂಲ ಆಕರಗಳಿಗೆ ಹೋಗಿ ಸರಿಯಾದುದನ್ನು ಮಾತ್ರ ಆರಿಸಿಕೊಳ್ಳುತ್ತಿದ್ದರು. ಕನ್ನಡ ಭಾಷೆಯ ಇತಿಹಾಸದಲ್ಲಿ ಪುಟ್ಟಣ್ಣನವರ ಕಾದಂಬರಿಗಳಿಗೆ ಮಹತ್ವದ ಸ್ಥಾನವಿದೆ. ಕನ್ನಡದ ಕಾದಂಬರಿಗಳು ಅಷ್ಟಾಗಿ ಪ್ರಕಟವಾಗದ ಕಷ್ಟದ ಸಮಯದಲ್ಲಿ ಇವರು ತಮ್ಮ ಕಾದಂಬರಿಗಳ ಮೂಲಕ ಕನ್ನಡದ ಕಾದಂಬರಿಗಳಿಗೆ ಸುಭದ್ರವಾದ ತಳಹದಿಯನ್ನು ಹಾಕಿದರು. ಇದೇ ರೀತಿ ಇವರು ಜೀವನ ಚರಿತ್ರೆಗಳಿಗೂ ನಾಂದಿ ಹಾಡಿದರು. **ಕುಣಿಗಲ್ ರಾಮಾಶಾಸ್ತ್ರಿಗಳ ಜೀವನ ಚರಿತ್ರೆ** ಯಂತಹ ಇತರ ಕನ್ನಡಿಗರ ಜೀವನ ಚರಿತ್ರೆಗಳು ಹೆಚ್ಚಾಗಿ ಬರಲಿ ಎಂದು ಕನ್ನಡಿಗರಿಗೆ ಕರೆ ಕೊಟ್ಟರು.

ಕನ್ನಡದ ಗದ್ಯವನ್ನು ಅದರ ಅಸಹಜ ಧೋರಣೆಯಿಂದ ಹಾಗೂ ಸಂಪ್ರದಾಯಗಳಿಂದ ಇವರು ಬಿಡುಗಡೆಗೊಳಿಸಿದರು. ಅದರ ಬಿಗುವನ್ನು ಸಡಿಲಿಸಿ ಅದನ್ನು ಎಲ್ಲರಿಗೂ ಅರ್ಥವಾಗುವಂತೆ ಮಾಡಿದವರೇ ಪುಟ್ಟಣ್ಣನವರು. ಅಷ್ಟೇ ಅಲ್ಲದೇ ತಮ್ಮ ಸಾಹಿತ್ಯದಲ್ಲಿ ತಿಳಿನಗೆಯನ್ನು ಹೊರಸೂಸಿದವರೇ ಇವರು.

ಪುಟ್ಟಣ್ಣನವರು 1891ರಿಂದ 1892ರವರೆಗೆ ಮದರಾಸು ವಿಶ್ವವಿದ್ಯಾನಿಲಯದ ಪರೀಕ್ಷೆಗಳಲ್ಲಿ ದೊಡ್ಡ ಅಧಿಕಾರಿಗಳು ಕನ್ನಡದಲ್ಲಿ ಬರೆದ ಉತ್ತರಗಳನ್ನು ತಾವೇ ತಿದ್ದುತ್ತಿದ್ದರು ಹಾಗೂ ತಾರತಮ್ಯ ಮಾಡದೇ ವಿದ್ಯಾರ್ಥಿಗಳಿಗೆ ಬರಬೇಕಾದ ಅಂಕಗಳನ್ನು ತಾವೇ ಕೊಡುತ್ತಿದ್ದರು.

ಮೈಸೂರಿನಲ್ಲಿ ಮಿಡಲ್‌ಸ್ಕೂಲ್ ಹಾಗೂ ಹೈಸ್ಕೂಲ್‌ಗಳಲ್ಲಿ ನಡೆದ ಪರೀಕ್ಷೆಗಳಿಗೆ, ಕನ್ನಡ ಹಾಗೂ ಇತಿಹಾಸದ ಉತ್ತರ ಪತ್ರಿಕೆಗಳಿಗೆ ಇವರು ಹತ್ತು ವರ್ಷಗಳ ಕಾಲ ಪರೀಕ್ಷಕ (ಎಕ್ಸಾಮಿನರ್) ಆಗಿದ್ದರು.

ಅಂದಿನ ಮೈಸೂರು ಸರ್ಕಾರವು ಉತ್ತಮ ಪಠ್ಯ ಪುಸ್ತಕಗಳು ರಚನೆಯಾಗಲಿ ಎಂದು ಅಭಿಪ್ರಾಯಪಟ್ಟಾಗ ಪಠ್ಯಪುಸ್ತಕಗಳ ರಚನೆಯಲ್ಲಿ ಇವರನ್ನು ಸದಸ್ಯರಾಗಿದ್ದು ಮಾರ್ಗದರ್ಶನ ಮಾಡಿ ಎಂದು ಕೋರಲಾಗಿತ್ತು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಿದ್ದ ಉಪನ್ಯಾಸ ಮಾಲಿಕೆಯಲ್ಲಿ ಪುಟ್ಟಣ್ಣನವರು **ಪಾಳೇಗಾರರ** ಇತಿಹಾಸವನ್ನು ಕುರಿತು ಐದು ಉತ್ತಮವಾದ ಉಪನ್ಯಾಸಗಳನ್ನು ಕೊಟ್ಟರು.

ಪುಟ್ಟಣ್ಣನವರಿಗೆ ಸಾರ್ವಜನಿಕರ ಬಗ್ಗೆ ತುಂಬಾ ಆಸಕ್ತಿಯಿದ್ದಿತು. ಇವರು ಬೆಂಗಳೂರು ತೆರಿಗೆದಾರರ ಸಮಿತಿಯಲ್ಲಿ ಸದಸ್ಯರಾಗಿದ್ದರು. ಮೋಸ ಮಾಡುವ ಹಣವಂತರಿಗೆ ಹೆಚ್ಚಿನ ತೆರಿಗೆ ಹಾಕಿ ಹಾಗೂ ಬಡವರಿಗೆ ಕಡಿಮೆ ತೆರಿಗೆಯನ್ನು ಹಾಕಿದರು.

ಇವರ ಕಾಲದಲ್ಲಿ ಅಧಿಕಾರಿಗಳು ಬರೆದ ಟಿಪ್ಪಣಿಗಳು ಹಾಗೂ ಟೀಕೆಗಳು ಕನ್ನಡದಲ್ಲೇ ಇರಬೇಕು. ಇದರಿಂದ ಹೆಚ್ಚಿಗೆ ಓದದವರಿಗೆ ಅನುಕೂಲವಾಗುತ್ತದೆ ಎಂದು ಪುಟ್ಟಣ್ಣನವರು ವಾದಿಸಿದರು.

ಪುಟ್ಟಣ್ಣನವರು ಉದಾರಿಗಳು ಹಾಗೂ ಪ್ರಾಮಾಣಿಕರು. ಇವರು ತಾವು ಇದ್ದ ಹುದ್ದೆಗಳಲ್ಲಿ ಅತ್ಯಂತ ನಿಷ್ಠೆಯಿಂದ ನಡೆದುಕೊಂಡರು. ಹಿರಿಯರು ಹಾಗೂ ಕಿರಿಯರು ಕನ್ನಡದ ಕೆಲಸವನ್ನು ಮಾಡಿದರೆ ಅವರನ್ನು ಅಭಿನಂದಿಸುತ್ತಿದ್ದರು. ಕನ್ನಡ ನಾಡು, ನುಡಿಗಳಿಗೆ ಶಕ್ತಿ ಮೀರಿ ಶ್ರಮಿಸಿದ ಪುಟ್ಟಣ್ಣನವರು ತಮ್ಮ 76ನೇ ವಯಸ್ಸಿನಲ್ಲಿ ನಿಧನರಾದರು.

ಈಗ ಇನ್ನೊಬ್ಬ ಮಹನೀಯರನ್ನು ಗಮನಿಸಬಹುದು. ಅವರೇ ಕೆ.ಪಿ.ಪುಟ್ಟಣ್ಣಚೆಟ್ಟಿಯವರು. ಇವರು ಹುಟ್ಟಿದ್ದು ಬೆಂಗಳೂರು ಜಿಲ್ಲೆಗೆ ಸೇರಿದ ಕೃಷ್ಣರಾಜಪುರದಲ್ಲಿ. ಇವರು ಗುಮಾಸ್ತರಾಗಿ ಸೇರಿಕೊಂಡು ತಮ್ಮ ಉತ್ತಮ ಕೆಲಸಗಳಿಂದ ಅಸಿಸ್ಟೆಂಟ್ ಕಮಿಷನರ್ ಆದರು. ನಂತರ 1898ರಲ್ಲಿ ಡೆಪ್ಯೂಟಿ ಕಮಿಷನರ್ ಆಗಿ ಮೈಸೂರಿನ ಅನೇಕ ಜಿಲ್ಲೆಗಳಲ್ಲಿ ಕೆಲಸ ಮಾಡಿದರು.

ಇವರು ಮಾಡಿದ ಉತ್ತಮ ಸೇವೆಯನ್ನು ಗುರುತಿಸಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಇವರಿಗೆ **ರಾಜ ಸಭಾಭೂಷಣ** ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಅಲ್ಲದೇ ಭಾರತ ಸರ್ಕಾರವು 1914ರಲ್ಲಿ ಇವರಿಗೆ **ದಿವಾನ್ ಬಹದ್ದೂರ್** ಪದವಿಯನ್ನು ನೀಡಿ ಗೌರವಿಸಿತು. 1911ರಲ್ಲಿ ಇವರು ಮೈಸೂರಿನ ದಿವಾನರಿಗೆ ಸಲಹೆ ನೀಡಲು ಇರುತ್ತಿದ್ದ **ಎಕ್ಸ್‌ಕ್ಯುಟಿವ್ ಕೌನ್ಸಿಲರ್** ಆಗಿದ್ದಾಗ ಅಮೂಲ್ಯ ಸಲಹೆಗಳನ್ನು ನೀಡಿ ಪ್ರಖ್ಯಾತರಾದರು. ಇವರು 1912ರಲ್ಲಿ ಸರ್ಕಾರಿ ಸೇವೆಯಿಂದ ನಿವೃತ್ತರಾದರು. ನಾಲ್ವಡಿಯವರು ಇವರ **ಸತ್ಯಸಂಧತೆ** ಹಾಗೂ ಕೆಲಸ ಮಾಡುವುದರಲ್ಲಿ ಕಂಡು ಬರುತ್ತಿದ್ದ **ನಿಪುಣತೆಯನ್ನು** ಗಮನಿಸಿ 1913ರಲ್ಲಿ ಇವರನ್ನು ಮೈಸೂರು ಬ್ಯಾಂಕಿನ ಅಧ್ಯಕ್ಷರನ್ನಾಗಿ ನೇಮಿಸಿದರು.

1913ರಿಂದ 1922ರ ವರೆಗೆ ಇವರು **ಬೆಂಗಳೂರು ನಗರಾಭಿವೃದ್ಧಿ ಸಮಿತಿಯ** ಅಧ್ಯಕ್ಷರಾಗಿದ್ದರು. 1927ರಲ್ಲಿ ನಾಲ್ವಡಿಯವರ **ರಜತೋತ್ಸವ** ಸಮಿತಿಗೂ ಹಾಗೂ 1936ರಲ್ಲಿ ವಿಜಯನಗರ ಸಾಮ್ರಾಜ್ಯ ಉತ್ಸವಕ್ಕೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. 1927ರಲ್ಲಿ **ವೀರಶೈವ ಮಹಾಸಭೆಯ** ಅಧ್ಯಕ್ಷರಾಗಿದ್ದರು.

1914ರಲ್ಲಿ ಮೈಸೂರು ಸರ್ಕಾರವು ಇವರಿಗೆ **ಕೈಸರ್–ಇ–ಹಿಂದ್** ಚಿನ್ನದ ಪದಕವನ್ನು ಮತ್ತು 1925ರಲ್ಲಿ ಬ್ರಿಟಿಷ್ ಸರ್ಕಾರವು ಇವರಿಗೆ **ಸರ್** ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿತು. 1936ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು **ಎಲ್‌ಎಲ್‌ಡಿ** ಪದವಿಯನ್ನು ನೀಡಿ ಸನ್ಮಾನಿಸಿತು.

ತಾವು ನೀಡಿದ ಉಪನ್ಯಾಸಗಳನ್ನು ಪ್ರಕಟಿಸುವುದಕ್ಕೋಸ್ಕರ ಇವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ 20 ಸಾವಿರ ರೂ.ಗಳ ಶಾಶ್ವತ ನಿಧಿಯನ್ನು ಸ್ಥಾಪಿಸಿದರು. ಅಷ್ಟೇ ಅಲ್ಲದೇ ಇವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಕನ್ನಡ ಭಾಷೆ ಸಂಸ್ಕೃತಿಗಳನ್ನು ಪೋಷಿಸುವುದಕ್ಕಾಗಿ 50 ಸಾವಿರ ರೂ.ಗಳನ್ನು ನೀಡಿದರು. 1926ರಲ್ಲಿ **ಕನ್ನಡ ಸಾಹಿತ್ಯ ಪರಿಷತ್ತಿನ** ಅಧ್ಯಕ್ಷರನ್ನಾಗಿ ನೇಮಕ ಮಾಡಿ ಪುಟ್ಟಣ್ಣಚೆಟ್ಟಿ ಅವರನ್ನು ಗೌರವಿಸಲಾಗಿತ್ತು.

ಊರಿಂದ ಊರಿಗೆ ಕನ್ನಡ ನುಡಿಗಾಗಿ ಪ್ರಯಾಣ, ಹತ್ತಾರು ಕಡೆ ಭಾರತ ಮಾತೆಯನ್ನು ಕುರಿತು ಮಾಡಿದ ಭಾಷಣಗಳು ಇವುಗಳಿಂದ ಇವರ ಶರೀರವು ಕುಗ್ಗಿ ಹೋಗಿತ್ತು. 82 ವರ್ಷಗಳ ಸಾರ್ಥಕ ಜೀವನವನ್ನು ಉತ್ತಮ ರೀತಿಯಲ್ಲಿ ನಡೆಸಿ 1938ರಲ್ಲಿ ಇವರು ನಿಧನರಾದರು.

ಪುಟ್ಟಣ್ಣ ಚೆಟ್ಟಿಯವರ ನೆನಪಿಗಾಗಿ ಬೆಂಗಳೂರಿನಲ್ಲಿ ಪುಟ್ಟಣ್ಣಚೆಟ್ಟಿ ಪುರಭವನ ಹಾಗೂ ಒಂದು ರಸ್ತೆಯೂ ಇವರ ಹೆಸರಿನಲ್ಲಿದೆ.

ಪುಟ್ಟಣ್ಣ ಚೆಟ್ಟಿ ಪುರಭವನವು ಇಂದಿಗೂ ಇವರು ಮಾಡಿದ ಉತ್ತಮ ಕಾರ್ಯಗಳನ್ನು ಜ್ಞಾಪಿಸುವ ಮೂಲಕ ಇಂತಹವರ ಶ್ರೇಷ್ಠ ಜೀವನ ಹಾಗೂ ಸಾಧನೆಗಳನ್ನು ಇಂದಿನ ಪೀಳಿಗೆಯವರಿಗೆ ನೆನಪು ಮಾಡುತ್ತಲಿದೆ ಎಂದರೆ ಅತಿಶಯೋಕ್ತಿಯಲ್ಲ.

ಮೂರನೆಯವರೇ ಪುಟ್ಟಣ್ಣ ಕಣಗಾಲ್. ಇವರು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ **ಕಣಗಾಲ್** ಎಂಬ ಹಳ್ಳಿಯಲ್ಲಿ 1933ರಲ್ಲಿ ಜನಿಸಿದರು. ಇವರ ತಂದೆ ರಾಮಸ್ವಾಮಯ್ಯನವರು ಕಣಗಾಲಿನ ಗಣ್ಯವ್ಯಕ್ತಿಗಳಾಗಿದ್ದರು. ಇವರು ಆರಂಭದ ವಿದ್ಯಾಭ್ಯಾಸವನ್ನು ಕಣಗಾಲದಲ್ಲಿಯೇ ಪೂರೈಸಿದರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇವರು ಮೈಸೂರಿನಲ್ಲಿದ್ದ **ಬನುಮಯ್ಯ** ಶಾಲೆಗೆ ಹೋದರು. ಇವರಿಗೆ ನಾಟಕದಲ್ಲಿ ಹೆಚ್ಚಿನ ಒಲವು ಇದ್ದುದರಿಂದ ಮೆಟ್ರಿಕ್ಯುಲೇಷನ್ ಪೂರ್ಣಗೊಳಿಸಲು ಆಗಲಿಲ್ಲ.

ಇವರ ಅಣ್ಣ ಪ್ರಭಾಕರ ಶಾಸ್ತ್ರಿಯವರಿಂದ ನಾಟಕಗಳನ್ನು ರಚಿಸಬೇಕು ಹಾಗೂ ಅವುಗಳಲ್ಲಿ ನಟನಾಗಿ ಅಭಿನಯಿಸಬೇಕೆಂಬ ಆಸೆ ಇವರಿಗೆ ಹೆಚ್ಚಾಯಿತು. ನಂತರ ಇವರು ಸೋರಟ್ ಅಶ್ವತ್ಥ್ ಅವರ **ಕಲಾ ಸಂಘ** ಕಂಪನಿಗೆ ಸೇರಿದರು. ಮೂರು ವರ್ಷಗಳ ಕಾಲ ನಾನಾ ವಿಧವಾದ ಪಾತ್ರಗಳನ್ನು ಮಾಡಿದರೂ ಇವರಿಗೆ ಯಾವ ಅನುಕೂಲವೂ ಆಗಲಿಲ್ಲ. 1954ರಲ್ಲಿ ಅಣ್ಣ ಪ್ರಭಾಕರ ಶಾಸ್ತ್ರಿಗಳ ಸಹಾಯದಿಂದ ಒಂದು **ಫೋಟೋ ಸ್ಟುಡಿಯೋದಲ್ಲಿ** ಫೋಟೋಗ್ರಾಫರ್ ಆಗಿ ಕೆಲಸ ಮಾಡಿದರು. 1955ರಲ್ಲಿ ಅಣ್ಣನ ಪ್ರಭಾವದಿಂದ ಖ್ಯಾತ ನಿರ್ದೇಶಕ ಬಿ.ಆರ್. ಪಂತಲು ಅವರ **ಪದ್ಮಿನಿ ಪಿಕ್ಚರ್ಸ್** ಬಳಗಕ್ಕೆ ಸೇರಿದರು.

ಅಲ್ಲಿ ಸಹಾಯಕ ನಿರ್ದೇಶಕರಾಗಿ **ರತ್ನಗಿರಿ ರಹಸ್ಯ** (1957) ಚಿತ್ರಕ್ಕೆ ದುಡಿದರು ಇದು ಇವರ ಮೊದಲನೆಯ ಚಿತ್ರವಾಯಿತು. ನಂತರ **ಕಿತ್ತೂರು ರಾಣಿ ಚೆನ್ನಮ್ಮ, ಗಾಳಿ ಗೋಪುರ, ಮಕ್ಕಳ ರಾಜ್ಯ, ಸಾಕುಮಗಳು** ಮುಂತಾದ ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು. 1967ರಲ್ಲಿ ತೆರೆಗೆ ಬಂದ **ಬೆಳ್ಳಿಮೋಡ** ಅತ್ಯುತ್ತಮ ಚಲನಚಿತ್ರ ವೆಂಬ ಪ್ರಶಸ್ತಿಯನ್ನು ಪಡೆಯಿತು. ಆನಂತರ ಇವರ ನಿರ್ದೇಶನದಲ್ಲಿ **ಗೆಜ್ಜೆ ಪೂಜೆ** (1970) ಮೈಸೂರು ಸರ್ಕಾರದ ಅತ್ಯುತ್ತಮ ಪ್ರಶಸ್ತಿಯನ್ನು ಗಳಿಸಿತು. ಇವುಗಳಿಂದ ಕಣಗಾಲ್ ಅವರಿಗೆ ಭಾರತ ಸರ್ಕಾರದ ಮಟ್ಟದಲ್ಲಿ ಅತ್ಯುತ್ತಮ ಚಲನಚಿತ್ರ ಎಂಬ ಪ್ರಶಸ್ತಿಗೂ ಭಾಜನರಾದರು. ತ್ರಿವೇಣಿಯವರ ಕಾದಂಬರಿ ಆಧಾರಿತ **ಶರಪಂಜರ** (1971)ಚಿತ್ರ ರಜತ ಮಹೋತ್ಸವ ಆಚರಿಸಿತು. ಇದೇ ಚಲನಚಿತ್ರಕ್ಕೆ ಭಾರತ ಸರ್ಕಾರದಿಂದ **ಉತ್ತಮ ಪ್ರಾದೇಶಿಕ ಚಿತ್ರ** ಪ್ರಶಸ್ತಿಯೂ ದೊರೆಯಿತು.

ತರಾಸು ಅವರ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡ **ನಾಗರಹಾವು** (1972)ರಾಜ್ಯ ಪ್ರಶಸ್ತಿಯನ್ನು ಗಳಿಸಿತು. 1973ರಲ್ಲಿ **ದಕ್ಷಿಣ ಭಾರತ ಚಲನಚಿತ್ರ ಸಂಘವು** ಇವರನ್ನು ಅತ್ಯುತ್ತಮ ನಿರ್ದೇಶಕರೆಂದು ಆಯ್ಕೆ ಮಾಡಿತು. 1974ರಲ್ಲಿ ರಷ್ಯಾದಲ್ಲಿ ನಡೆದ **ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ** ಕಣಗಾಲ್ ಅವರನ್ನು ಭಾರತದ ಪ್ರತಿನಿಧಿಯಾಗಿ ಕಳುಹಿಸಿತು. 1975ರಲ್ಲಿ ಪ್ರದರ್ಶನ ಕಂಡ **ಎಡಕಲ್ಲು ಗುಡ್ಡದ ಮೇಲೆ** ಎಂಬ ಚಲನಚಿತ್ರಕ್ಕೆ ಕಣಗಾಲ್ ಅವರಿಗೆ **ಫಿಲಂ ಫೇರ್ ಪ್ರಶಸ್ತಿ** ದೊರಕಿತು. ಇವರು ನಿರ್ದೇಶಿಸಿದ **ಕಥಾ ಸಂಗಮ** (1976)ಕ್ಕಾಗಿ ಕಣಗಾಲ್ ಅವರಿಗೆ **ಆರ್.ಎನ್.ಆರ್. ಪ್ರಶಸ್ತಿ** ಕೊಟ್ಟು ಗೌರವಿಸಲಾಯಿತು.

ಕಣಗಾಲ್ ಅವರ ಇತರ ಚಲನಚಿತ್ರಗಳೆಂದರೆ **ಮಲ್ಲಮ್ಮನ ಪವಾಡ (1969), ಕಪ್ಪು ಬಿಳುಪು (1970), ಕರುಳಿನ ಕರೆ(1971), ಸಾಕ್ಷಾತ್ಕಾರ(1972), ಉಪಾಸನೆ (1973), ಶುಭಮಂಗಳ(1974), ಬಿಳೀ ಹೆಂಡತಿ (1975), ಕಾಲೇಜುರಂಗ(1976)** ಮುಂತಾದವು.

ಕಣಗಾಲ್ ಅವರು ಮಲೆಯಾಳಂ, ತೆಲುಗು ಹಾಗೂ ಹಿಂದಿ ಚಲನಚಿತ್ರಗಳನ್ನು ನಿರ್ದೇಶಿಸಿದರು. ನಾಯಿಕಿ ಪ್ರಧಾನ ಚಿತ್ರಗಳೇ ಕಣಗಾಲ್ ಅವರಿಗೆ ಪ್ರಿಯವಾಗಿದ್ದವು. ಇವರು ಹೊಸ ನಟನಟಿಯರನ್ನು ಕನ್ನಡ ಚಿತ್ರರಂಗಕ್ಕೆ ನೀಡಿದರು. ಇವರ ಹೆಚ್ಚಿನ ಚಲನಚಿತ್ರಗಳಲ್ಲಿ ನಾಯಕಿಯಾಗಿದ್ದ **ಆರತಿ ಅವರನ್ನು** ಗಾಂಧರ್ವ ವಿವಾಹ ಮಾಡಿಕೊಂಡಿದ್ದರು.

ಇಷ್ಟೆಲ್ಲಾ ಚಿತ್ರಗಳನ್ನು ನಿರ್ದೇಶಿಸಿದ ಹೆಚ್ಚಿನ ಒತ್ತಡದಿಂದ ಕೇವಲ 42ನೇ ವಯಸ್ಸಿನಲ್ಲಿ ಪುಟ್ಟಣ್ಣ ಕಣಗಾಲ್ ಅವರು ನಿಧನರಾದರು. ಇವರ ಗೌರವಾರ್ಥ ಎಲ್ಲಾ ಸಿನಿಮಾ ಮಂದಿರಗಳು ಒಂದು ದಿನ ಚಿತ್ರ ಪ್ರದರ್ಶಿಸಲಿಲ್ಲ.

ಇವರ ಆನಂತರ ಅನೇಕ ಹೊಸ ನಟ–ನಟಿಯರು ಪ್ರವರ್ಧಮಾನಕ್ಕೆ ಬಂದರು. ಅವರೆಲ್ಲರಿಗೂ ಪುಟ್ಟಣ್ಣ ಕಣಗಾಲ್ ಅವರೇ ಸ್ಫೂರ್ತಿ ನೀಡಿದ್ದರು.

ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಮೈಸೂರಿನ ಐದು ಕಡೆ ಏಕಕಾಲದಲ್ಲಿ ರಕ್ತದಾನ ಶಿಬಿರ

250ಕ್ಕೂ ಹೆಚ್ಚು ಮಂದಿಯಿಂದ ಸ್ವಯಂ ಪ್ರೇರಿತ ರಕ್ತದಾನ



ಮೈಸೂರು, ಏ.8(ಆರ್‌ಕೆಬಿ)– ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಮಣಿಪಾಲ್ ಹಾಸ್ಪಿಟಲ್ ಹಾಗೂ ಜೀವಧಾರ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ಶುಕ್ರವಾರ ಮೈಸೂರಿನ ಐದು ಕಡೆಗಳಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ 250ಕ್ಕೂ ಹೆಚ್ಚು ಮಂದಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು.

ನಜರ್‌ಬಾದ್ ಫೋರಂ ಮಾಲ್, ಕೆಸರೆ ಎಂಐಟಿ ಕಾಲೇಜ್, ಸರಸ್ವತಿಪುರಂನಲ್ಲಿರುವ ಮಣಿಪಾಲ್ ಸಿಟಿ ಕ್ಲಿನಿಕ್ ಹಾಗೂ ಮೇಟ ಗಳ್ಳಿಯ ಕರ್ನಾಟಕ ರಾಜ್ಯ ವಾಯು ಮಾಲಿನ್ಯ ಮಂಡಳಿಯಲ್ಲಿ ಏಕಕಾಲಕ್ಕೆ ರಕ್ತದಾನ ಶಿಬಿರ ನಡೆಸಲಾಯಿತು. ಈ ಸಂದರ್ಭದಲ್ಲಿ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಅವರು, ರಕ್ತದಾನ ಮಾಡುವುದರಿಂದ ಆರೋಗ್ಯಕರ ಜೀವನಕ್ಕೆ ಸಹಕಾರಿ ಆಗಲಿದೆ. ಹೀಗಾಗಿ ರಕ್ತದಾನದ ಕುರಿತು ಜನ ಜಾಗೃತಿ ಅಗತ್ಯವಿದೆ ಎಂದು ಹೇಳಿದರು.

ರಕ್ತದಾನ ಶಿಬಿರಗಳಿಂದ ತುರ್ತು ಸಂದರ್ಭದಲ್ಲಿ ಜನರು ರಕ್ತಕ್ಕಾಗಿ ಪರದಾಡುವುದನ್ನು ತಪ್ಪಿಸಬಹುದು. ಸಂಕಷ್ಟದಲ್ಲಿರುವವರ ಜೀವ ರಕ್ಷಣೆಗೆ ರಕ್ತದಾನ ಅನುಕೂಲವಾಗುತ್ತದೆ. ಆರೋಗ್ಯಕರ ಜೀವನಕ್ಕೂ ಇದರಿಂದ ಸಹಾಯಕವಾಗುತ್ತದೆ. ಹಾಗಾಗಿ ಸ್ವಯಂ ಸೇವಾ ಸಂಸ್ಥೆಗಳು, ಯುವಕರು ಜಾತಿ, ಧರ್ಮ ಭೇದ ಬಿಟ್ಟು ರಕ್ತದಾನ ಕಾರ್ಯಕ್ಕೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಮಣಿಪಾಲ್ ಹಾಸ್ಪಿಟಲ್ ನಿರ್ದೇಶಕ ಡಾ. ಗೌತಮ್‌ದಾಸ್, ವಸಂತ್ ಕುಮಾರ್, ಸಂತೋಷ್, ಡಾ.ಮಮತಾ, ದಿಲೀಪ್, ಸುರೇಶ್, ಮೋಹನ್ ಕುಮಾರ್, ಪೂಜಾ, ಸುಪ್ರಿಯಾ, ಭರತ್, ಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು.

ಅಡ್ಡಂಡ ಕಾರ್ಯಪ್ಪ ಹೆಸರಲ್ಲಿ ನಕಲಿ ಫೇಸ್‌ಬುಕ್ ಖಾತೆ

ಎಚ್ಚರದಿಂದಿರಲು ಸ್ನೇಹಿತರಿಗೆ ಸೂಚನೆ



ಮೈಸೂರು, ಏ. 8– ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಅವರ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ ತೆರೆದಿರುವ ದುಷ್ಕರ್ಮಿಗಳು ಕಾರ್ಯಪ್ಪ ಅವರ ಸ್ನೇಹಿತರಿಂದ ಹಣಕ್ಕೆ ಬೇಡಿಕೆ ಇಡುತ್ತಿರುವ ಬಗ್ಗೆ ವರದಿಯಾಗಿದೆ. ಫೇಸ್‌ಬುಕ್ ಮೆಸೆಂಜರ್ ಮೂಲಕ ಕಾರ್ಯಪ್ಪ ಅವರ ಸ್ನೇಹಿತರನ್ನು ಸಂಪರ್ಕಿಸುವ ದುಷ್ಕರ್ಮಿಗಳು, ತಾವು ಸಮಸ್ಯೆಯೊಂದರಲ್ಲಿ ಸಿಲುಕಿರುವುದಾಗಿ ತಿಳಿಸಿ, ತುರ್ತಾಗಿ ಹಣ ಬೇಕಾಗಿದೆ. ಬೆಳಗ್ಗೆ ಹಿಂತಿರುಗಿಸುತ್ತೇನೆ ಎಂದು ಸಾವಿರಾರು ರೂ.ಗಳಿಗೆ ಬೇಡಿಕೆ ಇಡುತ್ತಿದ್ದಾರೆ. ಹಣವನ್ನು ಫೋನ್‌ಪೇ ಅಥವಾ ಗೂಗಲ್‌ಪೇ ಮೂಲಕ ಕಳುಹಿಸುವಂತೆ ಮೊಬೈಲ್ ಸಂಖ್ಯೆಯನ್ನು ನೀಡುತ್ತಿದ್ದಾರೆ. ಕಾರ್ಯಪ್ಪನವರದಲ್ಲದ ಬೇರೆ ಮೊಬೈಲ್ ಸಂಖ್ಯೆಯನ್ನು ಕಂಡ ಸ್ನೇಹಿತರು ಆ ಸಂಖ್ಯೆಗೆ ಕರೆ ಮಾಡಿದಾಗ ಸತ್ಯಾಂಶ ಗೊತ್ತಾಗುತ್ತಿದೆ. ಈ ಕುರಿತು ಅಡ್ಡಂಡ ಕಾರ್ಯಪ್ಪ ತಮ್ಮ ಅಸಲಿ ಫೇಸ್‌ಬುಕ್ ಖಾತೆಯಲ್ಲಿ ತಿಳಿಸಿದ್ದು, "ನನ್ನ ಫೇಸ್‌ಬುಕ್ ನಕಲಿ ಮಾಡಿ ಕೆಲವರು ಹಣ ಕೇಳುತ್ತಿದ್ದಾರೆ. ಈ ಬಗ್ಗೆ ಸ್ನೇಹಿತರು ಎಚ್ಚರವಾಗಿರಿ. ಕರೆ ಮಾಡಿದವರನ್ನು ನಂಬಬೇಡಿ" ಎಂದು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

PAYING GUEST (PG)
For Girls/Ladies/Students/Working Women near Andolana Circle, New Building with all good facilities at Ramakrishnanagar, Mysore
Contact: 9742627185

20x30 HOUSE FOR SALE
Srirampura 1st Stage
Near Vivekananda Circle
Contact: 9739493555

WANTED
Female Office Assistant & Courier Delivery Boys
Shri Maruthi Courier Service
L-125, Near Akshay Bhandar, Kuvempunagar, Mysore-23
Contact: 9901241684

WANTED TEACHERS
1. Social Teacher: Qualification- M.A. B.Ed,Compulsory 3 years Teaching experience
2. English Teacher: M.A. Major in English B.Ed, Compulsory 3 years Teaching experience
3. Kannada Teacher: M.A, B.Ed, Compulsory 3 years Teaching experience
Note: English Fluency is compulsory
Contact No. 9141859198
Email: srkvidyakula@gmail.com

WANTED TEACHERS
PAVAMAN INNOVATIVE SCHOOL
(1st Std to 8th Std)
Post: Nursery-2, Primary-5 (Eng,P.E,Math,kan,Hindi) Qua: NST/D Ed/,B Ed,/Any Degree (Females only), English Communication, Computer knowledge must.
#7th cross 3rd main B M Shree Nagar Metagalli Mysore.
Mob:8197695840 / 9880964695
email: himalayanschool200@gmail.com

AIR COOLER EXCHANGE OFFER
UPTO RS. 4000 OFF
Service Center for Air Cooler
SYMPHONY, KENSTAR
Contact: 9845963421 / 9900237315

HOUSE FOR SALE
20x30 (N), Ground Floor, 1st Floor Duplex in Dattagalli 3rd Stage, Kanakadasanagara
Buyers Only: 9110826919

HOUSE FOR SALE
33x40, 2 BHK House (MUDA) with 3 Shops at A.J. Block, N.R. Mohalla, Mysore-07
Contact Mob: 8277439585/9481825365

SHOP FOR SALE BANNI HARDWARE
Electric & Plumbing Shop for Sale at Abhishek Circle, Hebbal, Mysore.
18,00,000/- along with Security Deposit of Rs. 3,00,000/-
Contact 8884073366

FOR RENT
FULLY FURNISHED WORK SPACE & CONFERENCE ROOM AVAILABLE FOR RENT NEAR KUVEMPUNAGAR DEPO CIRCLE
Contact Mobile: 9481582709

NEWLY BUILT INDEPENDENT HOUSE FOR SALE
G+2 # 38, 2 BHK, G/Floor, 2BHK, F/F 1 BHK in 2nd Floor, Architect Construction with complete teak, granite & high quality
MUDA Approved Layout, near Christ Public School, Bogadi
Contact: 9900251194/9738884777

DOCUMENT LOST
Plan Sanction Cerificate of DR. No. 1021, 1st Main, 4th Cross, Srirampura 2nd Stage, Mysore
Contact Mob: 9353647327

SITES FOR SALE
DTCP Approved 16.5 kms from Mysore City Adjacent to NH 766 T.N.Pura Road at Duddugere Gate 30x40, 30x50 etc.
9901877532
7975183634

ಬೇಕಾಗಿದ್ದಾರೆ
ಚಾಟ್ ಮತ್ತು ಜ್ಯೂಸ್ ಸೆಂಟರ್‌ನಲ್ಲಿ ಕೆಲಸ ಮಾಡಿ ಅನುಭವ ಇರುವವರು ಕೂಡಲೇ ಬೇಕಾಗಿದ್ದಾರೆ,
ಸ್ಥಳ: ಮೈಸೂರು
9480918242

FOR RENT INDEPENDENT HOUSE
MIG 26, 3 BHK with Solar at Ramakrishnanagar H Block, Dattagalli, 3rd stage, Mysore
Contact: Mob: 9972000517

Urgently Required Telecallers
For Kannada Language, Qualification: 10th, 12th Pass, fixed salary + incentive
No Target, Location: Mysore
For Details Contact: 9391891209

WANTED OFFICE HELPER
SSLC and PUC Pass or Fail below 25 years, Male only
Contact Mob: 9945616861

SITES FOR SALE
50x80 Corner Site at Bogadi 2nd Stage & 30x40 Site at Vijayanagar 4th Stage for Sale
Brokers Excuse
Contact Mob: 9901722223

Sudarshan Saur


SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೇಕಾಗಿದ್ದಾರೆ
ಎಲ್ಲಾ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ. 7th, 10th, PUC, ITI, Diploma, & Any Degree Pass/Fail, 12800/- to 20,000/- ಸಂಬಳ ವಸತಿ, ಊಟ ದೊರೆಯುತ್ತದೆ.
7899450730

SITE FOR SALE
20x30, W/F MUDA
Vijayanagar 4th Stage
Contact Mob: 9035250232

DOCUMENT LOST
Khatha Certificate of DR. No. 13, 2nd Cross, near Harsha Bar Road, Bogadi 2nd Stage, Mysore.
Contact Mob: 9620542184

WANTED
30x40 site around Bannur & TN Pura Ring Road, Vasanthnagar, JSS Nandini Police KSRTC layouts for Direct Registration, Owners only. No Brokers
Contact 8660593696

ಸೈಟುಗಳು ಮಾರಾಟಕ್ಕಿವೆ
MUDA Approved
Bank Loan Available
ಶ್ರೀನಗರ ಪಕ್ಕ ಮತ್ತು ಶ್ರೀರಾಂಪುರ ರಿಂಗ್ ರೋಡ್
8050345574

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ತಕ್ಷಣ ಬೇಕಾಗಿದ್ದಾರೆ
ಕುಶಾಲನಗರದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಸಸ್ಯಾಹಾರಿ ಹೋಟೆಲಿಗೆ ಕ್ಯಾಪ್ಟನ್–3, ವೈಟರ್ಸ್–6, ರೂಂ ಬಾಯ್–3, ಕಾಫೀ/ಟೀ ಮೇಕರ್ಸ್–3, ಟೇಬಲ್ ಕ್ಲೀನರ್ಸ್–4, ಕೂಡಲೇ ಸಂಪರ್ಕಿಸಿ:
8123132161

ಬೇಕಾಗಿದ್ದಾರೆ
ಸರ್ಕಾರದಿಂದ ಮಾನ್ಯತೆ ಪಡೆದಿರುವ ಲಿಮಿಟೆಡ್ ಕಂಪನಿಗೆ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ವಯೋಮಿತಿ 45 ವರ್ಷ ಒಳಪಟ್ಟು ವೇತನ 14800, 8 ಗಂಟೆ ಕೆಲಸ, ನಂಜನಗೂಡು ಮತ್ತು ಮೈಸೂರಿನಲ್ಲಿ ಕೆಲಸ ಊಟ,ವಸತಿ. ESI,PF ಸೌಲಭ್ಯವಿರುತ್ತದೆ ವಿದ್ಯಾರ್ಹತೆ SSLC, ಸಂಪರ್ಕಿಸಿ
9844327756/8553176110

ನಾಯಕ ವಧು ಬೇಕಾಗಿದೆ
ಮೈಸೂರು ಮೂಲದ ಬೆಂಗಳೂರಿನ 28 ವರ್ಷದ ನಾಯಕ ಪಂಗಡದ ವರನಿಗೆ ಸ್ವಜಾತಿಥಿ ಪದವೀಧರೆ ವಧು ಬೇಕಾಗಿದೆ ವರ ಆರೋಗ್ಯ ಕ್ಷೇತ್ರದ ಪದವೀಧರನಾಗಿದ್ದು ಸರಣಿ ಕ್ಲಿನಿಕ್‌ಗಳನ್ನು ಹೊಂದಿರುವ ಸಿರಿವಂತ ಗೌರವಸ್ಥ ಕುಟುಂಬಕ್ಕೆ ಸೇರಿದ್ದಾನೆ ವಿವರಗಳಿಗೆ ಸಂಪರ್ಕಿಸಿ:
9845058544

ನಿವೇಶನ ಮಾರಾಟಕ್ಕಿದೆ
30x60 W/F ರಿಂಗ್ ರೋಡ್ ದಿಕ್ಕಿಗೆ "ಮೌಲೀಂ ನಗರ" ಬಡಾವಣೆ, ಕಮರ್ಷಿಯಲ್ ಸೈಟ್ ಕೊಳ್ಳುವವರು ಮಾತ್ರ ಸಂಪರ್ಕಿಸಿ
7892434840/8660321495

WANTED
1) Graduate English Teacher-1, English Major (Aided Vacancy)
2) English Teacher with PUC D.Ed-1,
SPSVS, 2nd Stage, Srirampura, Mysore
9448596542

ಮನೆಯಿಂದಲೇ ಕೆಲಸ
ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುವ ಯುವಕ, ಯುವತಿಯರಿಗೆ ಗೃಹಿಣಿಯರಿಗೆ, ವಿದ್ಯಾರ್ಥಿಗಳಿಗೆ, ನಿವೃತ್ತರಾದವರಿಗೆ ಎಲ್ಲರಿಗೂ ಸದಾವಕಾಶ ದಿನದ ಬಿಡುವಿನ ಸಮಯದಲ್ಲಿ ಕೆಲಸ ಮಾಡಿ ತಿಂಗಳಿಗೆ 14,000 ದಿಂದ 20,000 ವರೆಗೆ ಗಳಿಸಿ ಮಾಹಿತಿಗಾಗಿ ಸಂಪರ್ಕಿಸಿ:–
9742729728 / 7795561901

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಬೇಕಾಗಿದ್ದಾರೆ
ಡೋರ್‌ಸ್ಟೆಪ್ ಕಾರ್ ವಾಶ್ ಹುಡುಗರು. ತಿಂಗಳಿಗೆ 15,000–25,000 ದ್ವಿಚಕ್ರವಾಹನ ಇರಬೇಕು.
Full time & Part Time
8105169384

ಪಾರ್ಟ್/ಫುಲ್ ಟೈಮ್
ಪಾರ್ಟ್ ಟೈಮ್ ಹಾಗೂ ಫುಲ್ ಟೈಮ್ ಕೆಲಸ ಮನೆಯಲ್ಲಿ ಕುಳಿತು ಅಂಕಿಗಳನ್ನು ಬರೆಯುವ ಮುಖಾಂತರ ವಾರಕ್ಕೆ ಗಳಿಸಿ . ಸಂಬಳ 4000 ದಿಂದ 6000 ಸಂಪರ್ಕಿಸಿ
7353369458/ 8747823697

WANTED
Lady Customer Care Executives Age 26-38 Years, Any PUC/Diploma/Degree
VANAJARAO QUICK MARRIAGES PVT.LTD
Saraswathipuram Mysore -09
0821-4245500/9343175000

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿ, ಆಫೀಸ್ ಮತ್ತು ಶೋರೂಂ ಗಳಿಗೆ 7th, SSLC, PUC, ITI, Any Degree, Pass / Fail ಆದವರಿಗೆ Helper, Packing, Labelling ಮತ್ತು Cashier, Billing, Data Entry, Receptionist, Front Office ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14000-39000 (ESI+PF+OT) ಸೇರಿ
7892878915 / 9663704915

ಉಚಿತ ಪ್ರವೇಶ
ಮೂಡಲ ವೃದ್ಧಾಶ್ರಮ, ಚಾನಗರ ಯಾರು ಇಲ್ಲದೆ ಕಷ್ಟದಲ್ಲಿ ಇರುವ ವಯೋವೃದ್ಧರು (ಪುರುಷ, ಮಹಿಳಾ) ಈ ಸದುಪಯೋಗ ಪಡೆಯಬಹುದು ಮತ್ತು ಆಶ್ರಮದಲ್ಲಿ ನರ್ಸಿಂಗ್ ಕೆಲಸ ಖಾಲಿ ಇದೆ. GNM ಆದ ಮಹಿಳೆಯರಿಗೆ ಮೊದಲ ಆದ್ಯತೆ
7019751010 / 9448804828
6362100520

ಮನೆ ಭೋಗ್ಯಕ್ಕೆ ಇದೆ
ಸಿಂಗಲ್ ಬೆಡ್ ರೂಂ ಉಳ್ಳ ಮನೆ ಭೋಗ್ಯಕ್ಕೆ ಇದೆ 1st Floor (20x30) ಪೂರ್ವದ ಬಾಗಿಲು ವಿಜಯನಗರ 4th Stage 1st Phase (ರಿಂಗ್ ರೋಡ್ ಪಕ್ಕದಲ್ಲಿ)
9945534749

ತಕ್ಷಣ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ನೋಡಿಕೊಳ್ಳಲು ಅನುಭವವಿರುವ/ಇಲ್ಲದಿರುವ ಯುವಕ ಯುವತಿಯರು, ಮಹಿಳೆಯರು, ವಿಧವೆಯರು ತಕ್ಷಣ ಸಂಪರ್ಕಿಸಿ. ಮೊದಲು ಬಂದವರಿಗೆ ಆದ್ಯತೆ (ಸರ್ಕಾರಿ ನೊಂದಾಯಿತ ಸಂಸ್ಥೆ)
9035113222

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯಿತ/ನಾಯಕ/ಎಸ್‌ಸಿ&ಎಲ್ಲಾ ಜಾತಿಯ ವಧು–ವರರಿಗಾಗಿ ಸಂಪರ್ಕಿಸಿ
(M.Sc./M.Com/MBA/MCA/BE/MBBS & II Marriages Also)
9343175000

1 ಲಕ್ಷಕ್ಕೆ ಒಂದು ದಿನಕ್ಕೆ 200ರೂ ಸೆಕ್ಯೂರಿಟಿಗೆ ಚಿನ್ನ ಕೊಡಲಾಗುವುದು
ಪ್ರತಿ ದಿನ ಚಿನ್ನಾಭರಣದ ವಹಿವಾಟಿಗೆ 1 ಲಕ್ಷಕ್ಕೆ ಒಂದು ದಿನಕ್ಕೆ 200ರೂ ಸೇರಿಸಿ ಸಂಜೆ ವಾಪಸ್ ಕೊಡಲಾಗುವುದು. ಕೊಟ್ಟಿರುವ ಹಣಕ್ಕೆ ಚಿನ್ನವನ್ನು ಸೆಕ್ಯೂರಿಟಿಯಾಗಿ ನೀಡಲಾಗುವುದು. ಸಂಪರ್ಕಿಸಿ – MNM ಗೋಲ್ಡ್ ರೇನ್ಬೋ ಕಲರ್ ಲ್ಯಾಬ್ ಪಕ್ಕ, ಅಶೋಕ ರಸ್ತೆ, ಮೈಸೂರು.
7259214732

ನಿಮ್ಮ ಚಿನ್ನಾಭರಣಕ್ಕೆ 1%ಬಡ್ಡಿ ಹಾಗೂ ಗಿರಿವಿ ಚಿನ್ನಾಭರಣ ಖರೀದಿ
ಯಾವುದೇ ಬ್ಯಾಂಕ್ ಫೈನಾನ್ಸ್ ಮತ್ತು ಗಿರವಿ ಅಂಗಡಿಯಿಂದ ಆಭರಣ ಬಿಡಿಸಿ, 1% ಬಡ್ಡಿಯಲ್ಲಿ ಹಣ ಸಾಲ ನೀಡಲಾಗುವುದು ಹಾಗೂ ಇಂದಿನ ಬೆಲೆಗೆ ಖರೀದಿಸಲಾಗುವುದು
ಸಂಪರ್ಕಿಸಿ – MNM ಗೋಲ್ಡ್, ರೇನ್ಬೋ ಸ್ಟುಡಿಯೋ ಪಕ್ಕ, ಅಶೋಕ ರಸ್ತೆ, ಮೈಸೂರು.
7259214732

ಟೆಲಿಕಾಲ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
ಗೋಲ್ಡ್ ಕಂಪನಿಯೊಂದಿಗೆ ಟೆಲಿಕಾಲ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಇರುತ್ತದೆ. ಹೆಚ್ಚಿನ ವಿವರಕ್ಕೆ ಕರೆಮಾಡಿ, MNM ಗೋಲ್ಡ್, ರೇನ್ಬೋ ಕಲರ್ ಲ್ಯಾಬ್ ಪಕ್ಕ, ಅಶೋಕ ರಸ್ತೆ, ಮೈಸೂರು.
9513425727

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–
7259865221 / 8867373902

ಉಚಿತ ಉಚಿತ ಉಚಿತ
JESWA ಸಂಸ್ಥೆಯಿಂದ ತರಬೇತಿ ಮೈಸೂರಿನಲ್ಲಿ ಟೈಲರಿಂಗ್ ಮತ್ತು ಬ್ಯೂಟಿಷಿಯನ್ ಯಾವುದೇ ರೀತಿಯ ಶುಲ್ಕಗಳೂ ಇರುವುದಿಲ್ಲ. ಸೀಮಿತ ಸೀಟ್‌ಗಳು, ಮೊದಲು ಬಂದವರಿಗೆ ಆದ್ಯತೆ
9844736136 / 9844264134

SRI LAKSHMI GROUPS
SPECIALIST IN Painting Contractor Interior and Exterior and Water Proofing Contractor Dr.Fixit, Terrace, Roof, Mould
Website: www.slgpainters.com
Present Google Review is 4.9
Call: 99459 38632 / 87927 08269
9886773293 (Karnataka Services)

ಕೆಲಸಕ್ಕೆ ಬೇಕಾಗಿದ್ದಾರೆ
1. ದೋಸೆ ಭಟ್ಟರು. 2. ಕಾಫಿ/ಟೀ ಮಾಡುವವರು. 3. ರುಬ್ಬುವವರು 4. ಅಡುಗೆ ಭಟ್ಟರು. 5. ಜ್ಯೂಸ್ ಮಾಡುವವರು. ಸಂಪರ್ಕಿಸಿ
9916256503
9986205777

ಹೆಸರು ಬದಲಾವಣೆ
ನಳಿನಿ ವೈ.ವಿ ಆದ ನಾನು ತಾ.22. 2.2022 ರಂದು ನೋಟರಿ ಶ್ರೀಮತಿ ಓ. ಮಂಜುಳಾರವರ ಸಮ್ಮುಖದಲ್ಲಿ ಗಾಯತ್ರಿ ವಿ.ಮೂರ್ತಿ ಎಂದು ಹೆಸರನ್ನು ಬದಲಾವಣೆ ಮಾಡಿಕೊಂಡಿರುತ್ತೇನೆ.
ಸಹಿ/– ಗಾಯತ್ರಿ .ವಿ. ಮೂರ್ತಿ

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

S.M.GOLD
ಗಿರಿವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5150
ನೀವು ಗಿರಿವಿಯಿಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವು ಬಿಡಿಸಿ ನಿಮ್ಮ ಚಿನ್ನದ ಪ್ಯೂರಿಟಿಯು ಗುಣಮಟ್ಟಕ್ಕೆ ಅನುಗುಣವಾಗಿ ತೆಗೆದುಕೊಂಡು ಉಳಿದ ಹಣವನ್ನು ಕೊಡುತ್ತೇವೆ. (T&C) ಕೂಡಲೇ ಸಂಪರ್ಕಿಸಿ :
8050518881

ಮೈಸೂರು ರಾಪಿಡೋ
ಬೈಕ್ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1200/– ರೂ. ವರೆಗೂ ಸಂಪಾದಿಸಿರಿ. ಅಗತ್ಯ ದಾಖಲೆಗಳು ಡಿಎಲ್, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
040-45209740

SITE FOR SALE
40x60 Site for Sale. 60 ft Road, 2nd Phase, 4th Stage, Vijayanagar, Near Marimallappa Educational Institution Contact:SMS S.Kumar
9483504650

SK CONSTRUCTIONS
ಕನಸು ನಿಮ್ಮದು ನನಸು ನಮ್ಮದು, ಮನೆ ಕಟ್ಟಲು ಕಾಯಬೇಡಿ, Construction Loan Approval Plan Working Plan, 3D Elivation ಸಹಿತ ಅತಿ ಉತ್ತಮ ಗುಣಮಟ್ಟದಲ್ಲಿ ಮಾಡಿ ಕೊಡುತ್ತೇವೆ. ಸಂಪರ್ಕಿಸಿ:
9620528490

ಮನೆ ಬಾಡಿಗೆಗೆ ಇದೆ
ಪೂರ್ವದಿಕ್ಕಿಗೆ 30x40 ಅಳತೆಯುಳ್ಳ 3 ಬೆಡ್‌ರೂಂ ಅಟ್ಯಾಚ್ಡ್ ಬಾತ್‌ರೂಂ ಸೋಲಾರ್ ವ್ಯವಸ್ಥೆ ಇದೆ. ಇಂಡಿಪೆಂಡೆಂಟ್ ಡ್ಯುಪ್ಲೆಕ್ಸ್‌ಹೌಸ್, ರಾಮಕೃಷ್ಣನಗರ ಹೆಚ್.ಬ್ಲಾಕ್, ಸಂಪರ್ಕಿಸಿ
9380681006

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಹೆಸರಾಂತ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ–ಮೊದಲು ಬಂದವರಿಗೆ ಆದ್ಯತೆ, ವಿದ್ಯಾರ್ಹತೆ:– ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ: 12,165+ESI&PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ. (ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ)
8453408502 / 9108100117

ಪ್ರವೇಶಾತಿ ಪ್ರಾರಂಭವಾಗಿದೆ
ನಂಜನಗೂಡು ತಾಲ್ಲೂಕಿನ ಹೆಡಿಯಾಲ ಗ್ರಾಮದ ಶ್ರೀಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆಯಲ್ಲಿ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ 2022–23ನೇ ಸಾಲಿನ ಎಲ್.ಕೆ.ಜಿ, ಯುಕೆಜಿ, 1 ರಿಂದ 10 ನೇ ತರಗತಿಯ ಪ್ರವೇಶಾತಿ ಪ್ರಾರಂಭವಾಗಿದೆ. ಸುಸಜ್ಜಿತ ಕಟ್ಟಡ ಹೊಂದಿದೆ ನಿಮ್ಮ ಮಕ್ಕಳ ಶಿಕ್ಷಣಕ್ಕಾಗಿ ನಮ್ಮ ಶಾಲೆಗೆ ಮಕ್ಕಳನ್ನು ದಾಖಲಿಸಿ ಶಾಲೆ ವಾಹನದ ಸೌಲಭ್ಯವಿದೆ.
9480452953 / 9113255937
9900452725

GROUND FLOOR ಮನೆ ಭೋಗ್ಯಕ್ಕೆ ದೊರೆಯುತ್ತದೆ.
ಮೈಸೂರು, ಶ್ರೀರಾಂಪುರ 2ನೇ ಹಂತ, ಕಂದಾಯನಗರ, 1ನೇ ಹಂತ, ರಿಂಗ್ ರಸ್ತೆಯ ಪಕ್ಕದಲ್ಲಿ ಕೆಳ ಅಂತಸ್ತು 30x40 ಮನೆ ಪೂರ್ವ ಬಾಗಿಲು 2 Bedrooms (Attached), Living Room, Italian Kitchen, CCTV, Solar, Geyser, Mosquito net and Doorsಕಬಿನಿ ನೀರಿನ ಸೌಲಭ್ಯವುಳ್ಳ ಮನೆ 12 ಲಕ್ಷಕ್ಕೆ ಭೋಗ್ಯಕ್ಕೆ ದೊರೆಯುತ್ತದೆ. ಹೆಚ್ಚಿನ ವಿವರಗಳಿಗೆ ಮತ್ತು ವೀಕ್ಷಿಸಲು ಮಾಲೀಕರಿಗೆ ಕರೆ ಮಾಡಿ.
8310336144
(Brokers Excuse)

ಬೇಕಾಗಿದ್ದಾರೆ
ಮಹಿಳಾ ಸಹಾಯಕಿ
ಮನೆ ಕೆಲಸಕ್ಕೆ
45 ರಿಂದ 55 ವರ್ಷದೊಳಗಿರಬೇಕು. ಸಂಪರ್ಕಿಸಿ:
9342046033

ಮೂಡಾ ನಿವೇಶನ ಮಾರಾಟಕ್ಕಿದೆ
30x40, S/F
ಲಾಲ್ ಬಹದ್ದೂರ್ ಶಾಸ್ತ್ರಿ ನಗರ
9342071453

RS CONSTRUCTIONS ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿಕೊಡುತ್ತೇವೆ. ದರ 1,70,000/– ಪ್ರತಿ ಚದರ ಉಚಿತ ಪ್ಲಾನ್ ಕೂಡ ಮಾಡಿ ಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ:
9538575009 / 7019151884

ಹೆಲ್ತ್‌ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು. ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ANM / GNM ಆದವರಿಗೆ ಕೆಲಸವಿದೆ. ಸೆಂಟ್ ಮೇರೀಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಎನ್‌ಐಇ ಕಾಲೇಜ್ ಪಕ್ಕ, ಮೈಸೂರು.
9916908454

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಚಂಚರಾಯನಹುಂಡಿ, ಎಸ್.ಕಲ್ಲಹಳ್ಳಿ, ಮದ್ದೂರು, ಮದ್ದೂರು ಹುಂಡಿ ಗ್ರಾಮಗಳಲ್ಲಿ 1 ಎಕರೆ 35 ಗುಂಟೆ, 1 ಎಕರೆ 38 ಗುಂಟೆ ಹಾಗೂ 1 ಎಕರೆ ಅತಿ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ. ಪೂರ್ಣ ಅಭಿವೃದ್ಧಿ ಪಡಿಸಲಾಗಿದೆ. ತಂತಿ ಬೇಲಿಗೇಟ್ ಕಾಂಪೌಂಡ್ ಮತ್ತು ತೋಟಗಳು ಸೇರಿರುತ್ತದೆ. ಮಾರಾಟಕ್ಕಿದೆ. ಸಂಪರ್ಕಿಸಿ:
9945661696 / 7975110748

40x60 ಸೈಟು E/F @ Rs.32 ಲಕ್ಷ
MUDA Approved Layout
ತಕ್ಷಣ ನೋಂದಣಿ /ಬ್ಯಾಂಕ್ ಲೋನ್ ಲಭ್ಯ. ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ನಂತರ ಚಾಮುಂಡಿ ಬೆಟ್ಟದ ಹಿಂಭಾಗ, ಮೈಸೂರು.
9538583377

ಜಮೀನು ಮಾರಾಟಕ್ಕಿದೆ
ಮೈಸೂರು ತಾ॥, ಜಯಪುರ ಹೋಬಳಿ, ಹಾರೋಹಳ್ಳಿ ಗುಜ್ಜೆಗೌಡನಪುರ, ಮಂಡನಹಳ್ಳಿ ಗ್ರಾಮಗಳಲ್ಲಿ 4 ಎಕರೆ 4 ಗುಂಟೆ, 1 ಎಕರೆ 22 ಗುಂಟೆ ಹಾಗೂ 35 ಗುಂಟೆ ಫಾರಂಹೌಸ್ ಕಮರ್ಷಿಯಲ್‌ಗಳಿಗೆ ಯೋಗ್ಯವಾಗಿರುತ್ತದೆ. ಮಾವಿನ ತೋಟ ಹಾಗೂ ಈ ಜಮೀನುಗಳನ್ನು ಪೂರ್ಣ ಅಭಿವೃದ್ಧಿ ಪಡಿಸಲಾಗಿದೆ. ತಂತಿ ಬೇಲಿ ಗೇಟ್ ಕಾಂಪೌಂಡ್ ಹಾಕಲಾಗಿದೆ ಮಾರಾಟಕ್ಕಿದೆ.
7975110748 / 9945661696

HOUSE FOR SALE
33x40 MUDA
(1320 Sqft) New 3BHK Duplex, N/F Door at Vijayanagar 4th Stage (RMP Layout) 1.40 Cr
100 mtrs from Ring Road
Owner: 6361295132

ಲೈಫ್ ಪಾರ್ಟ್‌ನರ್ ಬೇಕು
ಸುಂದರ ಶ್ರೀಮಂತ ಸರ್ಕಾರಿ ನೌಕರ ಒಬ್ಬಳೇ ವಿಧವೆಗೆ ಸುಂದರ ಶ್ರೀಮಂತ ಕೋಟ್ಯಾಧೀಶ್ವರ ವರ ವಿಧುರ, ವಿಚ್ಛೇದಿತರು ಲೈಫ್ ಪಾರ್ಟ್‌ನರ್ ಬೇಕು. ಜಾತಿ ಅಭ್ಯಂತರವಿಲ್ಲ. ನೇರ ಸಂಪರ್ಕಿಸಿ:
6361740552

ಹೆಸರು ಬದಲಾವಣೆ
ರಾಮಕೃಷ್ಣ ಸಿ.ಎಸ್. S/o. ಲೇಟ್ ಶಂಕರಯ್ಯ ಸಿ.ಎಸ್. ಆದ ನಾನು ಈ ಮೂಲಕ ದೃಢಪಡಿಸುವುದೇನೆಂದರೆ, ನನ್ನ ಮಗ ಶಂತನು ಆರ್. ಅವನ ಹೆಸರನ್ನು ಮುಂದೆ ಶಂತನು ಆರ್. ಜಮದಗ್ನಿ Shanthanu R. Jamadagni) ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.
ಸಹಿ/–ರಾಮಕೃಷ್ಣ ಸಿ.ಎಸ್.

ಮನೆ ಭೋಗ್ಯಕ್ಕೆ ಇದೆ
(1BHK)
ಆಲನಹಳ್ಳಿ ಬಡಾವಣೆ (ಬನ್ನೂರು ರಿಂಗ್ ರೋಡ್)
9880656872
9731110060

SITE FOR SALE
1) 0.28 land Varkodu Bannur Road
2) 30x40 12 Lakhs HD Kote Road
3) Bogadi Road 40x30 22 lks
4) 20x30 house Aravinda Nagar
5) 30x40 KHB Layout attch HD Kote Road 18 lks
PRAKRUTHI PROPERTIES
9035990359
9538690359

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.


ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಭಾದೆ, ಶತ್ರುಭಾದೇ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ನಂಬಿ ಬನ್ನಿ. ಖಾಯಂ ವಿಳಾಸ (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

SITE FOR SALE
20x30 - 12 Lakhs
30x40 - 24 Lakhs
Bank Loan upto 75%, Ready for Registration near, Ramabainagar, Gurur Bus Stop, Mysore, DTCP approved,
1.5 kms from J P Nagar Ring Road
8660105902

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕಿಕ್ಕೇರಿಯಲ್ಲಿ ಶಕ್ತಿ ದೇವಿ ಕಿಕ್ಕೇರಮ್ಮನ ಅದ್ಧೂರಿ ಜಾತ್ರೆ





ಕಿಕ್ಕೇರಿ,ಏ.8– ಎತ್ತ ನೋಡಿದರೂ ಜನ ಸಾಗರ... ವಿವಿಧೆಡೆಯಿಂದ ಆಗಮಿಸಿದ ಭಕ್ತ ಸಾಗರ. ಇದು ಈ ಬಾರಿಯ ಕಿಕ್ಕೇರಮ್ಮನವರ ಜಾತ್ರಾ ಮಹೋತ್ಸವದಲ್ಲಿ ಕಂಡು ಬಂದ ದೃಶ್ಯ.

ಶುಕ್ರವಾರ ಮುಸ್ಸಂಜೆ ಸೂರ್ಯನ ಹೊಂಗಿರಣದ ಬೆಳಕಿನಲ್ಲಿ ಮಹಾಮಾತೆ ಕಿಕ್ಕೇರಮ್ಮನವರ ಬ್ರಹ್ಮ ರಥೋತ್ಸವ ಸಹಸ್ರಾರು ಭಕ್ತರ ಉಘೇ ಉಘೇ ಘೋಷಣೆಯೊಂದಿಗೆ ವಿಜೃಂಭಣೆಯಿಂದ ನೆರವೇರಿತು. ಸತತ 2 ವರ್ಷದಿಂದ ಕೊರೊನಾದಿಂದ ಹೈರಾಣಾಗಿ, ಹಬ್ಬಗಳಿಲ್ಲದೆ ಬೇಸತ್ತಿದ್ದ ಭಕ್ತರಿಗೆ ಈ ಬಾರಿಯ ಜಾತ್ರೆ ಸಂತಸ ಮೂಡಿಸಿತು.

ರಥೋತ್ಸವ ಹೊಸಬೀದಿ, ರಥಬೀದಿ, ಕೋಟೆ ಗಣಪತಿ, ಕೆ.ಎಸ್. ನರಸಿಂಹಸ್ವಾಮಿ ಬೀದಿ, ಬ್ರಹ್ಮೇಶ್ವರ ದೇಗುಲ ಬೀದಿಯಲ್ಲಿ ಸಾಗಿತು. ಗ್ರಾಮಸ್ಥರು ದೇವಿಗೆ ಹಣ್ಣು ಕಾಯಿ ಅರ್ಪಿಸಿ, ದೀಪದಾರತಿ ಬೆಳಗಿದರು. ರಥ ಬೀದಿಗೆ ಸಾಗಿದ ಮೆರವಣಿಗೆ ರಥದ ಸುತ್ತ ಪ್ರದಕ್ಷಿಣೆ ಮಾಡಲಾಯಿತು. ನಂತರ ಅಮ್ಮನವರಿಗೆ ಅಗ್ರ ಪೂಜೆ ಸಲ್ಲಿಸಲಾಯಿತು.

ರಥೋತ್ಸವಕ್ಕೂ ಮುನ್ನ ಬ್ರಾಹ್ಮಿ ಮುಹೂರ್ತದಲ್ಲಿ ಮೂಲದೇವಿ ಹಾಗೂ ಅಡ್ಡೇವಿ ಚಿಕ್ಕಮ್ಮನವರಿಗೆ ಗಂಗಾಜಲಾಭಿಷೇಕ, ಪಂಚಾಮೃತ ಅಭಿಷೇಕ ನೆರವೇರಿಸಿ, ವಿವಿಧ ವಸ್ತ್ರ, ಆಭರಣಗಳಿಂದ ಅಲಂಕರಿಸಿ, ವಿವಿಧ ಪರಿಮಳ ಪುಷ್ಪಗಳಿಂದ ಶೃಂಗಾರ ಮಾಡಲಾಗಿತ್ತು. ಗುಡಿಯಿಂದ ಕಳಶವನ್ನು ಹೊತ್ತ ವಿಶ್ವಕರ್ಮ ಪರಿಚಾರಕರು ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಗ್ರಾಮ ಸುತ್ತ ಪ್ರದಕ್ಷಿಣೆ, ಬಲಿಯನ್ನ ಪೂಜಾ ಕಾರ್ಯ ನೆರವೇರಿಸಿದರು. ರಥಕ್ಕೆ ಸಾರತಿ ದೇವರನ್ನು ಕೂರಿಸಿ ನಿರ್ವಿಘ್ನವಾಗಿ ರಥೋತ್ಸವ ಸಾಗಲು ಪ್ರಾರ್ಥಿಸಲಾಯಿತು.

ನಾದಸ್ವರ, ಮಂಗಳ ವಾದ್ಯದೊಂದಿಗೆ ಸಾಗಿದ ರಥೋತ್ಸವಕ್ಕೆ ಜಿಲ್ಲೆ, ಹೊರ ಜಿಲ್ಲೆಯಲ್ಲದೆ, ಹೊರ ರಾಜ್ಯಗಳಾದ ಮಹಾರಾಷ್ಟ್ರ ಮುಂತಾದ ಕಡೆಯಿಂದ ಸಹಸ್ರಾರು ಭಕ್ತರು ಜಮಾಯಿಸಿದ್ದರು. ರಥ ಸಾಗುವ ಬೀದಿಯ ಇಕ್ಕೆಲಗಳಲ್ಲಿ ಜನಸಮೂಹ ನಿಂತು ದೇವಿಯನ್ನು ಕಣ್ತುಂಬಿಕೊಂಡು ರಥಕ್ಕೆ ಹಣ್ಣು ಧವನ ಎಸೆದು ಭಕ್ತಿ ಮೆರೆದರು.

ಈ ಬಾರಿ ನೂತನವಾದ ರಥಕ್ಕೆ ಬಣ್ಣ ಬಣ್ಣದ ಬಾವುಟಗಳಿಂದ ಶೃಂಗರಿಸಲಾಗಿತ್ತು. ನವ ಜೋಡಿಗಳು ಈ ಬಾರಿ ಹೆಚ್ಚಾಗಿ ಭಾಗವಹಿಸಿದ್ದರು. ಅಂತಿಮವಾಗಿ ಅಮ್ಮನವರ ರಥಕ್ಕೆ ಮೂಲಸ್ಥಾನಕ್ಕೆ ತಲುಪಿತು. ಭಕ್ತರು ದೇಗುಲಕ್ಕೆ ತೆರಳಿ ದೇವಿಯ ದರ್ಶನ ಪಡೆದು ತೀರ್ಥ ಪ್ರಸಾದ ಸ್ವೀಕರಿಸಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ರಥೋತ್ಸವದ ಅಂಗವಾಗಿ ವಿವಿಧ ಸಂಘ-ಸಂಸ್ಥೆಯವರು, ಗ್ರಾಮಸ್ಥರು ಅರವಟ್ಟಿಗೆ, ನೀರು ಮಜ್ಜಿಗೆ ಪಾನಕ ನೀಡುವ ಮೂಲಕ ಬಿಸಿಲಿನಿಂದ ಬಸವಳಿದ ಭಕ್ತರ ದಾಹ ನೀಗಿಸಿದರು.

ಸಚಿವ ಕೆ.ಸಿ. ನಾರಾಯಣಗೌಡ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು, ಲಕ್ಷೀಪುರ ಗ್ರಾಮದ ದೇವಿಯ ಒಕ್ಕಲಿನ ಬೂನಾಸಿ, ಕೆಂಚಮ್ಮ ದೊಡ್ಡಹಟ್ಟಿ ಮಾರಮ್ಮ ವತಾರದ ಮುಖಂಡರು ಸೇರಿದಂತೆ ಸಾವಿರಾರು ಭಕ್ತರು ಉಪಸ್ಥಿತರಿದ್ದರು.

ಪ್ರಚೋದನಾತ್ಮಕ ವಿಚಾರಗಳಿಗೆ ಕಿವಿಗೊಡದಂತೆ ಹೆಚ್‌ಡಿಕೆ ಸಲಹೆ



ಕೆ.ಆರ್.ಪೇಟೆ,ಏ.7(ಶ್ರೀನಿವಾಸ್)– ಗ್ರಾಮೀಣ ಭಾಗದಲ್ಲಿ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಗುಣ ಇಂದಿಗೂ ಇದೆ. ಇದರಿಂದಾಗಿಯೇ ಮಳೆ ಬೆಳೆ ಆಗುತ್ತಿದೆ. ಪರಸ್ಪರ ನಂಬಿಕೆಯಿಂದ ಬದುಕುವ ಗುಣವನ್ನು ನಾವು ಗ್ರಾಮೀಣ ಭಾಗದ ಜನತೆಯಿಂದ ಕಲಿಯಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿ ಆಲೇನಹಳ್ಳಿಯಲ್ಲಿ ಜೀರ್ಣೋದ್ಧಾರಗೊಂಡಿರುವ ನೂತನ ಶಂಭುಲಿಂಗೇಶ್ವರ ದೇವಾಲಯದ ಉದ್ಘಾಟಿಸಿ ಮಾತನಾಡಿದರು.

ರಾಜ್ಯದ ಯುವಕರು ಧಾರ್ಮಿಕ ಪ್ರಚೋದನಾತ್ಮಕ ವಿಚಾರಗಳಿಗೆ ಕಿವಿಗೊಡಬಾರದು. ರಾಜ್ಯದಲ್ಲಿರುವ ಕೆಲವು ಕಿಡಿಗೇಡಿ ಸಂಘಟನೆಗಳು ಸಂಘರ್ಷದ ವಾತಾವರಣವನ್ನು ಸೃಷ್ಟಿಸುತ್ತಿದೆ. ಇದರ ಬಗ್ಗೆ ಎಚ್ಚರದಿಂದ ಇರಬೇಕು. ಸ್ವಾಮಿ ವಿವೇಕಾನಂದರು ಯುವಶಕ್ತಿಯ ಬಗೆಗೆ ಅಪಾರವಾದ ಒಲವನ್ನು ಹೊಂದಿದ್ದರು. ಯುವಶಕ್ತಿಯ ಸದ್ಬಳಕೆಯಾದರೆ ಬಲಿಷ್ಠ ರಾಷ್ಟ್ರವನ್ನು ನಿರ್ಮಾಣ ಮಾಡಬಹುದು ಎಂದು ಹೇಳಿದ್ದರು. ಆದರೆ ಇಂದೇನಾಗಿದೆ ಯುವಶಕ್ತಿಯ ಬಳಕೆ ಎಂತಹ ಕೆಲಸಗಳಿಗೆ ಆಗುತ್ತಿದೆ. ಕೆಲವು ರಾಜಕಾರಣಿಗಳು ತಮ್ಮ ರಾಜಕೀಯ ಪ್ರತಿಷ್ಠೆಗಾಗಿ ಯುವಕರಲ್ಲಿ ದ್ವೇಷದ ಕಿಚ್ಚು ಹೆಚ್ಚಿಸುವ ಮಂತ್ರವನ್ನು ಹೇಳಿಕೊಡುತ್ತಿದ್ದಾರೆ ಇದಕ್ಕೆ ಯುವಕರು ಕಿವಿಗೊಡಬಾರದು ಎಂದು ಕುಮಾರಸ್ವಾಮಿ ಮನವಿ ಮಾಡಿದರು.

ಪೆಟ್ರೋಲ್, ಡೀಸೆಲ್, ಗ್ಯಾಸ್, ಆಹಾರ ಪದಾರ್ಥಗಳು ಗಗನಮುಖಿಯಾಗಿದೆ ರೈತರು ಬೆಳೆದಂತಹ ಬೆಳೆಯನ್ನು ಕೇಳುವವರಿಲ್ಲ, ರೈತರಿಗೆ ಜಾತಿಯಿದೆಯೆ? ಶ್ರೀಲಂಕಾ ಇಂದು ಯಾವ ಪರಿಸ್ಥಿತಿಯಲ್ಲಿದೆ. ಅಂತಹ ಪರಿಸ್ಥಿತಿ ನಮ್ಮ ದೇಶಕ್ಕೆ ಬರಬಾರದು. ಇದರ ಬಗೆಗೆ ಆಡಳಿತ ನಡೆಸುವವರು ಗಮನವನ್ನು ನೀಡಲಿ. ಅದನ್ನು ಬಿಟ್ಟು ಯುವಕರನ್ನು ಬೀದಿಗೆ ತರಬೇಡಿ ಎಂದು ಹೇಳಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಭಕ್ತ ಸಮೂಹಕ್ಕೆ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಮಾತನಾಡಿ, ಕೆಆರ್.ಪೇಟೆ ತಾಲೂಕು ನಮಗೆ ಇಂದಿಗೂ ಬೇರೆ ಎಂದು ಅನ್ನಿಸಲೇ ಇಲ್ಲ. ಅಂತಹ ಪ್ರೀತಿಯನ್ನು ಈ ತಾಲೂಕಿನ ಜನರು ತೋರುತ್ತಿದ್ದಾರೆ. ಅಭಿವೃದ್ಧಿಯ ವಿಚಾರದಲ್ಲಿ ಎಂದಿಗೂ ಕೂಡಾ ಮಲತಾಯಿ ಧೋರಣೆಯನ್ನು ನಮ್ಮ ಕುಟುಂಬ ತೋರಿಲ್ಲ ಎಂದರು. ಅಧ್ಯಕ್ಷತೆಯನ್ನು ವಹಿಸಿದ್ದ ಸಚಿವ ಡಾ.ಕೆ.ಸಿ. ನಾರಾಯಣಗೌಡ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಸಕ ಸಾ.ರಾ.ಮಹೇಶ್, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಚಂದ್ರಶೇಖರನಾಥ ಸ್ವಾಮೀಜಿ, ಆಧ್ಯಾತ್ಮ ಚಿಂತಕ ಪ್ರಕಾಶ್‌ರಾವ್, ಮೈಸೂರು ಶಾಖಾಮಠದ ಸೋಮನಾಥ ಸ್ವಾಮೀಜಿ, ಮುಡಾ ಮಾಜಿ ಅಧ್ಯಕ್ಷ ಕೆ.ಶ್ರೀನಿವಾಸ್, ಜಿಪಂ ಮಾಜಿ ಸದಸ್ಯ ಅಂಬರೀಷ್, ಜಿಪಂ ಸದಸ್ಯ ಹೆಚ್.ಟಿ.ಮಂಜು, ಎಂಎಲ್‌ಸಿ ಸದಸ್ಯ ಮಂಜೇಗೌಡ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕಿರಾಂ, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವ ರಾಜು, ಕೃಷ್ಣೇಗೌಡ, ಪುರಸಭೆ ಮಾಜಿ ಅಧ್ಯಕ್ಷ ಕೆ.ಟಿ.ಗಂಗಾಧರ್, ಶ್ರೀಸುಬ್ರಹ್ಮಣ್ಯ ಸೇವಾ ಟ್ರಸ್ಟ್‌ನ ಅಧ್ಯಕ್ಷ ಬಿ.ಎಂ.ಕಿರಣ್, ಎ.ಎಂ.ಸಂಜೀವಪ್ಪ ಇತರರಿದ್ದರು.

ಕೆಸಿಎನ್–ಹೆಚ್‌ಡಿಕೆ ಎದುರಾದರು ಮಾತಿಲ್ಲ, ಕಥೆಯಿಲ್ಲ

ವೇದಿಕೆಯಲ್ಲಿ ನಿರ್ಮಲಾನಂದನಾಥ ಶ್ರೀಗಳು ಮಾತನಾಡುತ್ತಿದ್ದ ವೇಳೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವೇದಿಕೆಗೆ ಆಗಮಿಸಿದರು. ಅಷ್ಟರಲ್ಲಾಗಲೇ ವೇದಿಕೆಯಲ್ಲಿದ್ದ ಸಚಿವ ಕೆ.ಸಿ.ನಾರಾಯಣಗೌಡ ಹಾಗೂ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮುಖಾಮುಖಿಯಾದರು. ಕುಮಾರಸ್ವಾಮಿ ಕಂಡು ಎದ್ದು ನಿಂತು ಗೌರವವನ್ನು ಸೂಚಿಸಿದ ನಾರಾಯಣಗೌಡ ತಾವು ಕುಳಿತಿದ್ದ ಆಸನವನ್ನು ಬಿಟ್ಟುಕೊಟ್ಟರು. ಆದರೆ ಕಾರ್ಯಕ್ರಮದ ಅಂತ್ಯದವರೆಗೂ ಅವರು ಪರಸ್ಪರ ಮಾತನಾಡಿದ್ದು ಕಂಡು ಬರಲೇ ಇಲ್ಲ.

ಶ್ರೀರಂಗಪಟ್ಟಣ:18 ಕುಟುಂಬಗಳಿಗೆ ಆರ್ಥಿಕ ನೆರವು



ಶ್ರೀರಂಗಪಟ್ಟಣ,ಏ,8(ವಿನಯ್ ಕಾರೇಕುರ)–ತಾಲೂಕಿನ ಕಸಬಾ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ವಿವಿಧ ಕಾರಣಗಳಿಂದ ಮೃತಪಟ್ಟವರ ಕುಟುಂಬಗಳಿಗೆ ಎನ್. ಶಂಕರೇಗೌಡ ಚಾರಿಟಬಲ್ ಟ್ರಸ್ಟ್‌ನ ಪೋಷಕ ಇಂಡುವಾಳು ಸಚ್ಚಿದಾನಂದ ಗುರುವಾರ ಆರ್ಥಿಕ ನೆರವು ನೀಡಿದರು. ಬಿಜೆಪಿ ಜಿಲ್ಲಾ ಘಟಕದ ಉಪಾಧ್ಯಕ್ಷ ಟಿ. ಶ್ರೀಧರ್ ಇತರರ ಜತೆಗೂಡಿ ನಗುವನಹಳ್ಳಿ ಗ್ರಾಮ ಸೇರಿ ನಗುವನಹಳ್ಳಿ ಕಾಲೋನಿ, ಚಿಕ್ಕ ಅಂಕನಹಳ್ಳಿ, ಮೇಳಾಪುರ, ಬೆಳವಾಡಿ, ಚಂದಗಾಲು ಗ್ರಾಮಗಳಿಗೆ ತೆರಳಿ ಮೃತರ ಕುಟುಂಬಗಳಿಗೆ ಅವರು ಸಾಂತ್ವನ ಹೇಳಿದರು. ಚಿಕ್ಕ ಅಂಕನಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಭವನ ದುಸ್ಥಿತಿಯಲ್ಲಿದ್ದು, ಇದರ ಅಭಿವೃದ್ಧಿಗೆ ವೈಯುಕ್ತಿಕ ನೆರವು ನೀಡುತ್ತೇನೆ. ಅಗತ್ಯಬಿದ್ದರೆ ಸಂಸದರ ನಿಧಿಯಿಂದಲೂ ಅನುದಾನ ಕೊಡಿಸುವುದಾಗಿ ಸಚ್ಚಿದಾನಂದ ಭರವಸೆ ನೀಡಿದರು. ಮೇಳಾಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಜೆ. ಪುಟ್ಟರಾಜು, ಗ್ರಾ.ಪಂ. ಸದಸ್ಯರಾದ ಕೃಷ್ಣ, ಆನಂದ್, ಶಿವಕುಮಾರ್ ಇತತರು ಜತೆಗಿದ್ದರು.

ಸತ್ತಿರುವ ಜವಾಹರಿ ಹಳೇ ವಿಡಿಯೋಗೆ ಹೊಸ ಆಡಿಯೋ

ಅಲ್ ಖೈದಾ ಮುಖ್ಯಸ್ಥನ ವಿಡಿಯೋ ಬಗ್ಗೆ ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಪ್ರತಿಕ್ರಿಯೆ

ಮೈಸೂರು, ಏ.8– ಅಲ್‌ಖೈದಾ ಮುಖ್ಯಸ್ಥ ಜವಾಹರಿಯನ್ನು ಅಮೆರಿಕಾ ಆಗಲೇ ಕೊಂದಿದೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ಹಳೇ ವೀಡಿಯೋಗೆ ಹೊಸ ಆಡಿಯೋ ಸೇರಿಸಿವೆ ಎಂದು ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಲ್ ಖೈದಾ ಮುಖ್ಯಸ್ಥ ಜವಾಹರಿಯನ್ನು ಅಮೆರಿಕಾ ಆಗಲೇ ಕೊಂದಿದೆ. ಅಲ್ಲಿರುವ ವೀಡಿಯೋ ನಿಜ. ಆದರೆ ಅದಕ್ಕೆ ಸೇರಿಸಿರುವ ಆಡಿಯೋ ಸುಳ್ಳು. ಇದರ ಸೃಷ್ಟಿಕರ್ತ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಮಂಡ್ಯದ ವಿದ್ಯಾರ್ಥಿನಿಯನ್ನು ಹೊಗಳಿರುವ ರೀತಿ ಆಡಿಯೋ ಸೇರಿಸಲಾಗಿದೆ. ಈ ಬಗ್ಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿರುವುದು ಸರಿಯಾಗಿದೆ. ಅಮೆರಿಕಾ ಸುಳ್ಳು ಹೇಳುವುದಿಲ್ಲ. ಅಲ್‌ಖೈದಾ ಸಂಘಟನೆ ಪ್ರಪಂಚದಾದ್ಯಂತ ಬ್ಯಾನ್ ಆಗಿದೆ ಎಂದು ಹೇಳಿದರು.

ವಿದ್ಯುತ್ ಹಗರಣ: ವಿದ್ಯುತ್ ಉತ್ಪಾದನೆ ಸಾಮರ್ಥ್ಯವಿದ್ದರೂ ರಾಜ್ಯ ಬಿಜೆಪಿ ಸರ್ಕಾರ ಕಮಿಷನ್‌ಗಾಗಿ ಎರಡು ಕಂಪೆನಿಗಳಿಂದ ಸರಬರಾಜು ಮಾಡಿಕೊಳ್ಳುತ್ತಿದೆ. ರಾಜ್ಯದಲ್ಲಿ ಎರಡೂವರೆ ವರ್ಷದಲ್ಲಿ 6 ಬಾರಿ ಶುಲ್ಕ ಹೆಚ್ಚಳ ಮಾಡಿದ್ದಾರೆ. ಒಂದು ಯೂನಿಟ್‌ಗೆ 2 ರೂ. ನೀಡುತ್ತಿದ್ದು, ಇದರಲ್ಲಿ ಒಂದು ರೂ. ಕಮಿಷನ್ ಬಿಜೆಪಿಗೆ ಸಿಗುತ್ತಿದೆ. ಬಿಜೆಪಿಗೆ ವಾರ್ಷಿಕ ಸುಮಾರು 5–6 ಸಾವಿರ ಕೋಟಿ ರೂ. ಪಡೆದುಕೊಳ್ಳುತ್ತಿದ್ದಾರೆ. ವಿದ್ಯುತ್ ಉತ್ಪಾದನೆ ಸಾಮರ್ಥ್ಯವಿದ್ದರೂ ಬೇರೆಡೆ ಖರೀದಿಸುವ ಬಗ್ಗೆ ಹಿರಿಯ ಅಧಿಕಾರಿ ಪೊನ್ನುರಾಜ್ ಇಲಾಖೆಗೆ ಪತ್ರ ಬರೆದಿದ್ದಾರೆ ಎಂದು ತಿಳಿಸಿದರು.

ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆ ಸರ್ಕಾರದ ಪ್ರಾಯೋಜಿತ ಸಂಘ ಸಂಸ್ಥೆಗಳ ಕಾರ್ಯಕ್ರಮ. ಗೃಹಮಂತ್ರಿ ಆರಗ ಜ್ಞಾನೇಂದ್ರ ಅವರಿಂದ ರಾಜ್ಯ ನಗೆಪಾಟಲಿಗೆ ಈಡಾಗಿದೆ. ಸಿ.ಟಿ ರವಿ ಅವರಿಗೆ ಬರಿ ಕಿಡಿ ಹೊತ್ತಿಸುವುದೇ ಕೆಲಸ. ಅವರು ರಾಜ್ಯದ ನಂಬರ್ 1 ಮಾರಕ ವ್ಯಕ್ತಿ ಎಂದು ಕಿಡಿಕಾರಿದರು.

ತಾಯಿಯಾಗಲು ಬಯಸಿದ ಮಹಿಳೆ: ಗಂಡನಿಗೆ 15 ದಿನದ ಪರೋಲ್

ಜೈಪುರ, ಏ. 8– ರಾಜಸ್ಥಾನದಲ್ಲಿ ಪೆರೋಲ್‌ಗೆ ಸಂಬಂಧಿಸಿದಂತೆ ವಿಚಿತ್ರ ಪ್ರಕರಣವೊಂದು ಬೆಳಕಿಗೆ ಬಂದಿದೆ. ಮಗು ಬೇಕೆಂದು ಕೋರಿ ಪತ್ನಿ ಸಲ್ಲಿಸಿದ್ದ ಮನವಿಯನ್ನು ಆಧರಿಸಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ವ್ಯಕ್ತಿಗೆ ರಾಜಸ್ಥಾನ ಹೈಕೋರ್ಟ್ ಪೆರೋಲ್ ನೀಡಿದೆ.

ನ್ಯಾಯಾಧೀಶರಾದ ಸಂದೀಪ್ ಮೆಹ್ತಾ ಮತ್ತು ಫರ್ಜಂಡ್ ಅಲಿ ಅವರ ವಿಭಾಗೀಯ ಪೀಠವು ಭಿಲ್ವಾರಾ ಜಿಲ್ಲೆಯ ನಿವಾಸಿ ನಂದಲಾಲ್‌ಗೆ 15 ದಿನಗಳ ಪೆರೋಲ್ ನೀಡಿದೆ.

ಜೈಲು ಪಾಲಾಗಿದ್ದ ಪತಿಯಿಂದ ಮಗು ಪಡೆಯಬೇಂದು ಬಯಸಿದ ಮಹಿಳೆ ಜಿಲ್ಲಾಧಿಕಾರಿಯನ್ನು ಸಂಪರ್ಕಿಸಿ ಪೆರೋಲ್‌ಗಾಗಿ ಕೋರಿದ್ದರು. ಆದರೆ ಜಿಲ್ಲಾಧಿಕಾರಿ ತನ್ನ ಮನವಿಗೆ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಪತ್ನಿ ಹೈಕೋರ್ಟ್ ಮೆಟ್ಟಿಲೇರಿದ್ದಾಳೆ. ಪತ್ನಿಯ ವಾದವನ್ನು ಆಲಿಸಿದ ನ್ಯಾಯಾಲಯ ಮಾನವೀಯ ನೆಲೆಯಲ್ಲಿ ಪತಿಗೆ 15 ದಿನಗಳ ಕಾಲ ಪೆರೋಲ್ ಮೇಲೆ ತೆರಳುವಂತೆ ಆದೇಶ ನೀಡಿದೆ. ಇನ್ನು, ಸುಮಾರು ಹನ್ನೊಂದು ತಿಂಗಳ ಹಿಂದೆ ನಂದಲಾಲ್ 20 ದಿನಗಳ ಪೆರೋಲ್ ಪಡೆದಿದ್ದರು ಎಂಬುವುದು ಗಮನಿಸಬೇಕಾದ ವಿಚಾರ.

ಶಿಕ್ಷೆ ಪಡೆದು ಜೈಲು ಸೇರುವ ಕೆಲ ಸಮಯದ ಹಿಂದಷ್ಟೇ ನಂದಲಾಲ್ ವಿವಾಹವಾಗಿದ್ದರು. ಅವರು ಫೆಬ್ರವರಿ 6, 2019 ರಿಂದ ಅಜ್ಮೀರ್ ಜೈಲಿನಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾರೆ. ಕಳೆದ ವರ್ಷ ಮೇ ತಿಂಗಳಲ್ಲಿ ಅವರಿಗೆ ಮೊದಲ ಬಾರಿ ಪೆರೋಲ್ ನೀಡಲಾಯಿತು. ಏತನ್ಮಧ್ಯೆ ಕೊರೊನಾ ವೈರಸ್ ಮತ್ತು ಇತರ ಕಾರಣಗಳಿಂದ, ನಂದಲಾಲ್ ಅವರ ಪತ್ನಿ ಮತ್ತು ಕುಟುಂಬದೊಂದಿಗೆ ಸುಮಾರು ಎರಡು ವರ್ಷಗಳವರೆಗೆ ಭೇಟಿಯಾಗಲು ಸಾಧ್ಯವಾಗಲಿಲ್ಲ.

ಹೀಗಿರುವಾಗ ಪತ್ನಿ ತನ್ನ ಅರ್ಜಿಯೊಂದಿಗೆ ಜೈಲು ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಯನ್ನು ಸಂಪರ್ಕಿಸಿದ್ದರು. ಕೆಲ ದಿನಗಳ ಹಿಂದೆ ವಕೀಲರ ಜತೆ ಜೈಲು ಅಧಿಕಾರಿಗಳನ್ನು ಸಂಪರ್ಕಿಸಿ ತಾನು ತಾಯಿಯಾಗಲು ಬಯಸುವುದಾಗಿ ಹೇಳಿದ್ದಳು. ತನ್ನ ಹಕ್ಕನ್ನು ಈಡೇರಿಸಲು ತನ್ನ ಪತಿಯನ್ನು ಕೆಲವು ದಿನಗಳ ಕಾಲ ಪೆರೋಲ್ ಮೇಲೆ ಬಿಡುವಂತೆ ಒತ್ತಾಯಿಸಿದಳು. ಕಾರಾಗೃಹದ ಅಧಿಕಾರಿಗಳಿಂದ ಯಾವುದೇ ಪ್ರತಿಕ್ರಿಯೆ ಬಾರದೆ ಇರುವುದರಿಂದ ಜಿಲ್ಲಾಧಿಕಾರಿ ಬಳಿ ತೆರಳಿ ಮನವಿ ಸಲ್ಲಿಸಿದರು. ಜಿಲ್ಲಾಧಿಕಾರಿ ಕೂಡ ಇದನ್ನು ಗಂಭೀರವಾಗಿ ಪರಿಗಣಿಸದೆ ತಮ್ಮ ಕಾರ್ಯದಲ್ಲಿ ಮಗ್ನರಾಗಿದ್ದರು.

ಜಿಲ್ಲಾಧಿಕಾರಿಯ ಅನುಮತಿಗೆ ಕಾದು ಬೇಸತ್ತ ಮಹಿಳೆ ನೇರವಾಗಿ ಹೈಕೋರ್ಟ್‌ಗೆ ತೆರಳಿ ನ್ಯಾಯಾಧೀಶರ ಮುಂದೆ ತನ್ನ ಮನವಿ ಸಲ್ಲಿಸಿದ್ದಾಳೆ. ತನ್ನ ಪತಿ ಉದ್ದೇಶಪೂರ್ವಕವಾಗಿ ಅಪರಾಧ ಮಾಡಿದ್ದಲ್ಲ, ಅವನು ವೃತ್ತಿಪರ ಅಪರಾಧಿಯಲ್ಲ ಎಂದು ಉಲ್ಲೇಖಿಸಿದ್ದಾರೆ. ತನ್ನ ಪತಿ ಎಲ್ಲಾ ಜೈಲು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದಾರೆ ಎಂದೂ ಅವರು ಹೇಳಿದ್ದಾರೆ.

ವಿಕಲಚೇತನರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ

ಹೆಚ್.ಡಿ.ಕೋಟೆ, ಏ.8(ಮಂಜು)– ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ಪುರಸಭೆ ಹಾಗೂ ಸಾರ್ವಜನಿಕ ಆಸ್ಪತ್ರೆ ವತಿಯಿಂದ ವಿಕಲಚೇತನರಿಗಾಗಿ ಯುಡಿಐಡಿ ಕಾರ್ಡ್ ಮತ್ತು ಉಚಿತ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪುರಸಭಾಧ್ಯಕ್ಷೆ ಶಿವಮ್ಮ ಚಾಕಳ್ಳಿ ಕೃಷ್ಣ, ಪುರಸಭೆ ವಾರ್ಷಿಕ ಬಜೆಟ್‌ನಲ್ಲಿ ವಿಕಲಚೇತನರಿಗೆ ಶೇ.5ರಷ್ಟು ಅನುದಾನ ಮೀಸಲಿರಿಸಿದ್ದು, ಅವರಿಗೆ ಅನುಕೂಲವಾಗುವ ಯುಡಿಐಡಿ ಕಾರ್ಡ್ ಸೇರಿದಂತೆ ಇನ್ನಿತರ ಉಪಯುಕ್ತ ಸಾಮಗ್ರಿಗಳನ್ನು ನೀಡಲಾಗುವುದು ಎಂದರು. ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ, ವಿಶೇಷ ವಿಕಲಚೇತನರಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರತಿ ಮಂಗಳವಾರ ಮಧ್ಯಾಹ್ನ 2 ರಿಂದ 3 ಗಂಟೆವರೆಗೆ ಆರೋಗ್ಯ ತಪಾಸಣೆ ನಡೆಸಲಾಗುವುದು. ಫಲಾನುಭವಿಗಳು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಈ ವೇಳೆ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಸೋಮಣ್ಣ, ಹೃದಯ ತಜ್ಞ ಡಾ.ಪ್ರಜ್ವಲ್, ಕೀಲು ಮತ್ತು ಮೂಳೆ ತಜ್ಞ ಡಾ.ಶ್ರೀನಿವಾಸಮೂರ್ತಿ, ಪುರಸಭೆ ಸದಸ್ಯರಾದ ವೆಂಕಟೇಶ್, ನಾಗರಾಜು, ಶಾಂತಮ್ಮ, ಸೋಮಶೇಖರ್, ಯಶವಂತ್, ಆರೋಗ್ಯ ಸಿಬ್ಬಂದಿಗಳಾದ ನಾಗೇಂದ್ರ, ರವಿರಾಜ್, ಅಶೋಕ್, ಕಾಡಶೆಟ್ಟಿ, ಹನುಮಂತು, ಪುರಸಭೆ ಸಿಬ್ಬಂದಿಗಳಾದ ಸುರೇಶ್, ರಾಘವೇಂದ್ರ ಸೇರಿದಂತೆ ವಿಕಲಚೇತನರಿದ್ದರು.

ಕೆ.ಆರ್.ನಗರ ಪುರಸಭೆಗೆ ಪ್ರಕಾಶ್ ನೂತನ ಅಧ್ಯಕ್ಷ



ಕೆ.ಆರ್.ನಗರ, ಏ.8– ಪಟ್ಟಣದ ಪುರಸಭೆ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್‌ನ ಕೋಳಿ ಪ್ರಕಾಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದೆ ಆಗಿದ್ದ ಆಂತರಿಕ ಒಪ್ಪಂದದಂತೆ ಕೆ.ಜೆ.ಸುಬ್ರಹ್ಮಣ್ಯ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಪಟ್ಟಣದ ಪುರಸಭಾ ಸಭಾಂಗಣದಲ್ಲಿ ಶುಕ್ರವಾರ ನೂತನ ಅಧ್ಯಕ್ಷರ ಆಯ್ಕೆ ಸಂಬಂಧ ನಡೆದ ಚುನಾವಣೆಯಲ್ಲಿ ಕೋಳಿ ಪ್ರಕಾಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ತಹಸೀಲ್ದಾರ್ ಎಸ್.ಸಂತೋಷ್ ಘೋಷಿಸಿದರು.

ನೂತನ ಅಧ್ಯಕ್ಷರಾಗಿ ಕೋಳಿ ಪ್ರಕಾಶ್ ಅವಿರೋಧವಾಗಿ ಆಯ್ಕೆಯಾಗುತ್ತಿದ್ದಂತೆ ಕಾಂಗ್ರೆಸ್ ಮುಖಂಡರು ಪಟಾಕಿ ಸಿಡಿಸಿ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಚುನಾವಣೆಯಲ್ಲಿ ಸಂಸದೆ ಸುಮಲತಾ, ಪುರಸಭಾ ಉಪಾಧ್ಯಕ್ಷೆ ಸೌಮ್ಯ, ಸ್ಥಾಯಿ ಸಮಿತಿ ಅಧ್ಯಕ್ಷ ಶಂಕರ್, ಕೆ.ಪಿ. ಪ್ರಭುಶಂಕರ್, ನಟರಾಜ್, ಶಂಕರ್, ಶಿವಕುಮಾರ್ ನಾಯಕ್, ಜಾವೀದ್ ಪಾಷ, ಸೈಯದ್ ಸಿದ್ದಿಕ್, ಸಂತೋಷ್ ಗೌಡ, ಕೆ.ಬಿ.ವೀಣಾ, ಮಹಿದಾಬಾನು, ಕೆ.ಎಲ್.ಜಗದೀಶ್, ಉಮೇಶ್, ಸರೋಜ, ಮಂಜುಳ, ಬಿ.ಎಸ್.ತೋಂಟದಾರ್ಯ, ಅಶ್ವಿನಿ, ಪಲ್ಲವಿ, ವಸಂತಮ್ಮ ಮತ್ತು ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್, ಶಿವಣ್ಣ, ಕೃಷ್ಣೇಗೌಡ, ಬುಡಿಗೌಡ, ಬಸವರಾಜ್, ಕುಮಾರ್, ಚಂದ್ರು, ನಿತಿನ್ ಸೇರಿದಂತೆ ಇನ್ನಿತರರಿದ್ದರು.

ನಾಗಲಗೆರೆ ಡೈರಿ ಅಧ್ಯಕ್ಷೆ, ಉಪಾಧ್ಯಕ್ಷೆ ಅವಿರೋಧ ಆಯ್ಕೆ




ತಿ.ನರಸೀಪುರ, ಏ.8(ಎಸ್‌ಕೆ)– ತಾಲೂಕಿನ ನಾಗಲಗೆರೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷರಾಗಿ ಸಿದ್ದಮ್ಮಣ್ಣಿ ಹಾಗೂ ಉಪಾಧ್ಯಕ್ಷರಾಗಿ ಮಲ್ಲಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ ಸಂಬಂಧ ಕರೆಯಲಾಗಿದ್ದ ಚುನಾವಣಾ ವಿಶೇಷ ಸಭೆಯಲ್ಲಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಕ್ರಮವಾಗಿ ಸಿದ್ದಮ್ಮಣ್ಣಿ ಹಾಗೂ ಮಲ್ಲಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ಉಮೇದುವಾರಿಕೆ ಸಲ್ಲಿಸದ ಕಾರಣ ಇವರಿಬ್ಬರ ಅವಿರೋಧ ಆಯ್ಕೆಯನ್ನು ಸಹಕಾರ ಇಲಾಖೆಯ ಚುನಾವಣಾಧಿಕಾರಿ ಹರೀಶ್ ಪ್ರಕಟಿಸಿದರು.

ಸಹಕಾರ ಸಂಘದಲ್ಲಿ ಸರ್ಕಾರದ ಪ್ರತಿನಿಧಿ ಸೇರಿದಂತೆ ಒಟ್ಟು 13 ಸದಸ್ಯರಿದ್ದು, 10 ಮಂದಿ ಸದಸ್ಯರು ಚುನಾವಣೆಯ ಸಭೆಯಲ್ಲಿ ಭಾಗವಹಿಸಿ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ಹಿಂದುಳಿದ ಪ್ರವರ್ಗ ಎ ಮತ್ತು ಬಿ ಮೀಸಲಾತಿಯಲ್ಲಿ ಯಾರೂ ಆಯ್ಕೆಯಾಗದ ಕಾರಣ ಇಬ್ಬರು ನಿರ್ದೇಶಕರ ಸ್ಥಾನಕ್ಕೆ ಆಯ್ಕೆ ನಡೆದಿಲ್ಲ. ಸಂಘದ ನಿರ್ದೇಶಕರಾದ ಲಕ್ಷ್ಮಮ್ಮ, ಸಿದ್ದಮ್ಮ, ಜಲಜಮ್ಮ, ಸಾಕಮ್ಮ, ಸುನಂದಾ, ಮಹದೇವಮ್ಮ, ರಾಜಮ್ಮ ಹಾಗೂ ಪ್ರೇಮ ಸಭೆಯಲ್ಲಿ ಹಾಜರಿದ್ದರು.

ಕೊಳತ್ತೂರು ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ(ಮಾಯಪ್ಪ), ಗ್ರಾಪಂ ಸದಸ್ಯ ಶಾಂತರಾಜು, ಪುಟ್ಟಮಾದಯ್ಯ, ಮಾಜಿ ಸದಸ್ಯರಾದ ಮರಿಜೋಗಿ, ನಂಜಯ್ಯ, ಹುಚ್ಚಿ ಮಾದಯ್ಯ, ಗ್ರಾಪಂ ಮಾಜಿ ಅಧ್ಯಕ್ಷೆ ಪದ್ಮಮ್ಮ, ಯಜಮಾನರಾದ ಜವರನಾಯ್ಕ, ಮಲ್ಲಿಕಾರ್ಜುನ, ಚಿಕ್ಕಸ್ವಾಮಿ, ಆನುಡ, ರಂಗಸ್ವಾಮಿ, ಮಹೇಶ್, ಮಹದೇವ, ಸಿ.ಶಿವಣ್ಣ, ಗುರುಮಲ್ಲಯ್ಯ, ಗವಿಸಿದ್ದ, ಸಂಘದ ಕಾರ್ಯದರ್ಶಿ ಜಿ.ಗೀತಾಮಣಿ, ಸಹಾಯಕಿ ಮಂಜುಳ ಮತ್ತಿತರರಿದ್ದರು.

ಶ್ರೀಮುತ್ತುಮಾರಮ್ಮ ದೇವಸ್ಥಾನ ಟ್ರಸ್ಟ್‌ನಿಂದ ನಿರ್ದೇಶಕ ನಾಗರಾಜ್ ಮೈರಾಡ ವಜಾ



ಹುಣಸೂರು, ಏ.8(ಕೆಕೆ)– ನಗರದ ಶ್ರೀಮುತ್ತುಮಾರಮ್ಮ ದೇವಸ್ಥಾನ ಟ್ರಸ್ಟ್‌ನಿಂದ ನಿರ್ದೇಶಕ ನಾಗರಾಜ್ ಮೈರಾಡ ಅವರನ್ನು ವಜಾಗೊಳಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಹೆಚ್.ವೈ. ಮಹದೇವು ಹಾಗೂ ಪ್ರಧಾನ ಕಾರ್ಯದರ್ಶಿ ಹೆಚ್.ಎಂ. ಈಶ್ವರಯ್ಯ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಏ.6ರಂದು ನಡೆದ ಟ್ರಸ್ಟ್ ಕಮಿಟಿ ಸಭೆ ಯಲ್ಲಿ ನಾಗರಾಜ್ ಅವರು ಟ್ರಸ್ಟ್ ನಿಯಮಾವಳಿಗೆ ವಿರುದ್ಧವಾಗಿ, ಟ್ರಸ್ಟ್ ಫೌಂಡರ್‌ಗಳು ಮತ್ತು ಸದಸ್ಯರೊಂದಿಗೆ ಅಗೌರವದಿಂದ ನಡೆದುಕೊಂಡಿದ್ದಾರೆ. ಅಲ್ಲದೆ ದೇವಸ್ಥಾನದ ಟ್ರಸ್ಟ್ ವಿರುದ್ಧ ಮಾತನಾಡಿರುವುದರಿಂದ ನಾಗರಾಜ್ ಅವರನ್ನು ಟ್ರಸ್ಟ್ ಸದಸ್ಯತ್ವದಿಂದ ವಜಾ ಮಾಡಲಾಗಿದೆ. ಸಾರ್ವಜನಿಕರು ಇವರೊಂದಿಗೆ ದೇವಸ್ಥಾನದ ಟ್ರಸ್ಟ್‌ಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಬಾರದು ಎಂದು ತಿಳಿಸಿದ್ದಾರೆ.

ಬಿಜೆಪಿ ಸಂಸ್ಥಾಪನಾ ದಿನ: ಪಿ.ಪಟ್ಟಣದಲ್ಲಿ ಅದ್ಧೂರಿ ಶೋಭಾಯಾತ್ರೆ



ಪಿರಿಯಾಪಟ್ಟಣ, ಏ.8(ವೀರೇಶ್)– ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ಅದ್ಧೂರಿ ಶೋಭಾಯಾತ್ರೆ ನಡೆಸಿದರು.

ಪಟ್ಟಣದ ಪೊಲೀಸ್ ಠಾಣೆ ಮುಂಭಾಗ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶೋಭಾಯಾತ್ರೆಯಲ್ಲಿ ತೆರಳಿ ಪಟ್ಟಣದ ಕನ್ನಂಬಾಡಿ ಅಮ್ಮನವರ ದೇವಾಲಯ ಬಳಿ ನಿರ್ಮಿಸಿದ್ದ ವೇದಿಕೆ ಬಳಿ ಸಮಾವೇಶಗೊಂಡರು. ಈ ವೇಳೆ ಪ್ರಧಾನಿ ಮೋದಿ ಅವರು ದೇಶವನ್ನು ಕುರಿತ ಮಾತನಾಡಿದ ವಿಡಿಯೋವನ್ನು ಬೃಹತ್ ಪರದೆ ಮೇಲೆ ಪ್ರದರ್ಶಿಸಲಾಯಿತು.

ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ.ರಾಜೇಗೌಡ ಮಾತನಾಡಿ, ದೇಶಾದ್ಯಂತ 42ನೇ ಬಿಜೆಪಿ ಸಂಸ್ಥಾಪನಾ ದಿನ ಆಚರಿಸಲಾಗುತ್ತಿದ್ದು, ಅದರಂತೆ ಪಟ್ಟಣದಲ್ಲೂ ಶೋಭಾಯಾತ್ರೆ ಮೂಲಕ ಸಂಸ್ಥಾಪನಾ ದಿನ ಆಚರಿಸಲಾಗುತ್ತಿದೆ. 1980 ಏ.6ರಂದು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಹಾಗೂ ಲಾಲ್‌ಕೃಷ್ಣ ಅಡ್ವಾಣಿ ನೇತೃತ್ವದಲ್ಲಿ ಸಾವಿರಾರು ಸಂಘ ಪರಿವಾರದ ಮುಖಂಡರು, ಕಾರ್ಯಕರ್ತರು ಮತ್ತು 12 ಕೋಟಿ ಸದಸ್ಯರನ್ನು ಒಳಗೊಂಡ ಜನಸಂಘದಿಂದ ಸ್ಥಾಪನೆಗೊಂಡ ಪಕ್ಷ ಇಂದು ಲೋಕಸಭೆಯಲ್ಲಿ 300ಕ್ಕೂ ಹೆಚ್ಚು ಸ್ಥಾನ ಪಡೆಯುವ ಮೂಲಕ ಇಡೀ ವಿಶ್ವದ ಗಮನ ಸೆಳೆದಿದೆ. ಇದಕ್ಕಾಗಿ ಹೋರಾಡಿದ ಹೋರಾಟಗಾರರು, ತ್ಯಾಗ ಬಲಿದಾನಗೈದ ಮಹಾನ್ ನಾಯಕರನ್ನು ಸ್ಮರಿಸಬೇಕಿದೆ ಎಂದರು.

ಶಿಸ್ತು ಹಾಗೂ ತಾಳ್ಮೆಯಿಂದ ಪಕ್ಷ ಸಂಘಟಿಸಿ, ಪಕ್ಷ ನೀಡಿದ ಜವಾಬ್ದಾರಿಯನ್ನು ಅತ್ಯಂತ ಕಾಳಜಿಯಿಂದ ನಿರ್ವಹಿಸುವ ಮೂಲಕ ಯಾವ ರೀತಿ ದೇಶದ ಚುಕ್ಕಾಣಿ ಹಿಡಿಯಲು ಸಾಧ್ಯ ಎಂಬುದನ್ನು ಪ್ರಧಾನಿ ಮೋದಿ ಅವರು ತೋರಿಸಿದ್ದಾರೆ. ಕರ್ನಾಟಕ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ನಮ್ಮದೇ ಬಿಜೆಪಿ ಸರ್ಕಾರ ಅಧಿಕಾರದಲ್ಲಿದೆ. ಹೀಗಾಗಿ ಮುಂಬರುವ 2023ರ ಚುನಾವಣೆಯಲ್ಲಿ ಪಿರಿಯಾಪಟ್ಟಣದಿಂದಲೂ ಓರ್ವ ಶಾಸಕನನ್ನು ಆಯ್ಕೆ ಮಾಡುವ ಮೂಲಕ ರಾಜ್ಯದಲ್ಲಿ ಮತ್ತೆ ಕಮಲ ಅರಳಿಸಲು ಮುಖಂಡರು, ಕಾರ್ಯಕರ್ತರು ಪಕ್ಷ ಸಂಘಟನೆಗೆ ಒತ್ತು ನೀಡಬೇಕು ಎಂದು ಕರೆ ನೀಡಿದರು. ಇದೇ ವೇಳೆ ಮಾಜಿ ಸಂಸದ ಸಿ.ಹೆಚ್. ವಿಜಯ ಶಂಕರ್, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಮಾಜಿ ಜಿಲ್ಲಾಧ್ಯಕ್ಷ ಹೇಮಂತ್ ಕುಮಾರ್‌ಗೌಡ ಮಾತನಾಡಿದರು.

ವೇದಿಕೆಯಲ್ಲಿ ತಾಲೂಕಿನ ಬಿಜೆಪಿ ಮಾಜಿ ಅಧ್ಯಕ್ಷರಾದ ನಾರಾಯಣರಾವ್, ಆರ್.ಟಿ.ಸತೀಶ್, ಕಾಂತರಾಜೇ ಅರಸ್, ಪಿ.ವಿ.ಬಸವರಾಜಪ್ಪ, ಕೆ.ಕೆ.ಶಶಿ ಹಾಗೂ ದಕ್ಷಿಣ ಪದವೀಧರರ ಕ್ಷೇತ್ರದ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಸನ್ಮಾನಿಸಲಾಯಿತು.

ಶೋಭಾಯಾತ್ರೆಯಲ್ಲಿ ಮಾಜಿ ಶಾಸಕ ಹೆಚ್.ಸಿ. ಬಸವರಾಜ್, ಜಿಲ್ಲಾ ಉಪಾಧ್ಯಕ್ಷ ವೆಂಕಟೇಶ್. ಅಣ್ಣಪ್ಪ, ಕಾರ್ಯದರ್ಶಿ ಚಂದ್ರು, ವೀರಭದ್ರ, ಯುವ ಮೋರ್ಚಾ ಅಧ್ಯಕ್ಷ ಪ್ರವೀಣ್ ಶೆಟ್ಟಿ, ಮುಖಂಡರಾದ ಸೋಮಶೇಖರ್, ಲೋಕಪಾಲಯ್ಯ, ಕೃಷ್ಣ, ಜಿಲ್ಲಾ ಮಹಿಳಾ ಪ್ರಧಾನ ಕಾರ್ಯದರ್ಶಿ ನಳಿನಿಗೌಡ, ಪುರಸಭಾ ಸದಸ್ಯೆ ಲೀಲಾವತಿ, ಕುಮಾರಸ್ವಾಮಿ, ಟಿ.ರಮೇಶ್, ಪ್ರಸನ್ನ, ಪ್ರಸಾದ್, ಅರವಿಂದ್, ಭಾನು, ಶುಭಗೌಡ, ಲಕ್ಷ್ಮಮ್ಮ, ಮೀನಾಕ್ಷಿ, ಶೋಭಾ, ಗೀತಾ, ನಿರ್ಮಲ, ಗಾಯತ್ರಿ, ರಮ್ಯಾ, ಅನಿಲ್ ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.

ಮೈಸೂರು ಮಿತ್ರ

ಗಂಗೋತ್ರಿ ಬಡಾವಣೆ, ವಸಂತನಗರದಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡ ಉದ್ಘಾಟನೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಹಲವು ಸೌಲಭ್ಯ

● ಹಿಂದುಳಿದ ವರ್ಗಗಳ, ಸಮಾಜ ಕಲ್ಯಾಣ ಇಲಾಖೆ ಸಚಿವರ ಹೇಳಿಕೆ ● ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಹಾಸ್ಟೆಲ್‌ಗಳ ಕೊರತೆ ● ಸಾವಿರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ದೀನ್‌ದಯಾಳ್ ಸಮುಚ್ಚಯ ನಿರ್ಮಾಣ ● ಮೈಸೂರು ಜಿಲ್ಲೆಯಲ್ಲಿ ಇನ್ನಷ್ಟು ಹಾಸ್ಟೆಲ್‌ಗಳಿಗೆ ಪ್ರತಾಪ್‌ಸಿಂಹ ಬೇಡಿಕೆ



ಮೈಸೂರು ತಾಲೂಕಿನ ವಸಂತನಗರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಿರ್ಮಿಸಿರುವ 4 ಹಾಸ್ಟೆಲ್ ಕಟ್ಟಡವನ್ನು ಶಾಸಕ ಜಿ.ಟಿ.ದೇವೇಗೌಡರೊಂದಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಉದ್ಘಾಟಿಸಿದರು.



ಗಂಗೋತ್ರಿ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಹಾಸ್ಟೆಲ್ ಕಟ್ಟಡವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಉದ್ಘಾಟಿಸಿದರು.

ಹೊಸ ಕಟ್ಟಡಗಳ ವಿವರ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೈಸೂರಿನ ವಸಂತನಗರದಲ್ಲಿ ಒಂದೇ ಕ್ಯಾಂಪಸ್‌ನಲ್ಲಿ ನಾಲ್ಕು ಕಟ್ಟಡ ನಿರ್ಮಿಸಿದೆ. ಮುಡಾ ಸಿಎ ನಿವೇಶನದಲ್ಲಿ 5414.16 ಚ.ಮೀಟರ್‌ನಲ್ಲಿ ಎ-ಬ್ಲಾಕ್‌ನಲ್ಲಿ 3.39 ಕೋಟಿ ರೂ ವೆಚ್ಚದಲ್ಲಿ ನಿರ್ಮಿಸಲಾಗಿರುವ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದಲ್ಲಿ 110 ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಬಿ-ಬ್ಲಾಕ್‌ನಲ್ಲಿ 3.48 ಕೋಟಿ ರೂ. ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗಿದ್ದು, ಸಿ-ಬ್ಲಾಕ್‌ನಲ್ಲಿ ಡಿ.ದೇವರಾಜ ಅರಸು ಎಂಜಿನಿಯರಿಂಗ್ ಮತ್ತು ವೈದ್ಯಕೀಯ (ಪುರುಷ) ವಿದ್ಯಾರ್ಥಿಗಳಿಗಾಗಿ 3.58 ಕೋಟಿ ರೂ. ವೆಚ್ಚದಲ್ಲಿ ಕಟ್ಟಡ ನಿರ್ಮಿಸಲಾಗಿದೆ. ಇಲ್ಲಿ 130ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ. ಡಿ-ಬ್ಲಾಕ್‌ನಲ್ಲಿ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಹಾಗೂ ವೃತ್ತಿಪರ ವಿದ್ಯಾರ್ಥಿಗಳಿಗಾಗಿ 3.58 ಕೋಟಿ ರೂ.ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಿಸಲಾಗಿದೆ.

ಗಂಗೋತ್ರಿ ಬಡಾವಣೆಯಲ್ಲಿ 3.26 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಕಟ್ಟಡದಲ್ಲಿ ಸ್ನಾತಕೋತ್ತರ 110 ರಿಂದ 140 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಬಹುದಾಗಿದೆ.

ಈ 5 ವಿದ್ಯಾರ್ಥಿನಿಲಯಗಳ ಕಟ್ಟಡದಿಂದ 14 ಡಾರ್ಮೆಟರಿಗಳಿದ್ದು, ವಿಶೇಷ ಚೇತನರಿಗಾಗಿ ಪ್ರತ್ಯೇಕ ಕೊಠಡಿ, ಡೈನಿಂಗ್ ಹಾಲ್, ಶೌಚಾಲಯ, ಅಡುಗೆ ಮನೆ, ಆರೈಕೆ ಕೊಠಡಿ, ಕಂಪ್ಯೂಟರ್ ಲ್ಯಾಬ್ ಸೇರಿದಂತೆ ವಿದ್ಯಾರ್ಥಿಗಳ ಕಲಿಕೆಗೆ ಬೇಕಾದ ಪೂರಕ ವ್ಯವಸ್ಥೆ ಕಲ್ಪಿಸಲಾಗಿದೆ. ಕರ್ನಾಟಕ ಗೃಹಮಂಡಳಿ ವತಿಯಿಂದ 17.19 ಕೋಟಿ ರೂ. ವೆಚ್ಚದಲ್ಲಿ 5 ಕಟ್ಟಡ ನಿರ್ಮಿಸಲಾಗಿದ್ದು, ಪ್ರಸಕ್ತ ಸಾಲಿನಿಂದಲೇ ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಲಾಗುತ್ತದೆ.

ಮೈಸೂರು,ಏ.8(ಎಂಟಿವೈ)- ರಾಜ್ಯ ಸರ್ಕಾರ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುವುದನ್ನು ತಡೆಯಲು ಹಲವು ಕ್ರಮ ಕೈಗೊಂಡಿದೆ. ಇದೇ ರೀತಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ವಿದ್ಯಾರ್ಥಿಗಳಿಗೆ ವಿವಿಧ ಸೌಲಭ್ಯ ಕಲ್ಪಿಸುವ ಮೂಲಕ ಉತ್ತೇಜನ ನೀಡುತ್ತಿದೆ ಎಂದು ಹಿಂದುಳಿದ ವರ್ಗಗಳ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 17.19 ಕೋಟಿ ರೂ. ವೆಚ್ಚದಲ್ಲಿ ಗಂಗೋತ್ರಿ ಬಡಾವಣೆಯಲ್ಲಿ ನಿರ್ಮಿಸಿರುವ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಹಾಗೂ ವಸಂತನಗರದಲ್ಲಿ ನಿರ್ಮಿಸಲಾಗಿರುವ 4 ನೂತನ ಕಟ್ಟಡಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಶಿಕ್ಷಣದಿಂದ ವಂಚಿತರಾಗಬಾರದು ಎಂದರು.

ಎಲ್ಲರಿಗೂ ಶಿಕ್ಷಣ ಸಿಗಬೇಕೆಂಬುದು ಸರ್ಕಾರದ ಮೂಲ ಉದ್ದೇಶ. ಅದಕ್ಕಾಗಿ ಹಲವು ಕಾರ್ಯಕ್ರಮ ರೂಪಿಸುತ್ತಿದೆ. ಇದಕ್ಕೆ ಪೂರಕವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಿತಕಾಯುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ವಿದ್ಯಾರ್ಥಿಗಳು ಸರ್ಕಾರದ ಸವಲತ್ತುಗಳನ್ನು ಉಪಯೋಗಿಸಿಕೊಂಡು ಏಳಿಗೆ ಸಾಧಿಸುವುದರೊಂದಿಗೆ ಉತ್ತಮ ಜೀವನವನ್ನು ರೂಪಿಸಿಕೊಳ್ಳುವತ್ತ ಗಮನ ಕೇಂದ್ರೀಕರಿಸಬೇಕು ಎಂದು ಸಲಹೆ ನೀಡಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಹಾಸ್ಟೆಲ್‌ಗಳ ಕೊರತೆ ಇದೆ. ಬೇಡಿಕೆಗೆ ಅನುಗುಣವಾಗಿ ವಿದ್ಯಾರ್ಥಿನಿಲಯಗಳಿಲ್ಲ. ಹಾಸ್ಟೆಲ್ ಸೌಲಭ್ಯ ಸಿಗದ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆಯಡಿ ನೆರವು ನೀಡಲಾಗುತ್ತಿದೆ. ಕೆಲವು ಸ್ಥಳಗಳಲ್ಲಿ ಬಾಡಿಗೆ ಕಟ್ಟಡ ಪಡೆದು ಹಾಸ್ಟೆಲ್ ನಡೆಸುತ್ತಿದ್ದೇವೆ. ಇದನ್ನು ಮನಗಂಡು ಮುಖ್ಯಮಂತ್ರಿಗಳು ಒಂದೇ ಸ್ಥಳದಲ್ಲಿ ಒಂದು ಸಾವಿರ ವಿದ್ಯಾರ್ಥಿಗಳು ವಾಸ ಮಾಡಲು ದೀನದಯಾಳ್ ಸಮುಚ್ಚಯ ನಿರ್ಮಿಸಲು ಕ್ರಮ ಕೈಗೊಂಡಿದ್ದಾರೆ. ಈ ಯೋಜನೆ ತ್ವರಿತಗತಿಯಲ್ಲಿ ಜಾರಿಗೊಳಿಸಲು ಮುಖ್ಯಮಂತ್ರಿಗಳು ಇಚ್ಛಿಸಿರುವುದರಿಂದ ಮುಂಬರುವ ದಿನಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಇನ್ನಷ್ಟು ವಿದ್ಯಾರ್ಥಿಗಳಿಗೆ ವಾಸ್ತವ್ಯಕ್ಕೆ ಅವಕಾಶ ಲಭಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಳೆದ ಎರಡು ವರ್ಷ ಕೊರೊನಾ ಮತ್ತು ಲಾಕ್‌ಡೌನ್‌ನಿಂದಾಗಿ ಎಲ್ಲಾ ಕ್ಷೇತ್ರಗಳಿಗೂ ಆರ್ಥಿಕ ಸಂಕಷ್ಟ ಉಂಟಾಗಿದೆ. ಇಂತಹ ಸಂದರ್ಭದಲ್ಲಿಯೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳ ಹಿತಕಾಯುವ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಇದರೊಂದಿಗೆ ವಿದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡಿದೆ. ಇದರಿಂದ ನೂರಾರು ವಿದ್ಯಾರ್ಥಿಗಳು ವಿದೇಶಗಳಲ್ಲಿ ಶಿಕ್ಷಣ ಪಡೆಯಲು ಸಹಕಾರಿಯಾಗಿದೆ. ಈ ಯೋಜನೆಯ ಸದುಪಯೋಗ ಪಡೆದುಕೊಂಡಿರುವ ನೂರಾರು ವಿದ್ಯಾರ್ಥಿಗಳು ಸರ್ಕಾರದಿಂದ ನೆರವು ಪಡೆದು ವಿದೇಶಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ ಎಂದರು.

ಈ ಹಿಂದೆ ವೈದ್ಯರಾಗಿದ್ದವರ ಮಕ್ಕಳೇ ವೈದ್ಯರಾಗುತ್ತಿದ್ದರು. ಇಂಜಿನಿಯರ್ ಆಗಿದ್ದವರ ಮಕ್ಕಳೇ ಇಂಜಿನಿಯರ್ ಆಗುತ್ತಿದ್ದರು. ಆದರೆ ಈಗ ಕಾಲ ಬದಲಾಗಿದೆ. ಬಡ ಕುಟುಂಬ ಹಾಗೂ ರೈತಾಪಿ ಕುಟುಂಬದ ಮಕ್ಕಳೂ ಸಹ ವೈದ್ಯರು ಹಾಗೂ ಇಂಜಿನಿಯರ್ ಆಗುತ್ತಿದ್ದಾರೆ. ಇದರಿಂದ ಮುಂದಿನ ದಿನಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಸೌಲಭ್ಯ ಪಡೆದು ಇನ್ನಷ್ಟು ಮಂದಿ ಉನ್ನತ ಶಿಕ್ಷಣ ಪಡೆಯುವುದರಲ್ಲಿ ಅನುಮಾನವಿಲ್ಲ. ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳು ಮತ್ತು ಬಡವರ ಮಕ್ಕಳಿಗೆ ಬದುಕನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ನಮ್ಮ ಇಲಾಖೆ ಕೆಲಸ ಮಾಡುತ್ತಿದೆ. ಮೈಸೂರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಕುರಿತಂತೆ ಇರುವ ಸಮಸ್ಯೆಗಳು ನನ್ನ ಗಮನಕ್ಕೆ ಬಂದಿದೆ. ಮುಂದಿನ ದಿನಗಳಲ್ಲಿ ಸಮಸ್ಯೆಗಳ ನಿವಾರಣೆಯೊಂದಿಗೆ ಇನ್ನಷ್ಟು ಹೊಸ ಕಟ್ಟಡಗಳ ನಿರ್ಮಾಣಕ್ಕೆ ನೆರವು ನೀಡುವುದಾಗಿ ಭರವಸೆ ನೀಡಿದರು.

ಸಂಸದ ಪ್ರತಾಪ್‌ಸಿಂಹ ಮಾತನಾಡಿ, ಮೈಸೂರಲ್ಲಿ ಶಿಕ್ಷಣ ಪಡೆಯುವ ನಿಟ್ಟಿನಲ್ಲಿ ನೆರೆ ಜಿಲ್ಲೆಗಳಿಂದಲೂ ವಿದ್ಯಾರ್ಥಿಗಳು ಆಗಮಿಸುತ್ತಿದ್ದಾರೆ ಇದರೊಂದಿಗೆ ತಾಲೂಕುಗಳ ವಿದ್ಯಾರ್ಥಿಗಳು ಮೈಸೂರು ನಗರಕ್ಕೆ ಬರುವುದರಿಂದ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯಲು ಸಾಕಷ್ಟು ಮಂದಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುತ್ತಾರೆ. ಅರ್ಜಿ ಸಲ್ಲಿಸಿದ ಎಲ್ಲರಿಗೂ ಹಾಸ್ಟೆಲ್ ಸೌಲಭ್ಯ ಸಿಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಇನ್ನಷ್ಟು ಹಾಸ್ಟೆಲ್‌ಗಳನ್ನು ಮಂಜೂರು ಮಾಡಿಕೊಡಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಜಿ.ಟಿ. ದೇವೇಗೌಡ ಮಾತನಾಡಿ, ಮೈಸೂರಿಗೆ ಬೇರೆ ಬೇರೆ ಜಿಲ್ಲೆ, ತಾಲೂಕುಗಳಿಂದ ವಿದ್ಯಾರ್ಥಿಗಳು ಓದಲು ಬರುತ್ತಾರೆ. ನಾನು ಜಿ.ಪಂ.ಅಧ್ಯಕ್ಷನಾಗಿದ್ದಾಗ ಸ್ವಾಮೀಜಿಗಳನ್ನು ಕರೆಸಿ ವಾರ್ಡನ್‌ಗಳಿಗೆ ತರಬೇತಿ ಕೊಡಿಸಿದ್ದೆ. ವಾರ್ಡನ್‌ಗಳು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಆಹಾರ ನೀಡಬೇಕು. ಹಾಸ್ಟೆಲ್‌ಗಳಲ್ಲಿ ಶುಚಿತ್ವ ಕಾಪಾಡಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ನೀಡಬೇಕು. ಒಂದು ವೇಳೆ ಕಳಪೆ ಆಹಾರ ಸರಬರಾಜು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು. ಹಾಸ್ಟೆಲ್‌ಗಳಲ್ಲಿ ಪ್ರವೇಶ ಪಡೆಯಲು ಶ್ರೀಮಂತರ ಮಕ್ಕಳು ಬರುವುದಿಲ್ಲ. ಹಣ ಇರುವವರು ಲಕ್ಷ-ಲಕ್ಷ ಕೊಟ್ಟು ಕಾನ್ವೆಂಟ್ ಹಾಗೂ ಖಾಸಗಿ ಕಾಲೇಜುಗಳಿಗೆ ಸೇರಿಸುತ್ತಾರೆ. ಸರ್ಕಾರದ ಹಾಸ್ಟೆಲ್‌ಗೆ ಬರುವವರೆಲ್ಲಾ ಬಡ ಕುಟುಂಬ ಹಾಗೂ ರೈತರ ಮಕ್ಕಳೇ ಆಗಿದ್ದಾರೆ. ಈ ನಿಟ್ಟಿನಲ್ಲಿ ಹಾಸ್ಟೆಲ್‌ನಲ್ಲಿ ಪೂರಕವಾದ ವಾತಾವರಣ ನಿರ್ಮಿಸಬೇಕು. ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳು ಸರ್ಕಾರದ ಸೌಲಭ್ಯವನ್ನು ಸದುಪಯೋಗ ಮಾಡಿಕೊಂಡು ಶಿಕ್ಷಣದಲ್ಲಿ ಪ್ರಗತಿ ಸಾಧಿಸಬೇಕು. ನಿಮ್ಮನ್ನು ಪೋಷಕರು ಯಾವುದೋ ಕನಸನ್ನು ಕಟ್ಟಿಕೊಂಡು ಓದಲು ಕಳಿಸಿದ್ದಾರೆ. ನೀವೆಲ್ಲರೂ ಅದಕ್ಕೆ ಪ್ರತಿಫಲ ದೊರಕುವಂತೆ ಮಾಡಬೇಕು. ಉತ್ತಮ ಶಿಕ್ಷಣ ಪಡೆದು ಒಳ್ಳೆ ಉದ್ಯೋಗ ಗಿಟ್ಟಿಸಿಕೊಂಡು ಸ್ವಾವಲಂಬಿ ಜೀವನ ರೂಪಿಸಿಕೊಳ್ಳಬೇಕು. ಸರಳತೆ, ಸಜ್ಜನಿಕೆ, ಪ್ರೀತಿ, ವಿಶ್ವಾಸ ಕಲಿತುಕೊಂಡು ಜ್ಞಾನಾರ್ಜನೆಯ ಜೊತೆಗೆ ಆದರ್ಶರಾಗಬೇಕು. ಸ್ವಾಭಿಮಾನದಿಂದ ಬದುಕಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕ ಎಲ್. ನಾಗೇಂದ್ರ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಕಾಡಾ ಅಧ್ಯಕ್ಷ ಎನ್.ಶಿವಲಿಂಗಯ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹಾದೇವಸ್ವಾಮಿ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಜೆಎಲ್‌ಆರ್ ಅಧ್ಯಕ್ಷ ಎಂ.ಅಪ್ಪಣ್ಣ, ಕೃಷ್ಣಪ್ಪಗೌಡ ವಿ.ಆರ್, ಎಸ್.ಮಹಾದೇವಯ್ಯ, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಪಣೀಶ್, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಜಿ.ಪಂ. ಸಿಇಓ ಬಿ.ಆರ್. ಪೂರ್ಣಿಮಾ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಹೆಚ್.ಎಸ್.ಬಿಂದ್ಯಾ, ಸಮಾಜಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಬಿ. ಮಾಲತಿ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಮುನಿರಾಜು, ತಾಲ್ಲೂಕು ಕಲ್ಯಾಣಾಧಿಕಾರಿ ಚಂದ್ರಕಲಾ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ಪುಷ್ಪಲತಾ ಉಪಸ್ಥಿತರಿದ್ದರು.

ಮೈಸೂರು ಮೇಯರ್ ಚುನಾವಣೆ ಉದ್ದೇಶಪೂರ್ವಕ ವಿಳಂಬ ಅಲ್ಲ

ಸಚಿವ ಎಸ್.ಟಿ.ಸೋಮಶೇಖರ್ ಸ್ಪಷ್ಟನೆ

ಮೈಸೂರು, ಏ.8(ಆರ್‌ಕೆಬಿ)- ಮೈಸೂರು ಮೇಯರ್ ಚುನಾವಣೆ ಉದ್ದೇಶಪೂರ್ವಕವಾಗಿ ವಿಳಂಬವಾಗುತ್ತಿಲ್ಲ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಇಂದಿಲ್ಲಿ ಸ್ಪಷ್ಟಪಡಿಸಿದರು.



ಪಾಲಿಕೆಯಲ್ಲಿ ಜೆಡಿಎಸ್ ಜೊತೆ ಮೈತ್ರಿ ವಿಚಾರದ ಬಗ್ಗೆ ಚುನಾವಣೆ ಬಂದಾಗ ತೀರ್ಮಾನ ಮಾಡಲಾಗುವುದು. ಮೈತ್ರಿ ಬಗ್ಗೆ ಯಾವ ಪೂರ್ವ ಒಪ್ಪಂದವೂ ಆಗಿಲ್ಲ. ಈ ಹಿಂದೆ ಜೆಡಿಎಸ್ ಸಹಕಾರ ಕೇಳಿದ್ದೆವು. ಅವರು ಕೊಟ್ಟಿದ್ದರು. ಮುಂದಿನ ಮೈತ್ರಿ ಬಗ್ಗೆ ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದು ಅವರು ಹೇಳಿದರು.

ಸಿಎಂಗೆ ಅಮಿತ್‌ಶಾ ಭೇಟಿ ಸಮಯ ನೀಡಿಲ್ಲ ಎಂದವರು ಯಾರು?: ಕೇಂದ್ರ ಸಚಿವ ಅಮಿತ್ ಶಾ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಮಯ ನೀಡಿಲ್ಲ ಎಂದು ಯಾರು ಹೇಳಿದರು. ಮುಖ್ಯಮಂತ್ರಿಗಳ ಪೂರ್ವ ನಿಗದಿತ ಕಾರ್ಯಕ್ರಮಗಳಿಂದಾಗಿ ಅಮಿತ್‌ಶಾರನ್ನು ಭೇಟಿಯಾಗಿಲ್ಲ. ಮುಖ್ಯಮಂತ್ರಿಗಳು ಹೈಕಮಾಂಡ್ ಭೇಟಿಗೆ ಯಾವಾಗ ಬೇಕಾದರೂ ಸಮಯ ಪಡೆಯಲಿದ್ದಾರೆ. ಅವರು ಯಾವಾಗ ಬೇಕಾದರೂ ಪ್ರಧಾನಿ ಸೇರಿದಂತೆ ಹಿರಿಯ ನಾಯಕರನ್ನು ಭೇಟಿ ಮಾಡಬಹುದು ಎಂದು ಹೇಳಿದರು. ಜಗದೀಶ್ ಶೆಟ್ಟರ್ ಅಮಿತ್ ಶಾರನ್ನು ಹೊಸದಾಗಿ ಭೇಟಿ ಮಾಡುತ್ತಿಲ್ಲ. ಶೆಟ್ಟರ್ ಮಾಜಿ ಮುಖ್ಯಮಂತ್ರಿ, ಪಕ್ಷದ ಹಿರಿಯ ನಾಯಕ. ಹೀಗಾಗಿ ಅವರ ದೆಹಲಿ ಪ್ರವಾಸಕ್ಕೆ ವಿಶೇಷ ಅರ್ಥ ಬೇಡ ಎಂದು ತಿಳಿಸಿದರು.

ಮೈಸೂರು ಅಭಿವೃದ್ಧಿಗೆ ಅನುದಾನ ನೀಡಿರುವ ಸಿಎಂ ಬಸವರಾಜ ಬೊಮ್ಮಾಯಿ ದುಡಿವ ಬಸವಣ್ಣ

ಸಂಸದ ಪ್ರತಾಪ್ ಸಿಂಹ ಬಣ್ಣನೆ

ಮೈಸೂರು,ಏ.8(ಎಂಟಿವೈ)- ಮೈಸೂರಿನ ಅಭಿವೃದ್ಧಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಾಕಷ್ಟು ಅನುದಾನ ನೀಡುವ ಮೂಲಕ ತಾವು 'ದುಡಿವ ಬಸವಣ್ಣ' ಎಂಬುದನ್ನು ಸಾಬೀತು ಮಾಡಿದ್ದಾರೆ ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಕಾಂಗ್ರೆಸ್ ನಾಯಕರು ಸಿಎಂ ಬಸವರಾಜ ಬೊಮ್ಮಾಯಿ ಮೌನ ಮುರಿಯಬೇಕು ಎಂದು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಸಿಎಂ ಬೊಮ್ಮಾಯಿ ಕೇವಲ ಮಾತನಾಡುವ ಬಸವಣ್ಣ ಅಲ್ಲ. ಅವರು ದುಡಿವ ಬಸವಣ್ಣ ಎಂದು ಕೆಲಸ ಮಾಡುವ ಮೂಲಕ ತೋರಿಸಿಕೊಟ್ಟಿದ್ದಾರೆ ಎಂದರು.

ದುಡಿಮೆಯ ಮೂಲಕ ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಅವರ ದುಡಿಮೆ ಫಲವಾಗಿ ಮೈಸೂರಿನ ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆಗೆ ಅನುದಾನ ಸಿಕ್ಕಿದೆ. ಕೆ.ಆರ್.ಆಸ್ಪತ್ರೆ ಅಭಿವೃದ್ಧಿಗೆ ಅನುದಾನ ಲಭಿಸಿದೆ. ಶಕ್ತಿಧಾಮಕ್ಕೆ ಅನುದಾನ ಕೊಟ್ಟಿದ್ದಾರೆ. ಇಂತಹ ದುಡಿಮೆಯ ಬಸವಣ್ಣನ ಬಗ್ಗೆ ಕಾಂಗ್ರೆಸ್‌ನವರು ಕರ್ಕಶ ಧ್ವನಿಯಲ್ಲಿ ಕಾಕಾ ಎನ್ನುತ್ತಿದ್ದಾರೆ ಎಂದು ಕಿಡಿಕಾರಿದರು.



ಪದೇ ಪದೇ ನಾಯಕತ್ವ ಬದಲಾವಣೆಯಾಗುತ್ತದೆ, ಸರ್ಕಾರ ಬದಲಾಗುತ್ತದೆ ಎಂದು ಹೇಳಿಕೆ ನೀಡುವ ಕೋಡಿ ಮಠದ ಸ್ವಾಮಿಜೀ, ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ, ಸಿದ್ದರಾಮಯ್ಯ ಅವರ ಹೇಳಿಕೆಯನ್ನು ರಾಜ್ಯದ ಜನತೆ ನಂಬುವುದಿಲ್ಲ. ಇವರ ಹೇಳಿಕೆಗಳಲ್ಲಿ ನಿಖರತೆ, ಸ್ಪಷ್ಟತೆ ಯಾವುದೂ ಇರುವುದಿಲ್ಲ. ಹಾಗಾಗಿ ಈ ಮೂವರ ಹೇಳಿಕೆಗಳನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ. ರಾಜ್ಯದ ಎಲ್ಲಾ ವಿಚಾರಗಳಲ್ಲೂ ಈ ಮೂವರ ಹೇಳಿಕೆಗಳು ಅಸ್ಪಷ್ಟವಾಗಿಯೇ ಇರುತ್ತವೆ ಎಂದು ಲೇವಡಿ ಮಾಡಿದರು.


ಹಿಜಾಬ್ ವಿಚಾರ ಬಂದಾಗ ಪ್ರತಿಪಕ್ಷಗಳು ಯಾಕೆ ಆ ಸಮುದಾಯಕ್ಕೆ ಬುದ್ಧಿ ಹೇಳಲಿಲ್ಲ? ಸಮವಸ್ತ್ರ ಎಲ್ಲರಿಗೂ ಕಡ್ಡಾಯ. ಅದನ್ನು ಪಾಲಿಸಿ ಎಂದು ಪ್ರತಿಪಕ್ಷಗಳು ಹೇಳಿದ್ದರೆ ರಾಜ್ಯದಲ್ಲಿ ವಿವಾದಗಳೇ ಸೃಷ್ಟಿಯಾಗುತ್ತಿರಲಿಲ್ಲ. ಇವತ್ತು ಸರ್ವ ಜನಾಂಗದ ಸಾಮರಸ್ಯದ ಸಭೆ ಮಾಡುತ್ತಿದ್ದಾರೆ. ಈ ವಿಚಾರಗಳಲ್ಲಿ ಕುಮಾರಸ್ವಾಮಿ, ಸಿದ್ದರಾಮಯ್ಯ ಅವರಿಗೆ ಸ್ಪಷ್ಟತೆ ಇಲ್ಲ ಎಂದರು. ಬಿಜೆಪಿಗೆ ವಿವಾದಗಳನ್ನು ಎಬ್ಬಿಸಿ ಹಿಂದೂಗಳ ಧ್ರುವೀಕರಣ ಮಾಡುವ ಅವಶ್ಯಕತೆ ಇಲ್ಲ. ವಿರೋಧ ಪಕ್ಷಗಳಿಂದಲೇ ಹಿಂದೂ, ಮುಸ್ಲಿಂ ಮತ ವಿಭಜನೆ, ಮತ ಕ್ರೋಢೀಕರಣ ಆರಂಭವಾಗಿದ್ದು. ಅಂತಹ ಕೆಲಸಕ್ಕೆ ಬಿಜೆಪಿ ಮುಂದಾಗಿಲ್ಲ ಎಂದು ಸ್ಪಷ್ಟಪಡಿಸಿದರು.




ಮೈಸೂರು ತಹಸೀಲ್ದಾರ್ ಆಗಿ ದಕ್ಷ ಹಾಗೂ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿ ಈಗ ವರ್ಗಾವಣೆ ಆಗಿರುವ ರಕ್ಷಿತ್ ಅವರನ್ನು ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಮಾಜಿ ಅಧ್ಯಕ್ಷರೂ ಆದ ಹಿರಿಯ ಜೆಡಿಎಸ್ ಮುಖಂಡ ವಿವೇಕ್ ಅವರು ಆತ್ಮೀಯವಾಗಿ ಅಭಿನಂದಿಸಿದರು.

ಹೈಟೆನ್ಷನ್ ವೈರ್ ತಗುಲಿ ಅಪರಿಚಿತ ಸಾವು

ಮೈಸೂರು, ಏ.8- ಮೈಸೂರು ರೈಲು ನಿಲ್ದಾಣದ ಬಳಿ ಇರುವ ಹೈ ಟೆನ್ಷನ್ ವಿದ್ಯುತ್ ವೈರಿಗೆ ತಗುಲಿ ಗಾಯಗೊಂಡಿದ್ದ 35 ವರ್ಷದ ವ್ಯಕ್ತಿಯನ್ನು ಕೆ.ಆರ್ ಆಸ್ಪತ್ರೆಗೆ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ವಯಸ್ಸು 35 ವರ್ಷ, ಎತ್ತರ 5.3 ಅಡಿ, ಕೋಲು ಮುಖ, ಎಣ್ಣೆಗೆಂಪು ಮೈಬಣ್ಣ ಕೃಶವಾದ ಶರೀರ, ತಲೆಯಲ್ಲಿ ಸುಮಾರು 2 ಇಂಚು ಉದ್ದದ ಕಪ್ಪು ಕೂದಲು, ಕುರುಚಲು ಗಡ್ಡ ಮೀಸೆ ಹೊಂದಿದ್ದು, ಎಡಗೈ ಮುಂಗೈಯಲ್ಲಿ ಪುಷ್ಪ ಎಂಬ ಹಚ್ಚೆಯ ಗುರುತು ಇದೆ. ಮುಂದಿನ ಅಕ್ಷರಗಳು ಕಾಣಿಸುತ್ತಿಲ್ಲ. ವಾರಸುದಾರರು ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 0821-2516579 ಅನ್ನು ಸಂಪರ್ಕಿಸಬಹುದು ಎಂದು ರೈಲ್ವೆ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ದಾರಿದೀಪ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರೂ ಆದ ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಪ್ರದೀಪ್‌ಕುಮಾರ್ ಶುಕ್ರವಾರ ದಾರಿದೀಪ ಜನಸೇವಾ ಕೇಂದ್ರವನ್ನು ಆರಂಭಿಸಿದ ಹಿನ್ನೆಲೆಯಲ್ಲಿ ಅವರನ್ನು ಕೆ.ಆರ್.ನಗರ ತಾಲೂಕಿನ ಹೊನ್ನೇನಹಳ್ಳಿ ಗ್ರಾಪಂ ಉಪಾಧ್ಯಕ್ಷ ಜಗದೀಶ್ ಪಶುಪತಿ, ರೈತ ಬಂಧು ಕ್ಷೇಮಾಭಿವೃದ್ಧಿ ಮತ್ತು ಉತ್ಪಾದಕರ ಸಂಘದ ಅಧ್ಯಕ್ಷ ಲಯನ್ ಎಲ್.ಕೆ.ಜಯರಾಮು, ಸ್ಫೂರ್ತಿ ಡೆವಲಪರ್ಸ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ಸ್ ಮಾಲೀಕ ಎಂ.ಪಿ.ಮಧು, ವಿಜಯನಗರದ ಭರಣಿ ಹಾರ್ಡ್‌ವೇರ್ ಮಾಲೀಕ ಎಂ.ಎಸ್.ಜಗದೀಶ್, ಆಶೀರ್ವಾದ್ ರೆಡಿಮಿಕ್ಸ್ ಕಾಂಕ್ರೀಟ್ ಮಾಲೀಕ ಪಿ.ಎ.ಮಹೇಶ್ ಅಭಿನಂದಿಸಿದರು.



'ದಾರಿದೀಪ ಜನಸೇವಾ ಕೇಂದ್ರ' ಉದ್ಘಾಟನೆ ಸಂದರ್ಭದಲ್ಲಿ ದಾರಿದೀಪ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಪ್ರದೀಪ್ ಕುಮಾರ್ ಅವರನ್ನು ಅಭಿವೃದ್ಧ್ ಬಿಲ್ಡರ್ ಮಾಲೀಕ ಎಂ.ಜೆ.ಪ್ರವೀಣ್ ಕುಮಾರ್ ಅಭಿನಂದಿಸಿದರು. ಕಿಶೋರ್ ಹದಿನಾರು ಹಾಗೂ ಸ್ನೇಹಿತರು ಇದ್ದರು.

ನಿಜವಾದ ರಾಜಕಾರಣ ಜನಸೇವೆಯೇ ಹೊರತು ಅಧಿಕಾರ ಅನುಭವಿಸುವುದಲ್ಲ

● ವಿಪಕ್ಷ ನಾಯಕ ಸಿದ್ದರಾಮಯ್ಯ ಸಮರ್ಥನೆ ● ಪ್ರದೀಪ್‌ಕುಮಾರ್ ನೇತೃತ್ವದ 'ದಾರಿದೀಪ ಜನಸೇವಾ ಕೇಂದ್ರ' ಉದ್ಘಾಟನೆ



ಮೈಸೂರಿನ ಅರವಿಂದನಗರ ಆದಿಚುಂಚನಗಿರಿ ರಸ್ತೆಯಲ್ಲಿನ ದಾರಿದೀಪ ಜನ ಸೇವಾ ಕೇಂದ್ರವನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಮಾಜಿ ಸಂಸದ ಆರ್.ಧ್ರುವನಾರಾಯಣ್, ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಮುಖಂಡರಾದ ಕೆ.ಮರೀಗೌಡ, ಕೆ.ಹರೀಶ್‌ಗೌಡ, ಎಂ.ಪ್ರದೀಪ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಸೇವಾ ಕಾರ್ಯಕ್ಕೆ ಕಟಿಬದ್ಧ: ಪ್ರದೀಪ್‌ಕುಮಾರ್

ಮೈಸೂರು, ಏ.8- ಜನಸೇವೆ ಮಾಡಿದವರು ರಾಜಕೀಯದಲ್ಲಿ ಅತ್ಯುನ್ನತ ಸ್ಥಾನಕ್ಕೇರುತ್ತಾರೆ ಎಂದು ದಾರಿದೀಪ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್ ಅಭಿಪ್ರಾಯಿಸಿದರು.

ದಾರಿದೀಪ ಜನಸೇವಾ ಕೇಂದ್ರ ಉದ್ಘಾಟನೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಬೇರೆ ಬಲದಿಂದ ರಾಜಕೀಯಕ್ಕೆ ಬಂದವರು ಶಾಸಕರಾಗಿ, ಸಚಿವರಾಗಬಹುದು. ಆದರೆ ತಳಮಟ್ಟದಿಂದ ಜನರೊಂದಿಗಿದ್ದು ಸೇವೆ ಸಲ್ಲಿಸಿದವರು ಅತ್ಯುನ್ನತ ಸ್ಥಾನಕ್ಕೇರುತ್ತಾರೆ. ಇದಕ್ಕೆ ಮಾಜಿ ಪ್ರಧಾನಿ ದೇವೇಗೌಡರು, ಮಾಜಿ ಸಿಎಂಗಳಾದ ಯಡಿಯೂರಪ್ಪನವರು, ಸಿದ್ದರಾಮಯ್ಯನವರೇ ಸಾಕ್ಷಿ. ರಾಜಕೀಯ ವರವಾಗಿ ಬರಬೇಕೇ ಹೊರತು, ಬಲವಂತವಾಗಿ ಪಡೆಯಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅಧಿಕಾರ ಸಿಗುವುದಿಲ್ಲ ಎಂದರು.

ಈ ಹಿಂದೆ ಪಾಲಿಕೆ ಸದಸ್ಯನಾಗಿ ಸಾಕಷ್ಟು ಜನ ಪರ ಕಾರ್ಯ ಮಾಡಿದ್ದೆ. ಬಳಿಕವೂ ನಿರಂತರವಾಗಿ ಸೇವಾ ಕಾರ್ಯ ಮುಂದುವರೆಸಿದ್ದು, ಈಗ ಪೂರ್ಣ ಪ್ರಮಾಣದಲ್ಲಿ ಮತ್ತು ವ್ಯವಸ್ಥಿತ ಜನಸೇವೆ ಉದ್ದೇಶದಿಂದ ಈ ಕೇಂದ್ರ ಸ್ಥಾಪಿಸಲಾಗಿದೆ. ಇದೀಗ ಸಿದ್ದರಾಮಯ್ಯನವರು 'ದಾರಿದೀಪ ಜನಸೇವಾ ಕೇಂದ್ರ' ಉದ್ಘಾಟಿಸಿ, ಆಶೀರ್ವದಿಸಿದ್ದಾರೆ. ಈ ಮೂಲಕ ಆಧಾರ್, ಪಡಿತರ ಚೀಟಿ, ವಿಧವಾ ವೇತನ ಇನ್ನಿತರ ಪಿಂಚಣಿಗಳಿಗೆ ಸಂಬಂಧಿಸಿದ ಸೇವೆಯ ಜೊತೆಗೆ ಆರೋಗ್ಯ ಹಾಗೂ ಕಾನೂನು ಸಪ್ತಾಹ ಸೇರಿದಂತೆ ಹಲವು ಸೇವಾ ಕಾರ್ಯ ನಡೆಸುವ ಉದ್ದೇಶವಿದೆ. ಸದ್ಯ ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ಸೇವೆ ಆರಂಭವಾಗಲಿದ್ದು, ಮುಂದಿನ ದಿನಗಳಲ್ಲಿ ವಿಸ್ತರಿಸುವ ಚಿಂತನೆಯಿದೆ ಎಂದು ತಿಳಿಸಿದರು.

ಮೈಸೂರು, ಏ.8(ಎಸ್‌ಬಿಡಿ)- ಜನಸೇವೆಯೇ ನಿಜವಾದ ರಾಜಕಾರಣ, ಅಧಿಕಾರ ಅನುಭವಿಸುವುದಲ್ಲ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ ವ್ಯಕ್ತಪಡಿಸಿದರು.

ಮೈಸೂರಿನ ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ, ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ದಾರಿದೀಪ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್, ಅರವಿಂದ ನಗರ ಆದಿಚುಂಚನಗಿರಿ ರಸ್ತೆಯಲ್ಲಿ ನೂತನವಾಗಿ ಆರಂಭಿಸಿರುವ 'ದಾರಿದೀಪ ಜನ ಸೇವಾ ಕೇಂದ್ರ'ವನ್ನು ಶುಕ್ರವಾರ ಉದ್ಘಾಟಿಸಿ, ಮಾತನಾಡಿದರು.

ಅಧಿಕಾರ ಅನುಭವಿಸುವುದು, ಲಾಭಗಳಿಸುವುದು, ಆಸ್ತಿ ಮಾಡುವುದು ರಾಜಕಾರಣವಲ್ಲ. ಪ್ರಾಮಾಣಿಕವಾಗಿ ಜನಸೇವೆ ಮಾಡುವುದೇ ನಿಜವಾದ ರಾಜಕಾರಣ. ಅದರಲ್ಲೂ ಬಡವರು, ಕಷ್ಟದಲ್ಲಿರುವ ಜನರ ಸೇವೆಗೆ ಪ್ರಾಮುಖ್ಯತೆ ನೀಡಬೇಕು. ಆದರೆ ಹಲವು ರಾಜಕಾರಣಿಗಳು ಶ್ರೀಮಂತರ ಸೇವೆ ಮಾಡುವುದೇ ಹೆಚ್ಚು. ಇದು ನಿಲ್ಲಬೇಕು. ಶ್ರೀಮಂತರಲ್ಲಿ ಹಣವಿದೆ, ಅವರು ಯಾವ ಕೆಲಸವನ್ನಾದರೂ ಮಾಡಿಸಿಕೊಳ್ಳುತ್ತಾರೆ. ಅಧಿಕಾರಿಗಳು ಹಣ ತೆಗೆದುಕೊಂಡು ಶ್ರೀಮಂತರ ಕೆಲಸವನ್ನು ಮಾಡಿಕೊಡುತ್ತಾರೆ. ಹಣವಿಲ್ಲದ ಬಡವರನ್ನು ನಿರ್ಲಕ್ಷ್ಯಿಸುತ್ತಾರೆ. ಆದ್ದರಿಂದ ಜನಪ್ರತಿನಿಧಿಗಳು, ಸಾರ್ವಜನಿಕ ಕ್ಷೇತ್ರದಲ್ಲಿರುವವರು ಕಷ್ಟದಲ್ಲಿರುವ ಬಡವರಿಗೆ ನೆರವಾಗಬೇಕು ಎಂದರು.

ರಾಜಕಾರಣಕ್ಕೆ ಬರುವುದಕ್ಕೆ ಎಲ್ಲರಿಗೂ ಅವಕಾಶವಿದೆ. ಹೊಳೆ ನೀರಿಗೆ ಯಾವ ದೊಣ್ಣೆ ನಾಯಕನ ಅಪ್ಪಣೆಯೂ ಬೇಡ. ಆದರೆ ಯಾರೂ ರಾಜಕೀಯದ ಬಗ್ಗೆ ತುಂಬಾ ಆಸೆ ಇಟ್ಟುಕೊಳ್ಳಬಾರದು. ಆಸೆ ಇರಬೇಕೇ ಹೊರತು ದುರಾಸೆ ಇರಬಾರದು ಎಂದು ಕಿವಿಮಾತು ಹೇಳಿದ ಅವರು, ನಗರ ಪಾಲಿಕೆ ಸದಸ್ಯರಾಗಿ ಜನಸೇವೆ ಮಾಡಿದ ಪ್ರದೀಪ್ ಕುಮಾರ್, ಅದನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇದರ ಭಾಗವಾಗಿ ಆರಂಭಿಸಿರುವ 'ದಾರಿದೀಪ ಜನಸೇವಾ ಕೇಂದ್ರ'ವನ್ನು ಅತ್ಯಂತ ಸಂತೋಷದಿಂದ ಉದ್ಘಾಟಿಸಿದ್ದೇನೆ. ಈ ಸಂಸ್ಥೆ ಬಡವರ ಕಷ್ಟ-ಸುಖದಲ್ಲಿ ಭಾಗಿಯಾಗಲಿ. ಅಸಹಾಯಕರ ಬಾಳಿನ ದಾರಿಗೆ ಬೆಳಕು ನೀಡಲಿ ಎಂದು ಆಶಿಸಿದರು.

ಈ ವೇಳೆ ಬಸವಣ್ಣನವರ ಪುತ್ಥಳಿಯನ್ನು ಸಿದ್ದರಾಮಯ್ಯನವರಿಗೆ ಉಡುಗೊರೆಯಾಗಿ ನೀಡಿ, ಅವರನ್ನು ಆತ್ಮೀಯವಾಗಿ ಅಭಿನಂದಿಸಿದ ದಾರಿದೀಪ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್ ಮಾತನಾಡಿ, ನನಗೆ ಚಿಕ್ಕಂದಿನಿಂದಲೂ ಬಸವಣ್ಣನವರ ಮೇಲೆ ಅಪಾರವಾದ ಭಕ್ತಿ. ಮುಖ್ಯಮಂತ್ರಿಯಾಗಿ 5 ವರ್ಷಗಳ ಕಾಲ ಸರ್ಕಾರ ಅಭಿವೃದ್ಧಿಗಾಗಿ ಅತ್ಯಂತ ಪ್ರಾಮಾಣಿಕವಾಗಿ ದುಡಿದ ಸಿದ್ದರಾಮಯ್ಯನವರನ್ನು ನೋಡಿದಾಗ ಬಸವಣ್ಣನವರ ನೆನಪಾಗುತ್ತದೆ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ, ಮಾಜಿ ಸಂಸದ ಆರ್.ಧ್ರುವನಾರಾಯಣ್, ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಹರೀಶ್ ಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್ ಕುಮಾರ್, ಲಿಂಗಾಯತ ಗೌಡ ಮಹಾಸಭಾದ ರಾಜ್ಯಾಧ್ಯಕ್ಷ ಆಲನಹಳ್ಳಿ ಪುಟ್ಟಸ್ವಾಮಿ, ಅಭಿವೃದ್ಧ್ ಬಿಲ್ಡರ್ಸ್‌ನ ಎಂ.ಜಿ.ಪ್ರವೀಣ್, ಕೆ.ಶಿವರಾಮ್, ಮೂಗೂರು ನಂಜುಂಡಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಬಳಿಕ ಪ್ರದೀಪ್ ಕುಮಾರ್ ಅವರನ್ನು, ಅವರ ಅಭಿಮಾನಿಗಳು, ಬೆಂಬಲಿಗರು, ಮುಖಂಡರು, ಸಂಬಂಧಿಗಳು, ಸ್ನೇಹಿತರು, ಹಿತೈಷಿಗಳು, ಉದ್ಯಮಿಗಳು ಮತ್ತು ಸಂಘ-ಸಂಸ್ಥೆಗಳ ಪ್ರತಿನಿಧಿಗಳು ಹೂಗುಚ್ಛ ನೀಡಿ, ಅಭಿನಂದಿಸಿದರು.

ದೌರ್ಜನ್ಯ ಪ್ರಕರಣಗಳ ಸಂತ್ರಸ್ತರಿಗೆ ಪರಿಹಾರ ಕಲ್ಪಿಸಿ

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚನೆ



ಚಾಮರಾಜನಗರ,ಏ.8–ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂತ್ರಸ್ತರಿಗೆ ನಿಯಮಾನುಸಾರ ಪರಿಹಾರ ಹಾಗೂ ಸೌಲಭ್ಯವನ್ನು ತ್ವರಿತವಾಗಿ ಕಲ್ಪಿಸುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣ ದಲ್ಲಿಂದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ದೌರ್ಜನ್ಯ ಪ್ರಕರಣಗಳ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಳೆದ 2021 ಹಾಗೂ 2022ನೇ ಸಾಲಿನಲ್ಲಿ ದಾಖಲಾಗಿರುವ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಂತ್ರಸ್ತರಿಗೆ ಈವರೆಗೆ ನೀಡಿರುವ ಪರಿಹಾರ ಹಾಗೂ ಪರಿಹಾರ ನೀಡಬೇಕಿರುವ ಪ್ರಕರಣಗಳ ಕುರಿತು ಮಾಹಿತಿ ಪಡೆದ ಜಿಲ್ಲಾಧಿಕಾರಿ, ವಿಳಂಬ ಮಾಡದೇ ಅಗತ್ಯ ದಾಖಲಾತಿ ಪಡೆದು ಪರಿಹಾರ ನೀಡುವಂತೆ ನಿರ್ದೇಶನ ನೀಡಿದರು.

ಹನೂರು ತಾಲೂಕಿನ ಸುಳ್ವಾಡಿ ದುರಂತದ ಸಂತ್ರಸ್ತರ ಕುಟುಂಬದ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಹುದ್ದೆ ನೀಡುವ ಸಂಬಂಧ ಕೈಗೊಂಡಿರುವ ಕ್ರಮಗಳ ಕುರಿತು ವಿವರವಾಗಿ ಚರ್ಚಿಸಲಾಯಿತು. ಇದೇ ವೇಳೆ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ಕೆಂಪನಪುರ ಸಿದ್ದರಾಜು, ಆಸಿಫ್‌ಉಲ್ಲಾ ಮಾತನಾಡಿ, ಕೆಲವು ಸಂತ್ರಸ್ತ ಅವಲಂಬಿತರ ಪ್ರಸ್ತಾವನೆಗಳು ತಿರಸ್ಕೃತವಾಗಿವೆ. ಇವರಿಗೆ ಮಾನವೀಯತೆ ಆಧಾರದ ಮೇಲೆ ಪರ್ಯಾಯವಾಗಿ ಉದ್ಯೋಗ ನೀಡುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದರು.

ಜಿಲ್ಲಾಧಿಕಾರಿ ಚಾರುಲತಾ ಮಾತನಾಡಿ, ನಾಲ್ವರು ಸಂತ್ರಸ್ತ ಅವಲಂಬಿತರಿಗೆ ಸರ್ಕಾರಿ ಹುದ್ದೆ ನೀಡುವ ಸಂಬಂಧ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ. ಇನ್ನೂ ಇಬ್ಬರು ಸಂತ್ರಸ್ತ ಅವಲಂಬಿತರ ದಾಖಲಾತಿ ಸಲ್ಲಿಕೆ ಪ್ರಕ್ರಿಯೆ ನಡೆಯುತ್ತಿದೆ. ಸುತ್ತೋಲೆ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಿದೆ ಎಂದರು.

ಸುಳ್ವಾಡಿ ಪ್ರಕರಣದಲ್ಲಿ ನೊಂದವರಿಗೆ ಆರೋಗ್ಯ ತಪಾಸಣೆ ಶಿಬಿರವನ್ನು ಇತ್ತೀಚೆಗೆ ಜಿಲ್ಲಾಡಳಿತ ಆಯೋಜಿಸಿದ್ದು ಶ್ಲಾಘನೀಯ. ಇನ್ನೂ ಹಲವರು ಅನಾರೋಗ್ಯದಿಂದ ಬಳಲುತ್ತಿದ್ದು, ನಿರಂತರ ಚಿಕಿತ್ಸೆ, ನೆರವು ಅಗತ್ಯವಿದೆ. ಇವರಿಗಾಗಿ ವಿಶೇಷವಾಗಿ ಆರೋಗ್ಯ ಕಾರ್ಡ್ ಸೇರಿದಂತೆ ಇತರೆ ಸೌಲಭ್ಯಗಳ ಮೂಲಕ ಚಿಕಿತ್ಸೆಗೆ ಮುಂದಾಗಬೇಕು ಎಂದು ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ಕೆಂಪನಪುರ ಸಿದ್ದರಾಜು, ಸುಳ್ವಾಡಿ ಸೋಮಶೇಖರ್, ಕಗ್ಗಲಿಗುಂದಿ ಹಳ್ಳಿ ಸಿದ್ದರಾಜು, ಟಿ.ಎಸ್.ರಾಜೇಂದ್ರ, ಆಸೀಫ್ ಉಲ್ಲಾ ಮನವಿ ಮಾಡಿದರು.

ಜಿಲ್ಲಾಧಿಕಾರಿ ಪ್ರತಿಕ್ರಿಯಿಸಿ, ಆರೋಗ್ಯ ಇಲಾಖೆಯಿಂದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಲಾಗುವುದು. ಸುಳ್ವಾಡಿಯಲ್ಲಿಯೇ ವಿಶೇಷ ಶಿಬಿರ ಆಯೋಜಿಸಿ ಆರೋಗ್ಯ ಕಾರ್ಡ್ ಸೇರಿದಂತೆ ಇನ್ನಿತರ ಪೂರಕ ಸೌಲಭ್ಯ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೇಲೆ ಎಸಗುವ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಅನುಷ್ಠಾನದಲ್ಲಿರುವ ಕಾಯ್ದೆ, ಶಿಕ್ಷೆ ಬಗ್ಗೆ ಎಲ್ಲಾ ವರ್ಗದ ಜನರಿಗೆ ಮನವರಿಕೆ ಮಾಡಿಕೊಡುವ ಕಾರ್ಯಾಗಾರ ತರಬೇತಿ ಶಿಬಿರಗಳನ್ನು ಏರ್ಪಡಿಸಬೇಕು ಎಂದು ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರು ಸಲಹೆ ನೀಡಿದರು.

ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರ ಸಹಕಾರದೊಂದಿಗೆ ಕಾರ್ಯಾಗಾರ ತರಬೇತಿ ಶಿಬಿರಗಳನ್ನು ಆಯೋಜಿಸಬೇಕು. ಮುಂದಿನ ಸಭೆಗೂ ಮೊದಲು ಸಾಕಷ್ಟು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚಿಸಿದರು.

ಎಎಸ್ಪಿ ಕೆ.ಎಸ್.ಸುಂದರ್‌ರಾಜ್, ಎಡಿಸಿ ಎಸ್.ಕಾತ್ಯಾಯಿನಿದೇವಿ, ಪ್ರಧಾನ ಸರ್ಕಾರಿ ಅಭಿಯೋಜಕಿ ಟಿ.ಹೆಚ್.ಲೋಲಾಕ್ಷಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಹೆಚ್.ಸಿ.ಭಾಗೀರಥಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳಾದ ಎಲ್.ಗಂಗಾಧರ್, ಚಿಕ್ಕಬಸವಯ್ಯ, ಜಯಕಾಂತಮ್ಮ, ನಂಜುಂಡೇಗೌಡ ಇನ್ನಿತರ ಅಧಿಕಾರಿಗಳು ಸಭೆಯಲ್ಲಿದ್ದರು.

ಚಾ.ನಗರದಲ್ಲಿ ವಿಜೃಂಭಣೆಯ ಶ್ರೀಮಂಟೇಸ್ವಾಮಿ ಕೊಂಡೋತ್ಸವ



ಚಾಮರಾಜನಗರ, ಏ.8(ಎಸ್‌ಎಸ್)– ನಗರದ ಉಪ್ಪಾರ ಸಮುದಾಯದಿಂದ ಶ್ರೀ ಮಂಟೇಸ್ವಾಮಿ ಅವರ ಕೊಂಡೋತ್ಸವ, ಕಂಡಾಯ ಮೆರವಣಿಗೆ ಶುಕ್ರವಾರ ವಿಜೃಂಭಣೆಯಿಂದ ಜರುಗಿತು.

ನಗರದ ಸಂತೇಮರಹಳ್ಳಿ ವೃತ್ತದ ಬಳಿ ಇರುವ ಶ್ರೀ ಮಂಟೇಸ್ವಾಮಿ ದೇವಸ್ಥಾನದ ಮುಂಭಾಗ ನಡೆದ ಕೊಂಡೋತ್ಸವದಲ್ಲಿ 12 ಮಂದಿ ಕೊಂಡ ಹಾಯ್ದರು.ಇದಕ್ಕೂ ಮುನ್ನ ನಡೆದ ಸತ್ತಿಗೆ–ಸುಪಾನಿ, ಕಂಡಾಯಗಳ ಮೆರವಣಿಯಲ್ಲಿ ಸಹಸ್ರಾರು ಜನರು ಪಾಲ್ಗೊಂಡಿದ್ದರು.

ಕೊಂಡೋತ್ಸವದ ಅಂಗವಾಗಿ ಕಂಡಾಯಗಳನ್ನು ನಗರದ ಖಾಸಗಿ ಬಸ್ ನಿಲ್ದಾಣದ ಬಳಿ ಇರುವ ಶ್ರೀ ಕೊಳದಗಣಪತಿ ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಲಾಯಿತು. ಅಲ್ಲಿ ಬಣ್ಣ ಬಣ್ಣದ ಹೂಗಳಿಂದ ಕಂಡಾಯಗಳನ್ನು ಅಲಂಕಾರಿದ ನಂತರ ಪೂಜೆ ಸಲ್ಲಿಸಲಾಯಿತು.

ಬಳಿಕ ವಿವಿಧ ಕಲಾತಂಡಗಳೊಂದಿಗೆ ಆರಂಭವಾದ ಸತ್ತಿಗೆ, ಸೂರಪಾನಿ, ಕಂಡಾಯಗಳ ಮೆರವಣಿಗೆ ನಗರದ ದೊಡ್ಡಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ, ಸಂತೇಮರಹಳ್ಳಿ ವೃತ್ತದ ಮೂಲಕ ಶ್ರೀ ಮಂಟೇಸ್ವಾಮಿ ದೇವಸ್ಥಾನದ ಬಳಿಗೆ ಮಧ್ಯಾಹ್ನ ಆಗಮಿಸಿತು. ಈ ವೇಳೆ ದೇವಸ್ಥಾನದ ಮುಂಭಾಗ ಹಾಕಿದ್ದ ನಿಗಿನಿಗಿ ಕೆಂಡವನ್ನು ಕಂಡಾಯ ಹೊತ್ತ 12 ಜನರು ಹಾಯ್ದರು. ನೆರೆದಿದ್ದ ಅಸಖ್ಯಾಂತ ಜನರು ಭಕ್ತಿಪರವಶಗೊಂಡರು.

ಮಂಟೇಶ್ವಾಮಿ ಕಂಡಾಯಗಳ ಮೆರವಣಿಗೆ ಹಾಗೂ ಕೊಂಡೋತ್ಸವ ಕಳೆದ ನಾಲ್ಕು ವರ್ಷಗಳಿಂದ ನಡೆದಿರಲಿಲ್ಲ. ಹೀಗಾಗಿ ಈ ವರ್ಷ ಅದ್ದೂರಿಯಾಗಿ ನಡೆಯಿತು. ಕೊಂಡೋತ್ಸವದ ಅಂಗವಾಗಿ ಸಂತೇಮರಹಳ್ಳಿ ವೃತ್ತ, ಸಂತೇಮರಳ್ಳಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿ, ಶ್ರೀ ಮಂಟೇಸ್ವಾಮಿ ದೇವಸ್ಥಾನ ಹಾಗೂ ಉಪ್ಪಾರ ಸಮುದಾಯದ ಬಡಾವಣೆಗಳು ವಿದ್ಯುತ್ ದಿಪಾಲಂಕಾರದಿಂದ ಕಂಗೊಳಿಸಿದವು.

ಆಯತಪ್ಪಿ ಬಿದ್ದ ಭಕ್ತ : ಮಂಟೇಸ್ವಾಮಿ ಕೊಂಡೋತ್ಸವದ ವೇಳೆ ಭಕ್ತರೊಬ್ಬರು ಕೊಂಡ ಹಾಯುವಾಗ ಆಯತಪ್ಪಿ ಬಿದ್ದು ಗಾಯಗೊಂಡರು. ಮಹಾದೇವ ಎಂಬ ಭಕ್ತಕೊಂಡ ಹಾಯುತ್ತಿದ್ದರು. ಈ ವೇಳೆ ಆಯ ತಪ್ಪಿ ಕೆಳಗೆ ಬಿದ್ದಿದ್ದಾರೆ. ತಕ್ಷಣವೇ ಪಕ್ಕಕ್ಕೆ ಸರಿದ ಪರಿಣಾಮ ಪ್ರಾಣಾಪಾಯದಿಂದ ಪಾರಾದರು.

ವನ್ಯಜೀವಿ ಬೇಟೆಗಾರನ ಬಂಧನ

ಚಾಮರಾಜನಗರ, ಏ.8(ಎಸ್‌ಎಸ್)–ಜಿಂಕೆ ಹಾಗೂ ಕಡವೆಗಳನ್ನು ಬೇಟೆಯಾಡುತ್ತಿದ್ದ ಆರೋಪಿಯೊಬ್ಬನನ್ನು ಬಂಧಿಸುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಚಾಮರಾಜನಗರ ತಾಲೂಕಿನ ಮೂಕನಪಾಳ್ಯ ಗ್ರಾಮದ ಜಗದೀಶನಾಯ್ಕ(38) ಬಂಧಿತನಾಗಿದ್ದು, ಮತ್ತೋರ್ವ ಆರೋಪಿ ಅದೇ ಗ್ರಾಮದ ನಾಗೇಶನಾಯ್ಕ(42) ತಲೆಮರೆಸಿಕೊಂಡಿದ್ದಾನೆ.

ವಿವರ: ಬಿಳಿಗಿರಿರಂಗನಾಥಸ್ವಾಮಿ ದೇವಾಲಯ(ಬಿಆರ್‌ಟಿ) ವ್ಯಾಪ್ತಿಯ ಕೆ.ಗುಡಿ ವನ್ಯಜೀವಿ ವಲಯ, ಅಟ್ಟುಗೂಳಿಪುರ ಶಾಖೆಯ ಉಪವಲಯ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಗುರುವಾರ ಮಧ್ಯಾಹ್ನ ರಾಮಾಪುರ ಸಮೀಪದ ಅರಣ್ಯದಲ್ಲಿ ಗಸ್ತಿನಲ್ಲಿದ್ದರು. ಈ ವೇಳೆ ಜಗದೀಶನಾಯ್ಕ ಹಾಗೂ ನಾಗೇಶನಾಯ್ಕ ಸಿಬ್ಬಂದಿಯನ್ನು ಕಂಡು ಅನುಮಾನಾಸ್ಪದವಾಗಿ ಓಡಲು ಪ್ರಯತ್ನಿಸಿದ್ದಾರೆ. ಇವರನ್ನು ಬೆನ್ನತ್ತಿದ ಸಿಬ್ಬಂದಿ ಜಗದೀಶನಾಯ್ಕ ಹಿಡಿಯುವಲ್ಲಿ ಯಶಸ್ವಿಯಾದರು. ನಾಗೇಶನಾಯ್ಕ ಪರಾರಿಯಾಗಿದ್ದಾನೆ.

ಬಂಧಿತ ಜಗದೀಶನಾಯ್ಕನನ್ನು ವಿಚಾರಣೆಗೆ ಒಳಪಡಿಸಿದಾಗ ಬೇಟೆಯಾಡಿದ್ದ ಜಿಂಕೆಯನ್ನು ಚೀಲದಲ್ಲಿ ಹಾಕಿ ಪೊದೆಯಲ್ಲಿ ಇಟ್ಟಿರುವವುದನ್ನು ಒಪ್ಪಿಕೊಂಡಿದ್ದಾನೆ. ಆತನ ಮನೆಯಲ್ಲಿ ಶೋಧಿಸಿದಾಗ ಎರಡು ಕೆಜಿ ಕಡವೆ ಒಣಮಾಂಸ, ಎರಡು ಕೊಂಬುಗಳು ಹಾಗೂ ಜಿಂಕೆಯ ನಾಲ್ಕು ಕೊಂಬುಗಳು ಪತ್ತೆಯಾಗಿವೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣೆ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಕಾರ್ಯಾಚರಣೆಯಲ್ಲಿ ಕೆ.ಗುಡಿ ವಲಯ ಅರಣ್ಯಾಧಿಕಾರಿ ಶಾಂತಪ್ಪ ಪೂಜಾರ್, ಅಟ್ಟುಗೂಳಿಪುರ ಉಪವಲಯ ಅರಣ್ಯಧಿಕಾರಿ ಮಂಜುನಾಥ್, ಸಿಬ್ಬಂದಿ ಮಹೇಶ್ ಜಾಧವ್, ಮೂರ್ತಿ, ಮಷಾಕ್ ಸೇರಿದಂತೆ ಇತರರಿದ್ದರು.

ಬಿತ್ತನೆ ಬೀಜ ಬೆಲೆ ಹೆಚ್ಚಳ; ಪ್ರತಿಭಟನೆ



ಗುಂಡ್ಲುಪೇಟೆ, ಏ.8 (ಸೋಮ್.ಜಿ)–ಕೃಷಿ ಇಲಾಖೆಯ ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸುವ ಬಿತ್ತನೆ ಬೀಜಗಳ ಬೆಲೆ ಹೆಚ್ಚಳ ವಿರೋಧಿಸಿ ರೈತ ಸಂಘಟನೆಗಳು ಪ್ರತಿಭಟಿಸಿದವು.

ಪಟ್ಟಣದ ಕೃಷಿ ಇಲಾಖೆ ಕಚೇರಿ ಎದುರು ಜಮಾಯಿಸಿದ ಸಂಘಟನೆಗಳ ಕಾರ್ಯಕರ್ತರು, ಸರ್ಕಾರ ರೈತರಿಗೆ ರಿಯಾಯಿತಿ ದರದಲ್ಲಿ ಸೂರ್ಯಕಾಂತಿ, ಜೋಳ, ನೆಲಗಡಲೆ, ಉದ್ದು ಮುಂತಾದ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ನೀಡುತ್ತಿದೆ.

ಆದರೆ ಈ ಬಾರಿ ಬೀಜ ಕಂಪನಿಗಳು ದುಪ್ಪಟ್ಟು ದರ ನಿಗದಿಪಡಿಸಿವೆ. ಈಗಾಗಲೇ ರೈತರು ತೀವ್ರ ಸಂಕಷ್ಟದಲ್ಲಿದ್ದು, ದುಬಾರಿ ಬೆಲೆತೆತ್ತು ಬಿತ್ತನೆ ಬೀಜ ಕೊಳ್ಳಲು ಸಾಧ್ಯವಿಲ್ಲ. ಆದ್ದ ರಿಂದ ಸರ್ಕಾರ ಕಳೆದ ವರ್ಷದ ದರದ ಲ್ಲಿಯೇ ಬಿತ್ತನೆ ಬೀಜ ಪೂರೈಕೆ ಮಾಡಬೇಕು ಎಂದು ಒತ್ತಾಯಿಸಿದರು. ಅಲ್ಲದೆ ಸಹಾಯಕ ಕೃಷಿ ನಿರ್ದೇಶಕ ಪ್ರವೀಣ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಹೊನ್ನೂರು ಪ್ರಕಾಶ್, ಡಾ.ಗುರುಪ್ರಸಾದ್, ಕಡಬೂರು ಮಂಜುನಾಥ್, ಮಾಡ್ರಹಳ್ಳಿ ಮಹದೇವಪ್ಪ, ಹಾಲಹಳ್ಳಿ ಮಹೇಶ್, ಕೃಷಿ ಅಧಿಕಾರಿಗಳಾದ ಸತೀಶ್, ಕಿರಣ್ ಕುಮಾರ್ ಇದ್ದರು.

ಮಾದಪ್ಪನ ಹುಂಡಿಯಲ್ಲಿ 2.13 ಕೋಟಿ ರೂ. ಸಂಗ್ರಹ



ಚಾಮರಾಜನಗರ, ಏ.8(ಎಸ್‌ಎಸ್)– ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳ ಮಹದೇಶ್ವರ ಬೆಟ್ಟದ ಮಲೆಮಹದೇಶ್ವರ ಸ್ವಾಮಿ ದೇವಾಲಯದ ಹುಂಡಿ ಎಣಿಕೆ ನಡೆದು, 28 ದಿನಗಳಲ್ಲಿ 2.13 ಕೋಟಿ ರೂ. ಕಾಣಿಕೆ ಸಂಗ್ರಹವಾಗಿದೆ. ಬೆಟ್ಟದಲ್ಲಿ ಶುಕ್ರವಾರ ಹುಂಡಿ ಎಣಿಕೆ ಕಾರ್ಯ ನಡೆಯಿತು. 45 ಗ್ರಾಂ ಚಿನ್ನ ಹಾಗೂ 1 ಕೆಜಿ 900 ಗ್ರಾಂ ಬೆಳ್ಳಿಯನ್ನು ಕಾಣಿಕೆ ರೂಪದಲ್ಲಿ ಮಾದಪ್ಪನಿಗೆ ಅರ್ಪಿಸಿದ್ದಾರೆ.

ಮಾ.29ರಿಂದ ಏ.2ರವರೆಗೆ ಯುಗಾದಿ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಬೆಟ್ಟಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದಿದ್ದರು. ನೋಟು ರೂಪದಲ್ಲಿ 2,00,30,988 ರೂ. ಹಾಗೂ ನಾಣ್ಯದ ರೂಪದಲ್ಲಿ 13,22,107 ರೂ. ಸೇರಿದಂತೆ 2,13,53,095 ಸಂಗ್ರಹವಾಗಿದೆ.

ದಲಿತ ಸಮುದಾಯ ದೊಡ್ಡ ಯಜಮಾನರಾಗಿ ಚಿಕ್ಕಮಾಳಿಗೆ ಆಯ್ಕೆ



ಕೊಳ್ಳೇಗಾಲ, ಏ.8–ಪಟ್ಟಣದ ಭೀಮನಗರದ ಕಸಬಾ ಮನೆ(ದಲಿತ ಸಮುದಾಯ) ದೊಡ್ಡ ಯಜಮಾನರ ಸ್ಥಾನಕ್ಕೆ ಪತ್ರಕರ್ತ ಚಿಕ್ಕಮಾಳಿಗೆ ಅವರು ಗುರುವಾರ 3ನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಭೀಮನಗರದ ಪನ್ನಾಬೀದಿ ಚಾವಡಿಯಲ್ಲಿ ಬೆಳಗ್ಗೆ ಆಯೋಜಿಸಿದ್ದ ಕುಲಸ್ಥರ ಸಭೆಯಲ್ಲಿ ಭೀಮನಗರದ ಹಲವು ಮುಖಂಡರು, ಯುವಕರು ಹಾಗೂ ನೂತನ ಯಜಮಾನರುಗಳ ಅಪೇಕ್ಷೆಯಂತೆ ಚಿಕ್ಕಮಾಳಿಗೆ ಅವರನ್ನು ಪನ್ನಾಬೀದಿಯ ಹಿರಿಯರು ಅವಿರೋಧವಾಗಿ ಆಯ್ಕೆ ಮಾಡಿದರು. ಸಭೆಯಲ್ಲಿ ಮುಖಂಡರಾದ ಕುಮಾರಸ್ವಾಮಿ, ಜಾನ್ ಚಂದರ್, ಸಿ.ಬಾಬು, ದೀಪಕ್, ಪಶುಪತಿ, ಡಿ. ಪ್ರದೀಪ್, ಮಾರ್ಟಿನ್, ಇಂದ್ರಜಿತ್, ಪ್ರವೀಣ್ ಇತರರಿದ್ದರು.

ಜನರ ಬಲಿ ಪಡೆಯುತ್ತಿರುವ ಹುಲಿ ಸೆರೆಗೆ ಸೂಚನೆ

ಕುಂದು ಕೊರತೆ ಸಭೆ ನಡೆಸಿದ ಅರಣ್ಯ ಸಚಿವ ಉಮೇಶ್ ಕತ್ತಿ



ಶುಕ್ರವಾರ ಮಡಿಕೇರಿಗೆ ಆಗಮಿಸಿದ ಅರಣ್ಯ ಸಚಿವ ಉಮೇಶ್ ಕತ್ತಿ ಅವರಿಗೆ ಶಾಸಕ ಅಪ್ಪಚ್ಚುರಂಜನ್ ಒಡಿಕತ್ತಿ ನೀಡಿ ಗೌರವಿಸಿದರು. ಚಿತ್ರದಲ್ಲಿ ಶಾಸಕರಾದ ಕೆ.ಜಿ. ಬೋಪಯ್ಯ, ವೀಣಾ ಅಚ್ಚಯ್ಯ, ಮಾಜಿ ಸಚಿವ ಎಂ.ಸಿ. ನಾಣಯ್ಯ, ಪಶ್ಚಿಮ ಘಟ್ಟ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷ ರವಿ ಕುಶಾಲಪ್ಪ ಇನ್ನಿತರರಿದ್ದಾರೆ.

ಮಡಿಕೇರಿ, ಏ.8– ವಿರಾಜಪೇಟೆ ವಿ.ಬಾಡಗ ಗ್ರಾಮದಲ್ಲಿ ಮಾನವ ಜೀವ ಹಾನಿ ಮಾಡಿದ ಹುಲಿ ಸೆರೆಗೆ 11 ದಿನಗಳಿಂದ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಅದನ್ನು ಸೆರೆ ಹಿಡಿಯಲು ಸೂಚನೆ ನೀಡಲಾಗಿದೆ ಎಂದು ಅರಣ್ಯ ಸಚಿವ ಉಮೇಶ್ ಕತ್ತಿ ಹೇಳಿದ್ದಾರೆ.

ನಗರದ ಅರಣ್ಯ ಭವನದಲ್ಲಿ ಬೆಳೆಗಾರರು, ಕೃಷಿಕರು, ವಿವಿಧ ಸಂಘ ಸಂಸ್ಥೆಗಳ ಪ್ರಮುಖರೊಂದಿಗೆ ಸಚಿವ ಉಮೇಶ್ ಕತ್ತಿ ಕುಂದು ಕೊರತೆಗಳ ಸಭೆ ನಡೆಸಿದರು. ಸಭೆಯ ಪ್ರಾರಂಭದಲ್ಲಿ ಮಾತನಾಡಿದ ಪಿಸಿಸಿಎಫ್ ವಿಜಯ್ ಕುಮಾರ್ ಗೋಗಿ, ಕಾಡಂಚಿನ ಗ್ರಾಮಗಳಲ್ಲಿ ಕಾಡಾನೆ ಹಾವಳಿ ತಪ್ಪಿಸಲು ಒಟ್ಟು 700 ಕೋಟಿ ರೂ.ಗಳ ಮೊತ್ತದಲ್ಲಿ ಬ್ಯಾರಿಕೇಡ್ ಅಳವಡಿಸುವ ಅಗತ್ಯವಿದೆ. ಏಕಕಾಲದಲ್ಲಿ ಈ ಅನುದಾನ ಬಿಡುಗಡೆಯಾದಲ್ಲಿ ಮಾತ್ರವೇ ಕಾಡಾನೆ ಹಾವಳಿಯನ್ನು ಶೇ.95ರಷ್ಟು ತಡೆಗಟ್ಟಬಹುದು. ಆದರೆ ಈ ಬೃಹತ್ ಮೊತ್ತದ ಅನುದಾನ ಏಕಕಾಲದಲ್ಲಿ ಬಿಡುಗಡೆ ಆಗದೇ ಇರುವುದರಿಂದ ಕಾಡಾನೆ ಹಾವಳಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಕೊಡಗು ಬೆಳೆಗಾರರ ಒಕ್ಕೂಟದ ಸಲಹೆಗಾರ ಶರಿ ಸುಬ್ಬಯ್ಯ ಮಾತನಾಡಿ, ಕೊಡಗು ಜಿಲ್ಲೆಗೆ ಓರ್ವ ಶಾಶ್ವತ ಸಿಸಿಎಫ್ ಅವರನ್ನು ನಿಯೋಜನೆ ಮಾಡಬೇಕು. ಹುಲಿ ದಾಳಿಯ ಸಂದರ್ಭವನ್ನು ಎದುರಿಸಲು ತಕ್ಷಣವೇ ಟಾಸ್ಕ್ ಫೋರ್ಸ್ ರಚಿಸಿ, ಅದಕ್ಕೆ ಓರ್ವ ಡಿಎಫ್‌ಓ ಅವರನ್ನು ವಿಶೇಷವಾಗಿ ನೇಮಿಸಬೇಕು. ಬ್ಯಾರಿಕೇಡ್ ಅಳವಡಿಕೆ ಕಾರ್ಯಯನ್ನು ತ್ವರಿತಗತಿಯಲ್ಲಿ ಮಾಡಬೇಕು. ಕುಟ್ಟ ಪ್ರದೇಶದಲ್ಲಿರುವ ಬೇಗೂರು–ಬ್ರಹ್ಮಗಿರಿ ಕಾರಿಡಾರ್ ಅನ್ನು ಅನುಷ್ಠಾನಕ್ಕೆ ತರುವಂತೆ ಸಲಹೆ ನೀಡಿದರು.

ಬೆಳೆಗಾರ ಉಮೇಶ್ ಕೇಚಮಯ್ಯ ಮಾತನಾಡಿ, ಹುಲಿ ಮತ್ತು ವನ್ಯ ಜೀವಿ ಸಂಘರ್ಷದಿಂದ ಜೀವ ಕಳೆದುಕೊಂಡ ಸಂದರ್ಭ ಧರಣಿ ನಡೆಸಿ, ನ್ಯಾಯ ಕೊಡಿಸಬೇಕಾದ ಪರಿಸ್ಥಿತಿ ಬಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಹುಲಿ ಭಯದಿಂದ ಕಾರ್ಮಿಕರು, ಬೆಳೆಗಾರರು ತೋಟಕ್ಕೆ ಹೋಗಲಾಗುತ್ತಿಲ್ಲ. ನರ ಹಂತಕ ಹುಲಿ ಮನುಷ್ಯನ ರಕ್ತದ ರುಚಿ ನೋಡಿದ್ದು, ಮತ್ತೆ ಮಾನವನ ಮೇಲೆ ದಾಳಿ ನಡೆಸುವ ಎಲ್ಲಾ ಸಾಧ್ಯತೆಗಳಿವೆ. ಹೀಗಾಗಿ ಹುಲಿಗೆ ಗುಂಡಿಕ್ಕಲು ಆದೇಶ ನೀಡುವಂತೆ ಒತ್ತಾಯಿಸಿದರು.

ವಿ. ಬಾಡಗ ನಿವಾಸಿ ಬೆಳೆಗಾರ ಬಲ್ಲಡ್ ಚಂಡ ಲೋಕನಾಥ್ ಮಾತನಾಡಿ, 11 ದಿನಗಳು ಕಳೆದರೂ ಕೂಡ ಹುಲಿಯನ್ನು ಸೆರೆಹಿಡಿಯಲಾಗಿಲ್ಲ, ಮಕ್ಕಳನ್ನು ಶಾಲೆಗೆ ಕಳುಹಿಸಲು ಕೂಡ ಭಯವಾಗುತ್ತಿದೆ. ಬಿಟ್ಟಂಗಾಲ, ಬಾಡಗ, ಬಿ.ಶೆಟ್ಟಿಗೇರಿ, ಕುಟ್ಟಂದಿ, ಕೊಳತ್ತೋಡು ಬೈಗೋಡು ಪ್ರದೇಶಗಳಲ್ಲಿ ಹುಲಿ ಸಂಚರಿಸುತ್ತಿದ್ದು, ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದೆ. ಹೀಗಾಗಿ ಹುಲಿಯನ್ನು ಗುಂಡಿಕ್ಕಿ ಕೊಲ್ಲುವಂತೆ ಆಗ್ರಹಿಸಿದರು.

ರೈತ ಸಂಘದ ಕಾನೂನು ಸಲಹೆಗಾರ ಹೇಮಚಂದ್ರ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಪ್ರಾಣಿ ಸ್ನೇಹಿ ಅರಣ್ಯ ಅಧಿಕಾರಿಗಳಿದ್ದಾರೆ. ಅರಣ್ಯದಲ್ಲಿ ತೇಗದ ಮರಗಳನ್ನು ಬೆಳೆಸಲಾಗಿದೆ. ಇದೀಗ 'ತೇಗ ತೆಗೆಸಿ, ಕಾಡು ಉಳಿಸಿ' ಅಭಿಯಾನ ನಡೆಸ ಬೇಕಾದ ಅನಿವಾರ್ಯ ಎದುರಾಗಿದೆ. ತೇಗ ಹಾಗೂ ನೀಲಗಿರಿ ಮರಗಳನ್ನು ಕಡಿದು ತೆಗೆಯಬೇಕು. ಪ್ರಾಣ ಹಾಗೂ ಬೆಳೆ ನಷ್ಟಕ್ಕೆ ದಯಾತ್ಮಕ ಹೆಸರಲ್ಲಿ ಪರಿಹಾರ ನೀಡಲಾಗುತ್ತಿದೆ. ನಷ್ಟಕ್ಕೆ ನೀಡುವ ಪರಿಹಾರ ಸರಕಾರದ ಭಿಕ್ಷೆ ಅಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೇ, ದಯಾತ್ಮಕ ಪರಿಹಾರ ಎಂಬ ಹೆಸರನ್ನು ಬದಲಿಸಬೇಕು ಎಂದು ಆಗ್ರಹಿಸಿದರು.

ಮಾಲ್ದಾರೆಯ ಬೆಳೆಗಾರ ನಂದಾ ಸುಬ್ಬಯ್ಯ ಮಾತನಾಡಿ, ಆನೆ ಕ್ಯಾಂಪ್‌ಗಳನ್ನು ಜಿಲ್ಲೆಯಿಂದ ಸ್ಥಳಾಂತರಿಸಬೇಕು. ನಾಗರಹೊಳೆಯಲ್ಲಿ 120 ಹುಲಿ ಇದೆ. ಹುಲಿಗಳ ಸಂಖ್ಯೆ ಏರಿರುವ ಕಾರಣ ತಮ್ಮ ಸ್ಥಾನಗಳಿಂದ ಹೊರಬರುತ್ತಿವೆ. ಇದೇ ರೀತಿ ಮುಂದುವರೆದಲ್ಲಿ ಉಳಿಗಾಲ ಇಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಬೆಳೆಗಾರರ ಒಕ್ಕೂಟದ ವಿಶ್ವನಾಥ್ ಮಾತನಾಡಿ, ಕಾಡಾನೆ, ಹುಲಿ, ಕಾಡು ಹಂದಿ ಮತ್ತಿತ್ತರ ಪ್ರಾಣಿಗಳ ಉಪಟಳ ಮಿತಿ ಮೀರಿದೆ. ಆದರೆ ಇದೀಗ ಮಂಗಗಳು ಕಾಫಿ ಕುಯ್ಯುವ ಕೆಲಸ ಮಾಡುತ್ತಿವೆ. ನಾವುಗಳು ಮಂಗಗಳಿಗೆ ಕಾಫಿ ಕುಯಿಲು ಮಾಡುವ ಕೆಲಸ ಒಪ್ಪಿಸಿದ್ದೇವೆ ಎಂದು ಸಮಸ್ಯೆಯ ಬಗ್ಗೆ ಸಭೆಯ ಗಮನ ಸೆಳೆದರು.

ಬೆಳೆಗಾರ ಲಕ್ಷಣ ಮಾತನಾಡಿ, ಜಿಲ್ಲೆಯಲ್ಲಿ ಪ್ರಾಣಿಗಳ ಸಂಖ್ಯೆ ಏರಿಕೆಯಾಗುತ್ತಿವೆ, ಹೀಗಾಗಿ ಹುಲಿ, ಆನೆ, ಮಂಗಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಕುಂದು ಕೊರತೆಗಳನ್ನು ಆಲಿಸಿದ ಬಳಿಕ ಮಾತನಾಡಿದ ಅರಣ್ಯ ಸಚಿವ ಉಮೇಶ್ ಕತ್ತಿ, ಮಾನವ ಜೀವ ಬಲಿ ಪಡೆದ ಹುಲಿಯ ಸೆರೆಗೆ ಕ್ರಮ ಕೈಗೊಳ್ಳಲಾಗಿದೆ. ಈ ಭಾಗದಲ್ಲಿ 4 ಹುಲಿಗಳು ಸಂಚರಿಸುತ್ತಿವೆ. ಅದರಲ್ಲಿ ಮಾನವ ಜೀವ ಬಲಿ ಪಡೆದ ಹುಲಿಯನ್ನು ಗುರುತಿಸಿ ಸೆರೆ ಹಿಡಿಯಬೇಕಾಗುತ್ತದೆ. ಈಗ ಕಂಡು ಬಂದಿರುವ ಹುಲಿ ಕೇರಳ, ತಮಿಳುನಾಡು ಭಾಗದಿಂದ ಬಂದಿರುವ ಸಾಧ್ಯತೆ ಇದೆ ಎಂದು ಹೇಳಿದರು. ಮನೆ ಕಟ್ಟುವ ಸಂದರ್ಭ ಸ್ವಂತ ಜಾಗದಲ್ಲಿ ಮರ ಕಡಿಯುವ ಪ್ರಕ್ರಿಯೆಯನ್ನು ವಲಯ ಅರಣ್ಯಾಧಿಕಾರಿ ಮತ್ತ ತಹಸೀಲ್ದಾರ್ ಮೂಲಕ ನಡೆಸಲು ಕ್ರಮ ಕೈಗೊಳ್ಳಲಾಗುತ್ತದೆ. ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಅರಣ್ಯ ಮಂತ್ರಿಯಾಗಿ ಕೆಲವು ಕಾನೂನುಗಳನ್ನು ಸರಳೀಕರಣ ಮಾಡುತ್ತೇನೆ ಎಂದು ಭರವಸೆ ನೀಡಿದರು.

> ಅರಣ್ಯ ಸಚಿವರಿಗೆ ಅರಣ್ಯಾಧಿಕಾರಿಗಳ ನಿಯಂತ್ರಣವೇ ಇಲ್ಲ ಎಂಬ ಸಂಶಯ ಕಾಡುತ್ತಿದೆ. ವಿರಾಜಪೇಟೆಯಲ್ಲಿ ಹುಲಿ ದಾಳಿ ನಡೆಸಿದ ಸಂದರ್ಭ ಡಿಎಫ್‌ಓ ಚಕ್ರಪಾಣಿ ಸ್ಥಳಕ್ಕೆ ಬರಲಿಲ್ಲ. ಸಮಸ್ಯೆ ಬಗ್ಗೆ ವಿವರಿಸಿದ ಸಂದರ್ಭ ಅದನ್ನು ಲಿಖಿತ ರೂಪದಲ್ಲಿ ಬರೆದುಕೊಡುವಂತೆ ಹೇಳುತ್ತಾರೆ. ಇಂತಹ ಅಧಿಕಾರಿಯನ್ನು ಕೆಲಸದಿಂದಲೇ ವಜಾಗೊಳಿಸಬೇಕು. ರೈಲ್ವೇ ಬ್ಯಾರಿಕೇಡ್ ದುಬಾರಿಯಾಗಿದೆ. ಹೀಗಾಗಿ ಕೇಂದ್ರ ರೈಲ್ವೇ ಸಚಿವರೊಂದಿಗೆ ರಾಜ್ಯ ಸರಕಾರ ವ್ಯವಹರಿಸಿ, ಉಚಿತವಾಗಿ ರೈಲ್ವೆ ಬ್ಯಾರಿಕೇಡ್ ಪಡೆಯಬೇಕು. ವನ್ಯ ಜೀವಿ ಮಾನವ ಸಂಘರ್ಷ ತಡೆಯಲು ಅರಣ್ಯದೊಳಗಿನ ಎಲ್ಲಾ ರೀತಿಯ ಪ್ರವಾಸೋದ್ಯಮ ಚಟುವಟಿಕೆಗಳನ್ನು ಬಂದ್ ಮಾಡಬೇಕು.
>
> – ಕಾಡ್ಯಮಾಡ ಮನು ಸೋಮಯ್ಯ, ರೈತ ಸಂಘದ ಜಿಲ್ಲಾಧ್ಯಕ್ಷ

ರಾಜ್ಯದ ಕಾಡಂಚಿನ ಗ್ರಾಮಗಳಲ್ಲಿ ಈಗಾಗಲೇ 200 ಕಿ.ಮೀ ರೈಲ್ವೆ ಬ್ಯಾರಿಕೇಡ್ ಅಳವಡಿಕೆ ಮಾಡಲಾಗಿದೆ. ಇನ್ನುಳಿದ 400 ಕಿ.ಮೀ. ಪ್ರದೇಶಕ್ಕೆ ಮುಂದಿನ 3 ವರ್ಷದ ಒಳಗೆ ಬ್ಯಾರಿಕೇಡ್ ಅಳವಡಿಸಲಾಗುತ್ತದೆ. ಇದರಿಂದ ಕಾಡಾನೆಗಳು ನಾಡಿಗೆ ಬರುವುದನ್ನು ತಡೆಯಬಹುದು. ಇದಕ್ಕಾಗಿ ಕೇಂದ್ರ ಸರಕಾರದ ಮೂಲಕ ಹೆಚ್ಚಿನ ಅನುದಾನ ಪಡೆಯಲು ಪ್ರಯತ್ನಿಸಲಾಗುವುದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಡಿಕೇರಿ ಕ್ಷೇತ್ರ ಶಾಸಕ ಅಪ್ಪಚ್ಚು ರಂಜನ್ ಅವರು ಅರಣ್ಯ ಸಚಿವ ಉಮೇಶ್ ಕತ್ತಿ ಅವರಿಗೆ ಶಾಲು ಹೊದಿಸಿ ಕೊಡಗಿನ ಸಾಂಪ್ರದಾಯಿಕ ಒಡಿಕತ್ತಿ ನೀಡಿ ಗೌರವಿಸಿದರು.

ಕುಟುಂಬಕ್ಕೆ ಪರಿಹಾರ: ವಿ.ಬಾಡಗ ಸಮೀಪದ ತೋಟವೊಂದರಲ್ಲಿ ಇತ್ತೀಚೆಗೆ ಕರಿ ಮೆಣಸು ಕೊಯ್ಯುವ ಕೆಲಸಕ್ಕೆ ತೆರಳಿದ್ದ ಸಂದರ್ಭ ಹುಲಿ ದಾಳಿಗೆ ತುತ್ತಾಗಿ ಮೃತಪಟ್ಟ ಗದ್ದೆ ಮನೆ ನಿವಾಸಿ ಗಣೇಶ್ (ಪುಟ್ಟು–29) ಅವರ ಅತ್ತೂರು ಬಳಿಯ ನಿವಾಸಕ್ಕೆ ಅರಣ್ಯ ಸಚಿವ ಉಮೇಶ್ ಕತ್ತಿ ಭೇಟಿ ನೀಡಿ ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ಹೇಳಿದರು ಮತ್ತು 5.50 ಲಕ್ಷ ರೂ.ಗಳ ಪರಿಹಾರದ ಚೆಕ್ ಹಸ್ತಾಂತರಿಸಿದರು. ಹುಲಿ ದಾಳಿಯಿಂದ ಸಾವನ್ನಪ್ಪಿದ ಗಣೇಶ್ ಪುಟ್ಟು ಅವರ ತಾಯಿ ಹಾಗೂ ಪತ್ನಿಗೆ ಸರ್ಕಾರದಿಂದ ವಿಧವಾ ವೇತನವನ್ನು ನೀಡಲಾಗುತ್ತದೆ ಮತ್ತು ಮಕ್ಕಳ ಶಿಕ್ಷಣಕ್ಕೆ ಸರ್ಕಾರದಿಂದ ಅಗತ್ಯ ನೆರವು ನೀಡಲಾಗುವುದು ಎಂದು ಸಚಿವರು ಇದೇ ಸಂದರ್ಭ ಭರವಸೆ ನೀಡಿದರು.

ಸಭೆಯಲ್ಲಿ ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ. ಬೋಪಯ್ಯ, ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ, ಮಾಜಿ ಸಚಿವ ಎಂ.ಸಿ. ನಾಣಯ್ಯ, ಪಶ್ಚಿಮ ಘಟ್ಟ ಸಂರಕ್ಷಣಾ ಕಾರ್ಯಪಡೆ ಅಧ್ಯಕ್ಷ ರವಿ ಕುಶಾಲಪ್ಪ, ಅರಣ್ಯ ಇಲಾಖೆ ಹಿರಿಯ ಅರಣ್ಯಾಧಿಕಾರಿಗಳಾದ ಶಾಶ್ವತಿ ಮಿಶ್ರಾ, ಮಾಲತಿ ಪ್ರಿಯಾ, ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ, ಕೊಡಗು ಡಿಎಫ್‌ಓ ಪೂವಯ್ಯ, ಜಿಲ್ಲಾ ಪೊಲೀಸ್ ಅರಣ್ಯಾಧಿಕಾರಿ ಎಂ.ಅಯ್ಯಪ್ಪ, ವಿರಾಜಪೇಟೆ ಡಿಎಫ್‌ಓ ಚಕ್ರಪಾಣಿ, ನಾಗರಹೊಳೆಯ ಮುಖ್ಯ ಅರಣ್ಯಾಧಿಕಾರಿ ಮಹೇಶ್, ಕೊಡಗು ಜಿ.ಪಂ. ಸಿಇಓ ಭಂವರ್ ಸಿಂಗ್ ಮೀನಾ ಮತ್ತಿತ್ತರು ಹಾಜರಿದ್ದರು.

ನೇಣು ಹಾಕಿಕೊಂಡು ವಿದ್ಯಾರ್ಥಿ ಆತ್ಮಹತ್ಯೆ



ಕುಶಾಲನಗರ,ಏ.8– ತಾಲೂಕಿನ ಕೂಡುಮಂಗಳೂರು ಗ್ರಾಪಂ ವ್ಯಾಪ್ತಿಯ ಬೆಂಡೆಬೆಟ್ಟ ಹಾಡಿಯಲ್ಲಿ ವಿದ್ಯಾರ್ಥಿಯೊರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಗುಮ್ಮನಕೊಲ್ಲಿ ರಸ್ತೆಯ ಮೂಕಾಂಬಿಕಾ ಪ್ರೌಢಶಾಲೆಯ 9ನೇ ತರಗತಿ ವಿದ್ಯಾರ್ಥಿ ಮಂಜುನಾಥ್ (15 ವರ್ಷ) ಮೃತ ಬಾಲಕ.

ಪೋಷಕರಿಲ್ಲದ ಈತ ಕಳೆದ 5 ವರ್ಷಗಳಿಂದ ಅಜ್ಜ, ಅಜ್ಜಿಯ ಮನೆಯಲ್ಲಿ ವಾಸವಾಗಿದ್ದ. ಗುರುವಾರ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ವೇಲ್‌ನಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ ಎನ್ನಲಾಗಿದೆ. ಆದರೆ ಈತನ ಸಾವಿನ ಬಗ್ಗೆ ಸಂಬಂಧಿಕರು ಹಾಗೂ ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದು, ಬಾಲಕನ ಅಜ್ಜ, ಅಜ್ಜಿ ಈತನ ಮೇಲೆ ನಿರಂತರವಾಗಿ ದೌರ್ಜನ್ಯ ಎಸಗುತ್ತಿದ್ದರು ಎಂದು ಆರೋಪಿಸಿದ್ದಾರೆ. ಮೃತ ಬಾಲಕನ ಮೈಮೇಲೆ ಹಲ್ಲೆ ನಡೆಸಿದ ಗುರುತುಗಳಿದ್ದು ಸಾವಿನ ಬಗ್ಗೆ ಸೂಕ್ತ ತನಿಖೆಯಾಗಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ. ಈ ಸಂಬಂಧ ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರದ ಶವಾಗಾರದ ಮುಂದೆ ಬಾಲಕನ ಅಜ್ಜ, ಅಜ್ಜಿ ವಿರುದ್ಧ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿ ಹರಿಹಾಯ್ದಿ ದರು. ಪೊಲೀಸರು ಮಧ್ಯಸ್ಥಿಕೆ ವಹಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಬಾಲಕ ಮಂಜುನಾಥ್ ನಶೆಯ ಪದಾರ್ಥ ತೆಗೆದುಕೊಳ್ಳುವ ಚಟ ಅಂಟಿಸಿ ಕೊಂಡಿದ್ದ. ಈ ಬಗ್ಗೆ ಹಲವು ಬಾರಿ ಬುದ್ಧಿವಾದ ಹೇಳಿ ಗದರಿಸಲಾಗಿತ್ತು. ಗುರುವಾರ ನಾವು ಕೆಲಸಕ್ಕೆ ತೆರಳಿದ್ದ ವೇಳೆ ಮನೆಯಲ್ಲಿ ಆತ್ಮಹತ್ಯೆ ಮಾಡಿ ಕೊಂಡಿದ್ದಾನೆ ಎಂದು ಆತನ ಅಜ್ಜ ಚಂದ್ರಶೇಖರ್ ತಿಳಿಸಿದ್ದಾರೆ. ಈ ನಡುವೆ ಮೃತ ಬಾಲಕ ಮಂಜುನಾಥ್ ಸಾಯುವ ಮುನ್ನ ತನ್ನ ಸ್ನೇಹಿತರಿಗೆ ತಾನು ಆತ್ಮಹತ್ಯೆ ಮಾಡಿಕೊಳ್ಳುವು ದಾಗಿ ಮೊಬೈಲ್‌ಗೆ ವಾಯ್ಸ್ ಮೆಸೆಜ್ ಕಳುಹಿಸಿದ್ದು, ಇದು ಆತನ ಸ್ನೇಹಿತರ ಮೊಬೈಲ್‌ನಲ್ಲಿ ಹರಿದಾಡುತ್ತಿದೆ. ಮೃತನ ಅತ್ತೆ ಭಾಗ್ಯ ನೀಡಿದ ದೂರಿನ ಮೇರೆಗೆ ಅನುಮಾನಾಸ್ಪದ ಸಾವು ಎಂದು ಪ್ರಕರಣ ದಾಖಲಿಸಿಕೊಂಡಿರುವ ಕುಶಾಲನಗರ ಗ್ರಾಮಾಂತರ ಪೊಲೀಸರು ಮರಣೋತ್ತರ ಪರೀಕ್ಷೆಗೆ ಮೃತದೇಹವನ್ನು ಮಡಿಕೇರಿಗೆ ರವಾನಿಸಿ ಮರಣೋತ್ತರ ವರದಿ ನಿರೀಕ್ಷೆಯಲ್ಲಿದ್ದಾರೆ.

ಜಿಂಕೆ ಕೊಂಬು ಮಾರುತ್ತಿದ್ದವನ ಬಂಧನ



ಮಡಿಕೇರಿ, ಏ.8: ಅಕ್ರಮವಾಗಿ ಜಿಂಕೆ ಕೊಂಬುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪಿಯನ್ನು ವಿರಾಜಪೇಟೆ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ. ಮೈಸೂರು ಹೆಚ್.ಡಿ.ಕೋಟೆಯ ಹುಣಸೆಕುಪ್ಪೆ ಗ್ರಾಮ ನಿವಾಸಿ ರವಿ ಅಲಿಯಾಸ್ ಮಂಜು ಬಂಧಿತ ಆರೋಪಿಯಾಗಿದ್ದಾನೆ.

ವಿರಾಜಪೇಟೆ ಪಂಜರಪೇಟೆ ಕಾವೇರಿ ಪದವಿ ಪೂರ್ವ ಕಾಲೇಜಿನ ಮುಂಭಾಗದ ಮುಖ್ಯ ದ್ವಾರದ ಬಳಿ ಇರುವ ಬಸ್ ತಂಗುದಾಣದಲ್ಲಿ ಓರ್ವ ವ್ಯಕ್ತಿ 2 ಚೀಲಗಳಲ್ಲಿ 3 ಜಿಂಕೆ ಕೊಂಬುಗಳನ್ನು ತುಂಬಿಕೊಂಡು ಅದನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ. ಈ ಮಾಹಿತಿ ಆಧರಿಸಿ ವಿ.ಪೇಟೆ ತಾಲೂಕು ಸಿ.ಐ.ಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು ದಾಳಿ ನಡೆಸಿ ಓರ್ವ ಆರೋಪಿಯನ್ನು ಮಾಲು ಸಹಿತ ಬಂಧಿಸಿದ್ದಾರೆ. ಬಂಧಿತ ಆರೋಪಿಯನ್ನು ವಿರಾಜಪೇಟೆ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, 15 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಎನ್.ಟಿ. ಶ್ರೀನಿವಾಸ್ ರೆಡ್ಡಿ ಮಾರ್ಗದರ್ಶನದಲ್ಲಿ ವಿರಾಜಪೇಟೆ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಪ್ರಭಾರ ಆರಕ್ಷಕ ಉಪನಿರೀಕ್ಷಕ ಸಿ.ಯು.ಸವಿ, ಸಿಬ್ಬಂದಿ ಟಿ.ಪಿ. ಮಂಜುನಾಥ್, ಕೆ.ಎಸ್.ದೇವಯ್ಯ, ಸಿ.ಬಿ.ಬಿನ, ಎಸ್.ಎಂ ಯೋಗೇಶ್ ಪಿ.ಯು ಮುನೀರ್, ಆರ್. ನಂದ ಕುಮಾರ್ ಕಾರ್ಯಾಚರಣೆ ನಡೆಸಿದರು.

ಇಂದು ಹಿರಿಯ ನಾಗರಿಕರ ವೇದಿಕೆ ಸಭೆ

ಮಡಿಕೇರಿ, ಏ. 8– ಹಿರಿಯ ನಾಗರಿಕರ ವೇದಿಕೆಯ 2020–21 ರ ಸಾಲಿನ ಸಾಮಾನ್ಯ ಸಭೆಯು ಮಡಿಕೇರಿಯ ಕಡಗದಾಳು ರಸ್ತೆಯ ಕ್ಯಾಪಿಟಲ್ ವಿಲೇಜ್‌ನಲ್ಲಿ ಏ.9 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ.

ವೇದಿಕೆಯ ಅಧ್ಯಕ್ಷರಾದ ಕೊಂಗಂಡ ಎ.ತಿಮ್ಮಯ್ಯ ಅವರು ಸಭೆಯ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲೀರ ಎ.ಅಯ್ಯಪ್ಪ ಇತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸಾಹಿತಿ ನಾಗೇಶ್ ಕಾಲೂರು ಮತ್ತು ನೇತ್ರ ತಜ್ಞರಾದ ಡಾ.ಸಿ.ಆರ್. ಪ್ರಶಾಂತ್ ಅವರನ್ನು ಸನ್ಮಾನಿಸಲಾಗುವುದು ಎಂದು ಹಿರಿಯ ನಾಗರಿಕರ ವೇದಿಕೆಯ ಕಾರ್ಯದರ್ಶಿ ಪಿ.ಎಸ್.ಅರವಿಂದ ತಿಳಿಸಿದ್ದಾರೆ.

ಒಂದನೇ ಪುಟದಿಂದ

ನನ್ನ ಸಂಪೂರ್ಣ ಬೆಂಬಲವಿದೆ



ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಬಡಾವಣೆಯಲ್ಲಿ ಸಿದ್ದರಾಮಯ್ಯ ವೃತ್ತವನ್ನು ಸ್ವತಃ ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಶಾಸಕ ಜಿ.ಟಿ. ದೇವೇಗೌಡ ಉದ್ಘಾಟಿಸಿದರು.

ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸುತ್ತೇನೆ. ಕ್ಷೇತ್ರದ ಜನರ ಸಮಸ್ಯೆಗಳು, ಅಭಿವೃದ್ಧಿ ವಿಚಾರದಲ್ಲಿ ನಾನಿರುತ್ತೇನೆ. ನಿಮ್ಮ ಪರವಾಗಿ ಜಿ.ಟಿ.ದೇವೇಗೌಡನಿಗೆ ನಾನೇ ಅಗ್ರಹಿಸುತ್ತೇನೆ. ಎಲ್ಲರಿಗೂ ಒಂದು ಸೂರು ಇರಬೇಕು. ಅದೇ ರೀತಿ ಬಡಾವಣೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸುವುದು ನಮ್ಮ ಕರ್ತವ್ಯ ಎಂದರು. ಈ ಬಡಾವಣೆ ನಿರ್ಮಿಸುವಾಗ ಎದುರಾದ ಭೂಪರಿವರ್ತನೆ ಸೇರಿದಂತೆ ಹಲವು ತೊಡಕುಗಳನ್ನು



ನಾನು ಬಗೆಹರಿಸಿದ್ದೆ. ಅದಕ್ಕಾಗಿ ನನಗೂ ಒಂದು ನಿವೇಶನ ನೀಡಲು ಬಂದಾಗ ನಾನು ನಿರಾಕರಿಸಿದ್ದೆ. ಆದರೆ ತುಂಬಾ ಒತ್ತಾಯ ಮಾಡಿದ್ದರಿಂದ ನಮ್ಮೂರಿನ ಒಬ್ಬರಿಗೆ ನಿವೇಶನ ಕೊಡುವಂತೆ ಹೇಳಿದೆ. ಅಂದು 40X60 ಅಳತೆ ನಿವೇಶನದ ಬೆಲೆ 1.20 ಲಕ್ಷ ರೂ. ಇತ್ತು. ಈಗ ಆ ನಿವೇಶನ 1 ಕೋಟಿ ರೂ. ಬೆಲೆ ಬಾಳಬಹುದು. ಯಾವುದೇ ಬಡಾವಣೆ ರಚನೆಯಾಗುವ ಮುನ್ನ ಶಾಸಕರಿಗೆ ಗೊತ್ತಾಗುತ್ತದೆ. ಆದರೆ ನಾನು ಶಾಸಕನಾಗಿ, ಮಂತ್ರಿಯಾಗಿ, ಉಪ ಮುಖ್ಯಮಂತ್ರಿ, ಮುಖ್ಯಮಂತ್ರಿಯಾದಾಗಲೂ ಬಡಾವಣೆ ವಿಚಾರದಲ್ಲಿ ನನಗೇನೂ ಗೊತ್ತಿರಲಿಲ್ಲ ಎಂದು ತಿಳಿಸಿದರು.

ನನ್ನ ಚಿಟಿಡಿ ಸೋಲಿಸಿದರು: ಮೈಸೂರು ತಾಲೂಕಿನಲ್ಲಿ ಅತಿ ಹೆಚ್ಚು ಕೆಲಸ ಮಾಡಿದವನು ನಾನು. ಆದರೂ ಜನ ನನ್ನನ್ನು ಸೋಲಿಸಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೋಲು-ಗೆಲುವು ಸಹಜ. ನಾನು ವರುಣ ಕ್ಷೇತ್ರಕ್ಕೆ ಹೋದ ನಂತರ ಹತ್ತು ವರ್ಷ ಚಾಮುಂಡೇಶ್ವರಿ ಕ್ಷೇತ್ರದ ಕಡೆಗೆ ಬರಲಿಲ್ಲ. ಮತ್ತೆ ಇಲ್ಲಿಗೆ ಬಂದು ಸ್ಪರ್ಧಿಸಿದಾಗ ಜಿ.ಟಿ.ದೇವೇಗೌಡರೇ ನನ್ನನ್ನು ಸೋಲಿಸಿಬಿಟ್ಟರು. ಚುನಾವಣೆಯಲ್ಲಿ ಸೋಲಿಸಬೇಕು ಅಂತ ಜನರೇ ತೀರ್ಮಾನ ಮಾಡಿದ್ದರು. ಅದಕ್ಕಾಗಿ ಸೋತಿದ್ದೇನೆ. ಜನರ ನಿರ್ಧಾರವನ್ನು ಎಂದಿಗೂ ಒಪ್ಪಿಕೊಳ್ಳಲೇಬೇಕು ಎಂದು ಸ್ಮರಿಸಿಕೊಂಡರು.

ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಸಾಕಷ್ಟು ಅಭಿವೃದ್ಧಿ ಕೆಲಸಗಳ ಮೂಲಕ ನಿವಾಸಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ. ಇದು ಸುಂದರ ಬಡಾವಣೆಯಾಗಿದ್ದು, ಮನೆ ನಿರ್ಮಾಣಕ್ಕೆ ಸಹಕಾರಿಯಾಗಿದೆ. ಶೀಘ್ರದಲ್ಲೇ ಕಬಿನಿ ಕುಡಿಯುವ ನೀರು ಕಲ್ಪಿಸುವುದರ ಜೊತೆಗೆ ಒಳ ಚರಂಡಿ ವ್ಯವಸ್ಥೆಯನ್ನೂ ಮಾಡಲಾಗುವುದು. ಸುಂದರವಾದ ವಾತಾವರಣ, ಪ್ರೀತಿಯ ಜನರನ್ನು ಹೊಂದಿರುವ ಈ ಬಡಾವಣೆ ಅಭಿವೃದ್ಧಿಗೆ ಸದಾ ಸಿದ್ಧ ಎಂದು ಭರವಸೆ ನೀಡಿದರು.

ಸಿದ್ದರಾಮಯ್ಯ ವೃತ್ತ : ಮೈಸೂರು ವಿವಿ ಬಡಾವಣೆಯಲ್ಲಿ ನಿರ್ಮಿಸಿರುವ ಬಸ್ ತಂಗುದಾಣ, ಹೈಮಾಸ್ಟ್ ದೀಪ, ನವೀಕೃತ ವೃತ್ತ, ಪ್ರವೇಶ ದ್ವಾರದ ಕಮಾನು, ಡಾಂಬರೀಕರಣಗೊಂಡ ರಸ್ತೆ, ಅಮೃತಮಹೋತ್ಸವ ವೇದಿಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಬಡಾವಣೆಯ 'ಸಿದ್ದರಾಮಯ್ಯ ವೃತ್ತ'ವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. 'ಈ ಬಡಾವಣೆ ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡಿರುವ ಸಿದ್ದರಾಮಯ್ಯ ಅವರನ್ನು ಸದಾ ನೆನಪಿನಲ್ಲಿಡಬೇಕು ಎಂಬ ಕಾರಣಕ್ಕೆ ವೃತ್ತಕ್ಕೆ ಅವರ ಹೆಸರನ್ನೇ ಇಡಲಾಗಿದೆ ಎಂದು ಎಂದು ಮೈಸೂರು ವಿವಿ ಉದ್ಯೋಗಿಗಳ ಗೃಹನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಕೃಷ್ಣಮಲ್ಲೇಗೌಡ ತಿಳಿಸಿದರು. ಈ ವೇಳೆ ಮೈಸೂರು ವಿ.ವಿ ಉದ್ಯೋಗಿಗಳ ಗೃಹನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಕೃಷ್ಣಮಲ್ಲೇಗೌಡ, ಮಾಜಿ ಅಧ್ಯಕ್ಷ ಬೀರೇಗೌಡ, ವಿ.ವಿ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎ.ನಾಣಯ್ಯ ಅವರನ್ನು ಅಭಿನಂದಿಸಲಾಯಿತು. ಸಮಾರಂಭದಲ್ಲಿ ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು, ಮೈಸೂರು-ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರಪಾಲಿಕೆ ಸದಸ್ಯ ಜೆ.ಗೋಪಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಮುಖಂಡರಾದ ಎಸ್.ಡಿ.ರವಿಶಂಕರ್, ಕೆ.ಹರೀಶ್ ಗೌಡ ಮತ್ತಿತರರಿದ್ದರು.

ಖಾಸಗಿ ಶಾಲೆಗಳಿಗೆ 'ಬಾಂಬ್' ಬೆದರಿಕೆ

ಯಾವ್ಯಾವ ಶಾಲೆಗಳಿಗೆ ಬೆದರಿಕೆ: ಮಹದೇವಪುರದ ಗೋಪಾಲನ್ ಇಂಟರ್ ನ್ಯಾಷನಲ್ ಶಾಲೆ, ವರ್ತೂರಿನ ಡೆಲ್ಲಿ ಪಬ್ಲಿಕ್ ಶಾಲೆ, ಮಾರತಹಳ್ಳಿಯ ನ್ಯೂ ಅಕಾಡೆಮಿ ಶಾಲೆ, ಹೆಣ್ಣೂರಿನ ಸೆಂಟ್ ವಿನ್ಸೆಂಟ್ ಸ್ಕೂಲ್, ಇಂಡಿಯನ್ ಪಬ್ಲಿಕ್ ಸ್ಕೂಲ್ ಹಾಗೂ ಹೆಬ್ಬಗೋಡಿ ಎಬಿನೈಜರ್ ಶಾಲೆಗಳಿಗೆ ಬಾಂಬ್ ಬೆದರಿಕೆ ಇ-ಮೇಲ್ ಬಂದಿತ್ತು.

ಹುಸಿ ಬಾಂಬ್ ಕರೆ ಸಾಬೀತು: ಬಾಂಬ್ ಬೆದರಿಕೆ ಇ-ಮೇಲ್ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತರಾದ ಪೊಲೀಸರು ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ತಪಾಸಣೆ ನಡೆಸಿದರು. ಶಾಲೆಯ ಪ್ರತಿ ಇಂಚಿಂಚೂ ಜಾಲಾಡಿದರು. ಅನುಮಾನಾಸ್ಪದ ಯಾವುದೇ ವಸ್ತುಗಳು ಪತ್ತೆಯಾಗಿಲ್ಲ. ಹೀಗಾಗಿ ಇದೊಂದು ಹುಸಿ ಬಾಂಬ್ ಕರೆ ಎಂದು ದೃಢಪಡಿಸಿಕೊಂಡು ವಾಪಸ್ ತೆರಳಿದರು.

ಹುಸಿ ಬಾಂಬ್ ಬೆದರಿಕೆ: ಹಿನ್ನೆಲೆಯಲ್ಲಿ ಪೊಲೀಸರಿಗೆ ನಿರ್ದಿಷ್ಟವಾಗಿ ತಿಳಿದುಬಂದಿಲ್ಲ. ಪ್ರಾಥಮಿಕ ತನಿಖೆಯಲ್ಲಿ ಕೇವಲ ಬೆದರಿಸುವ ತಂತ್ರ ರೂಪಿಸಿಕೊಂಡಿರುವುದನ್ನು ಪೊಲೀಸರು ಖಚಿತಪಡಿಸಿಕೊಂಡಿದ್ದಾರೆ. ಬೆದರಿಕೆ ಸಂದೇಶ ಕಳುಹಿಸಿದ ಇ-ಮೇಲ್ ಐಡಿ, ಇತರ ಮಾಹಿತಿ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಹಫೀಜ್ ಸಯ್ಯದ್‌ಗೆ 31 ವರ್ಷ ಜೈಲುಶಿಕ್ಷೆ

ಬಾರಿ ಸಯ್ಯದ್ ಅನ್ನು ಬಂಧಿಸಿ ಬಿಡುಗಡೆ ಮಾಡಲಾಗಿದೆ ಎಂದು ಯುಎಸ್ ಹೌಸ್ ವಿದೇಶಾಂಗ ವ್ಯವಹಾರಗಳ ಸಮಿತಿ ಹೇಳಿದೆ. ನವೆಂಬರ್ 26, 2008ರಂದು ಮುಂಬೈ ಮೇಲೆ ನಡೆದ ಭಯೋತ್ಪಾದಕ ದಾಳಿಯಲ್ಲಿ 166 ಜನರು ಸಾವನ್ನಪ್ಪಿದ ಘಟನೆಗೆ ಹಫೀಜ್ ಸಯ್ಯದ್ ಕಾರಣ ಎಂದು ಹೇಳಲಾಗಿದೆ. 2017ರಲ್ಲಿ ಹಫೀಜ್ ಸಯೀದ್ ಮತ್ತು ಅವರ ನಾಲ್ವರು ಸಹಾಯಕರನ್ನು ಪಾಕಿಸ್ತಾನವು ಬಂಧಿಸಿತು. ಆದರೆ ಪಂಜಾಬ್‌ನ ನ್ಯಾಯಾಂಗ ಪರಿಶೀಲನಾ ಮಂಡಳಿಯು ಅವರ ಬಂಧನವನ್ನು ವಿಸ್ತರಿಸಲು ನಿರಾಕರಿಸಿದಾಗ ಸುಮಾರು 11 ತಿಂಗಳ ನಂತರ ಅವರನ್ನು ಬಿಡುಗಡೆ ಮಾಡಲಾಯಿತು.

ಮಹತ್ತರ ಮಾರ್ಪಾಡು ಸಂಭವ

ಬಗ್ಗೆಯು ಅವರಿಂದ ವಿವರಣೆ ಪಡೆದಿದ್ದಾರೆ. ಶೆಟ್ಟರ್ ಅವರನ್ನು ಭೇಟಿ ಮಾಡುವುದಕ್ಕೂ ಮೊದಲು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ರಾಜ್ಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ಅರುಣ್‌ಕುಮಾರ್, ರಾಜ್ಯ ಬಿಜೆಪಿ ಕಚೇರಿ ನಿರ್ವಹಣೆ ಮಾಡುತ್ತಿರುವ ನಿರ್ಮಲ್‌ಕುಮಾರ್ ಸುರಾನಾ, ಶಾಸಕ ಅರವಿಂದ್ ಬೆಲ್ಲದ್ ಸೇರಿದಂತೆ ಒಂಭತ್ತು ಪ್ರಮುಖ ನಾಯಕರಿಂದ ಮಾಹಿತಿ ಪಡೆದಿದ್ದಾರೆ.

ಒಂದೆರಡು ದಿನದಲ್ಲೇ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವೆ ಶೋಭಾ ಕಂದ್ಲಾಜೆ ಸೇರಿದಂತೆ ಇನ್ನೂ ಐದಾರು ಮುಖಂಡರ ಜೊತೆ ಶಾ, ರಾಜ್ಯ ರಾಜಕೀಯದ ಬಗ್ಗೆ ಮಾಹಿತಿ ಪಡೆಯಲಿದ್ದಾರೆ. ಅಮಿತ್ ಶಾ ನಿನ್ನೆ ಶೆಟ್ಟರ್ ಭೇಟಿಯ ನಂತರ ರಾಜ್ಯ ಬಿಜೆಪಿ ಮತ್ತು ಸರ್ಕಾರದಲ್ಲಿ ಭಾರೀ ಸಂಚಲನ ಮೂಡಿಸಿದೆ.

ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಸಮಯಾವಕಾಶ ಕೇಳಿದರೂ, ಗೃಹ ಸಚಿವರು ಭೇಟಿಗೆ ಅವಕಾಶ ನೀಡಿರಲಿಲ್ಲ. ಬೊಮ್ಮಾಯಿ ದೆಹಲಿ ಬಿಡುತ್ತಿದ್ದಂತೆ ಶೆಟ್ಟರ್ ಅವರನ್ನು ಕರೆಸಿಕೊಂಡು ಮಾತನಾಡಿರುವುದು ಭಾರೀ ಚರ್ಚೆಗೆ ಗ್ರಾಸವಾಗಿದೆ.

ಈ ಭೇಟಿಯ ನಂತರ ಶೆಟ್ಟರ್‌ಗೆ ಭಾರೀ ಬೇಡಿಕೆ ಬಂದಿದೆ. ರಾಜ್ಯದ ಹಲವು ಬಿಜೆಪಿ ನಾಯಕರು ಅವರನ್ನು ಸಂಪರ್ಕಿಸಿ, ಚರ್ಚೆ ಮಾಡುತ್ತಿದ್ದಾರೆ. ದೆಹಲಿಯಲ್ಲೇ ಉಳಿದಿರುವ ಶೆಟ್ಟರ್, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗುವ ಸಾಧ್ಯತೆ ಇದೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ. ಏಪ್ರಿಲ್ 16 ಮತ್ತು 17 ರಂದು ರಾಜ್ಯ ಬಿಜೆಪಿ ಕಾರ್ಯಕಾರಿಣಿ ಹೊಸಪೇಟೆಯಲ್ಲಿ ಜರುಗಲಿದ್ದು, ಅದಕ್ಕೂ ಮುನ್ನ ವರಿಷ್ಠರು ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಮತ್ತು ಪಕ್ಷದಲ್ಲಿ ಕೆಲ ಬದಲಾವಣೆ ಮಾಡಲು ಮುಂದಾಗಿದ್ದಾರೆ.

ವಿಶ್ವ ಮಟ್ಟದಲ್ಲಿ ಭಾರತಕ್ಕೆ ಗೌರವ ತಂದುಕೊಟ್ಟ ಪ್ರಧಾನಿ ಮೋದಿ

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಸಭೆಯಲ್ಲಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿ

ಮೈಸೂರು, ಏ.8(ಆರ್‌ಕೆಬಿ)- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಿಶ್ವದಲ್ಲಿ ಭಾರತಕ್ಕೆ ಗೌರವ ತಂದುಕೊಟ್ಟಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಆಡಳಿತಾತ್ಮಕವಾಗಿ ಅನೇಕ ಬದಲಾವಣೆಗಳಾಗಿವೆ. ಹಲವಾರು ಜಟಿಲ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಂಡಿದ್ದೇವೆ. ಹಾಗಾಗಿ ಇಂದು ಶಕ್ತಿಶಾಲಿ, ಸ್ವಾಭಿಮಾನಿ ಭಾರತ ನಿರ್ಮಾಣ ಸಾಧ್ಯವಾಗುತ್ತಿದೆ. ಇಡೀ ವಿಶ್ವವೇ ಭಾರತಕ್ಕೆ ಗೌರವ ನೀಡುತ್ತಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ತಿಳಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಬಿಜೆಪಿ ಮೈಸೂರು ನಗರ ಜಿಲ್ಲಾ ಹಿಂದುಳಿದ ವರ್ಗಗಳ ಮೋರ್ಚಾದ ಮುಖಂಡರ ಸಭೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಗೋಹತ್ಯೆ ನಿಷೇಧ ಕಾನೂನು ನಾವೇ ತಂದಿದ್ದು. ಆದರೆ ಸಿದ್ದರಾಮಯ್ಯ ಸರ್ಕಾರ ಅದನ್ನು ವಾಪಸ್ ಪಡೆದಿತ್ತು. ಈಗ ಮತ್ತೆ ಅದನ್ನು ಕಠಿಣ ರೀತಿಯಲ್ಲಿ ಜಾರಿಗೊಳಿಸಿದ್ದೇವೆ ಎಂದರು.

ರೈತರು, ಯುವಕರು, ಮಹಿಳೆಯರು, ಪರಿಶಿಷ್ಟರು, ಹಿಂದುಳಿದ ವರ್ಗದವರು ಹೀಗೆ ವಿವಿಧ ವರ್ಗವಾರು ಮೋರ್ಚಾಗಳ ಮೂಲಕ ಆಯಾ ಸಮುದಾಯದ ಅಭಿವೃದ್ಧಿಗೆ ಪಕ್ಷದ ಕಾರ್ಯಕರ್ತರು ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಇಂದು ಬಿಜೆಪಿ ಸಂಘಟನೆ ಗಟ್ಟಿಯಾಗಿದೆ. ಅದನ್ನು ಮತ್ತಷ್ಟು ಗಟ್ಟಿಗೊಳಿಸುವ ಕೆಲಸವನ್ನು ಕಾರ್ಯಕರ್ತರು ಹೆಚ್ಚು ಉತ್ಸಾಹದಿಂದ ಮಾಡಬೇಕು. ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳ ಸಾಧನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ಕಾರ್ಯಕರ್ತರು ಮಾಡಬೇಕು ಎಂದು ಕರೆ ನೀಡಿದರು.

ನಮಗೆ ನೀಡಿರುವ ಹೊಣೆಗಾರಿಕೆಯನ್ನು ಸರ್ಕಾರಕ್ಕೆ ಗೌರವ ತಂದುಕೊಡುವ ರೀತಿಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಸಮರ್ಪಕವಾಗಿ ನಿಭಾಯಿಸಬೇಕು ಎಂದು ಸಲಹೆ ನೀಡಿದರು.

ಹಿಂದುಳಿದ ವರ್ಗಗಳ ಜನರ ಬಗ್ಗೆ ಕಾಳಜಿಯುಳ್ಳ ಸಚಿವ: ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ ಮಾತನಾಡಿ, ಹಿಂದುಳಿದ ವರ್ಗಗಳ ಬಗ್ಗೆ ಕಾಳಜಿ ಇಟ್ಟುಕೊಂಡಿರುವ ಸಚಿವರು ನಮಗೆ ಸಿಕ್ಕಿದ್ದಾರೆ. ಮೈಸೂರು ವಿಭಾಗದಲ್ಲಿ ನಮ್ಮ ಪಕ್ಷದ ಹಿಂದುಳಿದವರ ಪರಿಸ್ಥಿತಿ ಬಗ್ಗೆಯೂ ಸಚಿವರು ಗಮನ ಹರಿಸಬೇಕು. ಮೈಸೂರು ಭಾಗದಲ್ಲಿ ಮುಂಬರುವ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪಕ್ಷದ ಸಂಘಟನೆ ಹೆಚ್ಚಬೇಕಾಗಿದೆ. ಅದರಲ್ಲೂ ಹಿಂದುಳಿದ ವರ್ಗಗಳ ಮುಖಂಡರು, ಕಾರ್ಯಕರ್ತರಿಗೆ ಇನ್ನಷ್ಟು ಶಕ್ತಿ ತುಂಬುವ ಕೆಲಸ ಆಗಬೇಕಾಗಿದೆ. ಇಂತಹ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಜನರನ್ನು ನಮ್ಮ ಪಕ್ಷದ ಪರವಾಗಿ ನಿಲ್ಲುವಂತೆ ಮಾಡಬೇಕಾದ ಅಗತ್ಯವಿದೆ. ಹಾಗಾದರೆ ಮಾತ್ರ ಮುಂದಿನ ಚುನಾವಣೆಯಲ್ಲಿ ನಾವು ಉತ್ತಮ ಫಲಿತಾಂಶ ತರಲು ಸಾಧ್ಯವಾಗಲಿದೆ ಎಂದು ಹೇಳಿದರು.

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ನಗರಾಧ್ಯಕ್ಷ ಜೋಗಿ ಮಂಜು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಮೈ.ವಿ.ರವಿಶಂಕರ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ, ಎಸ್‌ಟಿ ಮೋರ್ಚಾ ಅಧ್ಯಕ್ಷ ಲಕ್ಷ್ಮಣ್, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಹೇಂದ್ರ, ನಗರ ಪಾಲಿಕೆ ಸದಸ್ಯರಾದ ರಮೇಶ್, ಆಶಾ ನಾಗಭೂಷಣ್, ಒಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಗೋಪಾಲ್, ಮಣಿರತ್ನ, ಉಪಾಧ್ಯಕ್ಷ ಶಿವರಾಜ್, ಮುಖಂಡರಾದ ಯೋಗಾನಂದ್, ಹರೀಶ್, ಮಹದೇವು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಸಭೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಮಾತನಾಡಿದರು.

ಬುಡಕಟ್ಟು ಮಕ್ಕಳ ಶಿಕ್ಷಣ ಪ್ರಗತಿ ಬಗ್ಗೆ ನೀತಿ ಆಯೋಗದ ಉಪ ಸಲಹೆಗಾರ ಮುನಿರಾಜು ಚರ್ಚೆ



ಮೈಸೂರು,ಏ.8(ಎಂಟಿವೈ)- ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಡಾ. ಬಾಬು ಜಗಜೀವನ ರಾಮ್ ಭವನದ ಯೋಜನಾ ಸಮನ್ವಯ ಅಧಿಕಾರಿಗಳ ಕಚೇರಿಯಲ್ಲಿ ಭಾರತ ಸರ್ಕಾರದ ನೀತಿ ಆಯೋಗದ ಉಪ ಸಲಹೆಗಾರರಾದ ಮುನಿರಾಜು ಬುಡಕಟ್ಟು ಸಮುದಾಯ ಮಕ್ಕಳ ಶಿಕ್ಷಣದ ಪ್ರಗತಿ ಬಗ್ಗೆ ಅವಲೋಕಿಸಿದರು.

ವಿವಿಧ ಅರಣ್ಯ ಪ್ರದೇಶದಲ್ಲಿ ಹಾಗೂ ವಿವಿಧ ಹಾಡಿಯಲ್ಲಿರುವ ಬುಡಕಟ್ಟು ಜನರು ಹಾಗೂ ಪರಿಶಿಷ್ಟ ಪಂಗಡದ ಜನರ ಶ್ರೇಯೋಭಿವೃದ್ಧಿಗಾಗಿ ಕೇಂದ್ರದ ಗಿರಿಜನ ಸಂಶೋಧನಾ ಕೇಂದ್ರ, ಪರಿಶಿಷ್ಟ ಪಂಗಡಗಳ ಇಲಾಖೆ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮಗಳ ಮೂಲಕ ಹಲವು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳ ಮೂಲಕ ಗಿರಿಜನರ ಸ್ಥಿತಿಗತಿ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು. ಆ ಸಮುದಾಯಗಳ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಕೇಂದ್ರ ಪುರಸ್ಕೃತ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಎಂದು ಅವರು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ರಾಜೇಶ್ ಜಿ.ಗೌಡ, ಸಂಶೋಧನಾ ಅಧಿಕಾರಿ ಶಿವಕುಮಾರ್, ಪಿಸಿಓ ಪ್ರಭಾ ಅರಸ್, ವಾಲ್ಮೀಕಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಎಂ.ಕೆ. ಮಲ್ಲೇಶ್, ತಾಲೂಕು ಕಲ್ಯಾಣ ಅಧಿಕಾರಿಗಳಾದ ಬಸವರಾಜು, ಸಿದ್ದೇಗೌಡ, ನಾರಾಯಣ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಮಹಿಳೆಯರಿಗೆ ಪಿಂಕ್ ಟಾಯ್ಲೆಟ್ ನಿರ್ಮಾಣ



ಮೈಸೂರು ನಗರದ 23ನೇ ವಾರ್ಡಿನ ದಿವಾನ್ಸ್ ರಸ್ತೆಯಲ್ಲಿರುವ ಚಾಮುಂಡಿ ಅತಿಥಿ ಗೃಹದ ಹಿಂಭಾಗ, ಮೈಸೂರು ನಗರ ಪಾಲಿಕೆಯ 14ನೇ ಹಣಕಾಸು ಯೋಜನೆಯಡಿ 37 ಲಕ್ಷ ರೂ. ವೆಚ್ಚದಲ್ಲಿ ವಿಶೇಷವಾಗಿ ನಿರ್ಮಿಸಲುದ್ದೇಶಿಸಿರುವ ಪಿಂಕ್ ಶೌಚಾಲಯಕ್ಕೆ ಶುಕ್ರವಾರ ಶಾಸಕ ಎಲ್. ನಾಗೇಂದ್ರ ಗುದ್ದಲಿ ಪೂಜೆ ನೆರವೇರಿಸಿದರು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಕಾರ್ಪೊರೇಟರ್ ಪ್ರಮೀಳಾ ಭರತ್, ಫಲಾನುಭವಿ ಪ್ರಕೋಷ್ಠದ ಸಂಚಾಲಕ ಆರ್. ಪರಮೇಶ್, ಚಾಮರಾಜ ಬಿಜೆಪಿ ಪ್ರಧಾನ ಕಾರ್ಯದರ್ಶಿ ಈ. ರಮೇಶ್, ವಿಘ್ನೇಶ್ವರ ಭಟ್, ಹರ್ಷ, ಪಾಪಣ್ಣ, ಲಕ್ಷ್ಮಿ, ಅನೂಜ್ ಸರಸ್ವತ್, ಲೋಹಿತ್, ವೀರಭದ್ರಪ್ಪ, ಶ್ರೀಮತಿ ಸುವರ್ಣ, ಸಿಂಧು ಮತ್ತು ಪಾಲಿಕೆ ಅಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

ರಾಜ್ಯದಲ್ಲಿ ಸಾಮರಸ್ಯಕ್ಕೆ ಧಕ್ಕೆ: ಉದ್ಯಮ ಕ್ಷೇತ್ರಕ್ಕೆ ಭಾರೀ ಪೆಟ್ಟು

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಷಾದ

ಮೈಸೂರು, ಏ.8(ಎಸ್‌ಬಿಡಿ)- ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದರಿಂದ ಉದ್ಯಮ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಮೈಸೂರಿನ ಲಲಿತಮಹಲ್ ಹೆಲಿಪ್ಯಾಡ್‌ನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಸಾಮರಸ್ಯ, ಭಾವೈಕ್ಯತೆಗೆ ಧಕ್ಕೆಯಾಗಿ ಅಶಾಂತಿ ಉಂಟಾದರೆ ಬಂಡವಾಳ ಹೂಡಿಕೆಗೆ ಯಾರೂ ಮುಂದಾಗುವುದಿಲ್ಲ. ಪರಿಣಾಮ ಉದ್ಯೋಗ ಸೃಷ್ಟಿಯಾಗುವುದಿಲ್ಲ. ಜಿಡಿಪಿ ಕುಸಿಯುತ್ತದೆ. ಕೈಗಾರಿಕಾ ಕಂಪನಿಗಳು ಬೇರೆ ರಾಜ್ಯಗಳತ್ತ ಮುಖಮಾಡುತ್ತವೆ. ಈ ಕಾರಣದಿಂದಲೇ ಸುಮಾರು 10 ಸಾವಿರ ಉದ್ಯೋಗ ನೀಡಬಲ್ಲ ಓಲಾ ಬೈಕ್ ಉದ್ಯಮ ತಮಿಳುನಾಡಿಗೆ ಹೋಗಿದೆ. ಪರಿಸ್ಥಿತಿ ಸರಿಹೋಗದಿದ್ದರೆ ಬಂಡವಾಳ ಹೂಡಿಕೆದಾರರು ರಾಜ್ಯಕ್ಕೆ ಬಾರದೆ ಆರ್ಥಿಕ ನಷ್ಟವಾಗುತ್ತದೆ ಎಂದು ವಿಷಾದ ವ್ಯಕ್ತಪಡಿಸಿದರು.



ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಧಾರ್ಮಿಕ ವಿಚಾರಗಳನ್ನು ಮುನ್ನಲೆಗೆ ತರುತ್ತಿದ್ದಾರೆ. ಹಿಜಾಬ್, ಹಲಾಲ್, ಭಗವದ್ಗೀತೆ, ಜಾತ್ರಾ ಮಹೋತ್ಸವಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ, ಮಸೀದಿಗಳಲ್ಲಿ ಮೈಕ್‌ಗೆ ಆಕ್ಷೇಪ, ಮಾವಿನ ಹಣ್ಣಿನ ವ್ಯಾಪಾರಕ್ಕೆ ಅಡ್ಡಿ, ಹಲಾಲ್ ವಿರುದ್ಧ ಚಟುವಟಿಕೆ ಹೀಗೆ ಹಲವು ಗೊಂದಲ ಸೃಷ್ಟಿಸುತ್ತಿದ್ದಾರೆ. ಪಂಚರಾಜ್ಯ ಚುನಾವಣೆ ಬಳಿಕ ಪೆಟ್ರೋಲ್ ಬೆಲೆ 10 ರೂ. ಜಾಸ್ತಿಯಾಯಿತು. ಡಿಎಪಿ ಗೊಬ್ಬರದ ಬೆಲೆ 150 ರೂ. ಹೆಚ್ಚಾಗಿದೆ ಇದರ ಬಗ್ಗೆ ಏಕೆ ಯಾರೂ ಮಾತನಾಡುತ್ತಿಲ್ಲ?. ಹಲಾಲ್ ಮಾಂಸವನ್ನು ಎಷ್ಟೋ ವರ್ಷಗಳಿಂದ ನಾವೆಲ್ಲಾ ತಿನ್ನುವುದಿಲ್ಲವಾ? ರೈತರಿಂದ ಮಾವು ಖರೀದಿಸಿ ಮಾರಾಟ ಮಾಡುವವರಲ್ಲಿ ಶೇ.90ರಷ್ಟು ಮುಸ್ಲಿಮರಿದ್ದಾರೆ. ಹೀಗಿರುವಾಗ ಧರ್ಮಗಳ ನಡುವೆ ಹುಳಿ ಇಂಡುವುದೇಕೆ? ಇದನ್ನೆಲ್ಲಾ ಬಿಡಬೇಕು ಎಂದರು.

ಬೆಂಗಳೂರಿನ ಯುವಕನ ಕೊಲೆ ಪ್ರಕರಣ ಕುರಿತು ಗೃಹಸಚಿವ ಆರಗ ಜ್ಞಾನೇಂದ್ರ ಪ್ರಚೋದನಾಕಾರಿ ಹೇಳಿಕೆ ನೀಡಿದ್ದಾರೆ. ಪೊಲೀಸರು ಹಾಗೂ ಗುಪ್ತಚರ ವಿಭಾಗದ ಮಾಹಿತಿ ಇದ್ದರೂ ಹೀಗೆ ಮಾತನಾಡಿದ್ದಾರೆ. ಅಲ್ಲದೆ ಮಾಹಿತಿ ಇರಲಿಲ್ಲ ಎಂದು ಬೇಜವಾಬ್ದಾರಿ ಮಾತನಾಡಿದ್ದಾರೆ. ಅವರು ಗೃಹ ಸಚಿವರಾಗಲು ನಾಲಾಯಕ್. ಕೂಡಲೇ ಮುಖ್ಯಮಂತ್ರಿ ಅವರ ರಾಜೀನಾಮೆ ಪಡೆಯಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಒಕ್ಕೂಟ ವ್ಯವಸ್ಥೆಯ ವಿರುದ್ಧವಾಗಿ ಹೇಳಿಕೆ ನೀಡಿದ್ದಾರೆ. ಮಾತೃಭಾಷೆಯ ತಂಟೆಗೆ ಬಂದರೆ ನಾವು ಸುಮ್ಮನಿರುವುದಿಲ್ಲ. ಒಕ್ಕೂಟ ವ್ಯವಸ್ಥೆಯಲ್ಲಿ ಹಿಂದಿಯನ್ನು ರಾಷ್ಟ್ರಭಾಷೆ ಅಥವಾ ಸಂಪರ್ಕ ಭಾಷೆ ಎಂದು ಒಪ್ಪಿಕೊಂಡಿಲ್ಲ. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಗುಜರಾತ್‌ನಲ್ಲಿ ಗುಜರಾತಿ, ತಮಿಳುನಾಡಿನಲ್ಲಿ ತಮಿಳು, ಕೇರಳದಲ್ಲಿ ಮಲೆಯಾಳಂ, ಮಹಾರಾಷ್ಟ್ರದಲ್ಲಿ ಮರಾಠಿ ಹಾಗೆ ಉತ್ತರ ಭಾರತದ ಕೆಲ ರಾಜ್ಯಗಳಲ್ಲಿ ಹಿಂದಿ ಭಾಷೆಯಿದೆ. ಆದ್ದರಿಂದ ಹಿಂದಿಯನ್ನು ರಾಷ್ಟ್ರಭಾಷೆ ಅಥವಾ ಸಂಪರ್ಕ ಭಾಷೆ ಎಂದು ಒಪ್ಪಲಾಗದು. ಎಲ್ಲಾ ಭಾಷೆ ಕಲಿಯುವ ಅವಕಾಶವಿದೆ. ಆದರೆ ಬಲವಂತವಾಗಿ ಹೇರುವುದನ್ನು ನಾವು ಸೇರಿದಂತೆ ಎಲ್ಲಾ ರಾಜ್ಯದವರೂ ಖಂಡಿಸುತ್ತಾರೆ. ಭಾಷೆ ವಿಚಾರದಲ್ಲಿ ಬಾಲಿಶ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು ಎಂದು ಎಚ್ಚರಿಕೆ ನೀಡಿದರು.



ಜನತಾನಗರ, ಬೋಗಾದಿ ದಕ್ಷಿಣ ಮತ್ತು ಉತ್ತರ ಭಾಗಗಳಲ್ಲಿ 150 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡ, ನಗರ ಪಾಲಿಕೆ ಸದಸ್ಯೆ ಸವಿತಾ ಸುರೇಶ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಉಮಾ ಶಂಕರ್, ಲಿಂಗೇಗೌಡ, ಜಯರಾಂ, ಡಿ.ಬಿ.ಸತ್ಯಮೂರ್ತಿ, ಇಂಜಿನಿಯರ್ ಕಿರಣ್, ಅಧ್ಯಕ್ಷ ಕುಮಾರ್, ಲೋಕೇಶ್, ಸೊಸೈಟಿ ಕುಮಾರ್, ಪ್ರಸಾದ್, ಮಂಜು, ವೆಂಕಟೇಶ್, ಬಸವರಾಜು, ಪುನಿ, ಕೃಷ್ಣ, ಗುಂಡ, ರಾಜು, ಮಧು, ಕೇಶವ ಮೂರ್ತಿ, ಪುಟ್ಟಣ್ಣಯ್ಯ, ಧರ್ಮೇಶ ಮುಂತಾದವರಿದ್ದರು.

ಮನೆಯಲ್ಲಿ ಎಸಿ ಸ್ಫೋಟ; ಇಬ್ಬರು ಮಕ್ಕಳು ಸೇರಿ ನಾಲ್ವರು ಸಜೀವ ದಹನ

ವಿಜಯನಗರ, ಏ. 8- ಎಸಿ ಸ್ಫೋಟಗೊಂಡು ಇಬ್ಬರು ಮಕ್ಕಳ ಸಹಿತ ದಂಪತಿ ಸಜೀವ ದಹನವಾಗಿರುವ ಘಟನೆ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿಯಲ್ಲಿ ಕಳೆದ ತಡರಾತ್ರಿ ಸಂಭವಿಸಿದೆ.



ಮೃತ ದಂಪತಿಯನ್ನು 42 ವರ್ಷದ ವೆಂಕಟ್ ಪ್ರಶಾಂತ್, 38 ವರ್ಷದ ಡಿ ಚಂದ್ರಕಲಾ, ಮಕ್ಕಳಾದ 16 ವರ್ಷದ ಎಚ್ ಎ ಅದ್ವಿಕ್ ಮತ್ತು 8 ವರ್ಷದ ಬಾಲಕಿ ಪ್ರೇರಣ ಎಂದು ಗುರುತಿಸಲಾಗಿದೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ನಿಂದ ಎಸಿಯಲ್ಲಿ ಸೋರಿಕೆಯಾಗಿ ಈ ಘೋರ ಸ್ಫೋಟ ಸಂಭವಿಸಿದೆ. ತಡರಾತ್ರಿ ಹೊತ್ತು ನಿದ್ದೆ ಮಾಡುತ್ತಿದ್ದ ವೇಳೆ ಎಸಿ ಸ್ಫೋಟಗೊಂಡು ಬೆಂಕಿ ಧಗಧಗನೆ ಹೊತ್ತಿ ಉರಿದು ಇಡೀ ಮನೆ ಆವರಿಸಿದ್ದರಿಂದ ದಂಪತಿ ಮತ್ತು ಮಕ್ಕಳು ಹೊರಬರಲಾಗದೆ ಸಜೀವ ದಹನಗೊಂಡಿದ್ದಾರೆ ಎಂದು ತಿಳಿದುಬಂದಿದೆ. ಮರಿಯಮ್ಮನಹಳ್ಳಿಯ ರಾಘವೇಂದ್ರ ಶೆಟ್ಟಿ ಎಂಬುವವರ ಮನೆಯಲ್ಲಿ ರಾತ್ರಿ ಹೊತ್ತು ಮಲಗಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ. ಮರಿಯಮ್ಮನಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಘಟನೆ ಬಗ್ಗೆ ಎಲ್ಲಾ ಕೋನಗಳಿಂದ ತನಿಖೆ ನಡೆಸಲಾಗುತ್ತಿದೆ. ಕುಟುಂಬದಲ್ಲಿ ಸ್ವಲ್ಪ ವೈಮನಸ್ಸು, ವಿವಾದಗಳಿದ್ದು ತೆಗೆದುಕೊಂಡ ಸಾಲ ಮರುಪಾವತಿ ಮಾಡಿರಲಿಲ್ಲ, ಆ ಬಗ್ಗೆ ಕೂಡ ತನಿಖೆ ನಡೆಸಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕೃತಿ ಚಿಕಿತ್ಸೆಗೆ ಜಿ.ಟಿ.ದೇವೇಗೌಡರು ಜಿಂದಾಲ್‌ನಲ್ಲಿ ದಾಖಲು

ಮೈಸೂರು, ಏ.8- ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಅವರು ಬೆಂಗಳೂರಿನ ಜಿಂದಾಲ್ ನೇಚರ್ ಕ್ಯೂರ್ ಇನ್ಸಿಟಿಟ್ಯೂಟ್‌ನಲ್ಲಿ 12 ದಿನ ಪ್ರಕೃತಿ ಚಿಕಿತ್ಸೆ ಪಡೆಯಲ್ಲಿದ್ದಾರೆ. ನಾಳೆ (ಏ.9) ಚಿಕಿತ್ಸೆಗೆ ದಾಖಲಾಗುವ ಅವರು ಏ.20ರವರೆಗೆ ಚಿಕಿತ್ಸೆ ಪಡೆಯಲಿದ್ದಾರೆ. ಈಗಾಗಿ 12 ದಿನ ಶಾಸಕರು ಕ್ಷೇತ್ರದಲ್ಲಿ ಲಭ್ಯವಿರುವುದಿಲ್ಲ. ಚಿಕಿತ್ಸೆ ಮುಗಿಸಿ ವಾಪಾಸ್ಸಾದ ನಂತರ ಎಂದಿನಂತೆ ಕ್ಷೇತ್ರದ ಜನತೆಯ ಸಮಸ್ಯೆಗಳಿಗೆ ಸ್ಪಂದಿಸಲಿದ್ದಾರೆ. ಅಲ್ಲಿಯ ವರೆಗೆ ಕ್ಷೇತ್ರದ ಜನತೆಯೂ ಮೈಸೂರಿನ ಜಲದರ್ಶಿನಿಯಲ್ಲಿರುವ ಶಾಸಕರ ಕಚೇರಿಗೆ ಭೇಟಿ ನೀಡಿ ಅಲ್ಲಿನ ಸಿಬ್ಬಂದಿಗೆ ತಮ್ಮ ಕುಂದು ಕೊರತೆಗೆ ಸಂಬಂಧಿಸಿದ ಅರ್ಜಿಗಳನ್ನು ನೀಡಬಹುದು ಎಂದು ತಿಳಿಸಿದ್ದಾರೆ.



'ಹೀಗಿದ್ದರು ಪ್ರಭುಶಂಕರ' ಸಮಗ್ರ ಸಂಪುಟ ಲೋಕಾರ್ಪಣೆ

ಮೈಸೂರು, ಏ.8(ಜಿಎ)- ಅಭಿನವ ಪ್ರಕಾಶನ ಮತ್ತು ಪ್ರಭುಶಂಕರ ಬಳಗದ ವತಿಯಿಂದ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕೃತಿ ಬಿಡುಗಡೆ ಸಮಾರಂಭದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಮುಕ್ತಿದಾನಂದಜಿ ಮಹರಾಜ್ ಅವರು ಹಿರಿಯ ಸಾಹಿತಿ ಪ್ರಭುಶಂಕರ ಅವರ 'ಹೀಗಿದ್ದರು ಪ್ರಭುಶಂಕರ' ಎಂಬ ಸಮಗ್ರ ಸಂಪುಟವನ್ನು ಶುಕ್ರವಾರ ಸಂಜೆ ಲೋಕಾರ್ಪಣೆಗೊಳಿಸಿದರು.


ಈ ವೇಳೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಿರಿಯ ಕವಿ ಹಾಗೂ ಪ್ರಭುಶಂಕರ ಅವರ ಒಡನಾಡಿ ಕೆ.ಸಿ. ಶಿವಪ್ಪ ಮಾತನಾಡಿ, ಪ್ರಭುಶಂಕರ ಅವರು ಪ್ರಾಧ್ಯಾಪಕರಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾದವರು. ಏಕೆಂದರೆ ಎಂದಿಗೂ ಯಾರಿಗೂ ಅವರು ಕೆಡಕು ಬಯಸದೆ ತಮ್ಮ 80 ವರ್ಷಗಳ ತುಂಬು ಜೀವನವನ್ನು ನಡೆಸಿದರು ಎಂದರು.

ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿಯೂ ಹೆಚ್ಚು ಪಾಂಡಿತ್ಯ ಹೊಂದಿದ್ದ ಅವರು ರಚಿಸಿದ ಇಂಗ್ಲಿಷ್-ಇಂಗ್ಲಿಷ್-ಕನ್ನಡ ನಿಘಂಟು ಹಾಗೂ ಅನೇಕ ಕೃತಿಗಳ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಪ್ರತ್ಯೇಕ ಕೊಡುಗೆ ನೀಡಿದ್ದಾರೆ. ಹಾಗೂ ಅವರಲ್ಲಿ ಹಾಸ್ಯ ಪ್ರಜ್ಞೆ ಎಷ್ಟು ಇತ್ತು ಎಂದರೆ ಅದಕ್ಕೆ ಅವರ ಕೆಲ ಪುಸ್ತಕಗಳು ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಕುವೆಂಪು ಶಿಷ್ಯರಾಗಿ ಅವರ ಜೊತೆಗೆ ಉತ್ತಮ ಒಡನಾಟ ಹೊಂದಿದ್ದ ಪ್ರಭುಶಂಕರ ಅವರು ಕುವೆಂಪು ಅವರ ಮಾರ್ಗದರ್ಶನದಲ್ಲಿ ಪಿಹೆಚ್‌ಡಿ ಪಡೆದಿದ್ದರು. ಸಾಹಿತ್ಯ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಗೆ ಅನೇಕ ಪ್ರಶಸ್ತಿ ಸನ್ಮಾನಗಳು ದೊರಕಬೇಕಿತ್ತು. ಆದರೆ ಅವುಗಳನ್ನು ಅರಸಿ ಅವರು ಎಂದೂ ಹೋಗಲಿಲ್ಲ ಮತ್ತು ಅದಕ್ಕಾಗಿ ಎಂದೂ ಬೇಸರ ವ್ಯಕ್ತಪಡಿಸಿರಲಿಲ್ಲ ಎಂದರು.

ಪ್ರಭುಶಂಕರರು ಆಧ್ಯಾತ್ಮದ ಬಗ್ಗೆಯೂ ಒಲವು ಹೆಚ್ಚಿತ್ತು. ಅವರು ಶಾಂತ ಅವರನ್ನು ವಿವಾಹ ಆಗದಿದ್ದರೆ ಅವರು ಸನ್ಯಾಸಿ ಆಗುತ್ತಿದ್ದರು. ಏಕೆಂದರೆ ಅವರಿಗೂ ರಾಮಕೃಷ್ಣ ಆಶ್ರಮಕ್ಕೂ ಅವಿನಾಭಾವ ಸಂಬಂಧವಿತ್ತು. ಒಮ್ಮೆ ಒಂದು ಸನ್ಮಾನದಲ್ಲಿ ನೀಡಿದ 25 ಸಾವಿರ ರೂ. ಗಳನ್ನು ವೇದಿಕೆಯಲೇ ಆಶ್ರಮಕ್ಕೆ ನೀಡಿದ ಉದಾಹರಣೆಯೂ ಇದೆ. ಅದರಂತೆ ಸುತ್ತೂರು ಮಠದ ಜೊತೆಯಲೂ ಉತ್ತಮ ಬಾಂಧವ್ಯ ಹೊಂದಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಾಜನ ಕಾಲೇಜು ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಪ್ರೊ.ಸಿ.ಕೆ. ರೇಣುಕಾರ್ಯ, ನಿವೃತ್ತ ಪ್ರಾಧ್ಯಾಪಕ ಪ್ರೊ.ಎನ್.ಎಸ್. ತಾರಾನಾಥ್, ನಿವೃತ್ತ ಪ್ರಾಂಶುಪಲ ಎಂ.ಕೃಷ್ಣೇಗೌಡ, ಅಭಿನವ ಪ್ರಕಾಶನದ ನ. ರವಿಕುಮಾರ, ಅಸಿತಾ ಪ್ರಭುಶಂಕರ ಹಾಗೂ ನಿವೇದಿತಾ ಮೃತ್ಯುಂಜಯ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.



ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳ ಮೊಟಕುಗೊಳಿಸಿದ ಬಿಜೆಪಿ

● ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪ ● ಬಿಜೆಪಿಯದು ದುರಾಡಳಿತ: ವಾಗ್ದಾಳಿ



ಸರಗೂರು ತಾಲೂಕಿನ ಮೊಳೆಯೂರಲ್ಲಿ ಕನಕ ಭವನವನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ದೀಪ ಬೆಳಗುವ ಮೂಲಕ ಉದ್ಘಾಟಿಸಿದರು.

ಸರಗೂರು, ಏ.8(ನಾಗೇಶ್)– ತಾವು ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ಜಾರಿಗೊಳಿಸಿದ್ದ ಜನಪರ ಯೋಜನೆಗಳನ್ನು ಆಡಳಿತರೂಢ ಬಿಜೆಪಿ ಸರ್ಕಾರ ಮೊಟಕುಗೊಳಿಸಿದ್ದು, ಜನ ವಿರೋಧಿ ಆಡಳಿತ ನಡೆಸುತ್ತಿದೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ತಾಲೂಕಿನ ಮೊಳೆಯೂರು ಗ್ರಾಮದಲ್ಲಿ ಶುಕ್ರವಾರ ಕುರುಬ ಸಮಾಜದಿಂದ ಶ್ರೀಬಿಲ್ ಕುಮಾರಸ್ವಾಮಿ ದೇವ ಸ್ಥಾನದ ಆವರಣದಲ್ಲಿ ನಿರ್ಮಿಸಲಾಗಿರುವ ಕನಕ ಭವನ ಉದ್ಘಾಟಿಸಿ, ನಂತರ ಸಮಾರಂಭದಲ್ಲಿ ಅವರು ಮಾತನಾಡಿದರು.

ನಾನು ಮುಖ್ಯಮಂತ್ರಿಯಾಗಿದ್ದಾಗ 165 ಭರವಸೆಗಳನ್ನು ಈಡೇರಿಸಿದ್ದೇನೆ. ಶ್ರೀಸಾಮಾನ್ಯನ ಅನುಕೂಲಕ್ಕಾಗಿ ಕಾಂಗ್ರೆಸ್ ಜಾರಿಗೊಳಿಸಿದ್ದ ಇಂದಿರಾ ಕ್ಯಾಂಟೀನ್, ಪಶು ಭಾಗ್ಯ ಸೇರಿದಂತೆ ಇನ್ನಿತರ ಯೋಜನೆಗಳನ್ನು ಬಿಜೆಪಿ ಸರ್ಕಾರದಲ್ಲಿ ಮೊಟಕುಗೊಳಿಸಲಾಗಿದೆ. ಎಸ್‌ಸಿ, ಎಸ್ಟಿ ಅನುದಾನ ಕಡಿತಗೊಳಿಸಿ, ಮೋಸ ಮಾಡುತ್ತಿದ್ದಾರೆ. ರೈತರಿಗೆ ಕನಿಷ್ಠ ಬೆಂಬಲ ಬೆಲೆ ನೀಡುವಲ್ಲಿ ವಿಫಲರಾಗಿದ್ದಾರೆ ಎಂದ ಅವರು, ದಿನ ಬಳಕೆ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಜನಸಾಮಾನ್ಯರ ಬದುಕು ದುಸ್ತರವಾಗಿದೆ. ಬೆಲೆ ಏರಿಕೆ ನಿಯಂತ್ರಿಸುವಲ್ಲಿ ಬಿಜೆಪಿ ಸರ್ಕಾರ ವಿಫಲವಾಗಿದೆ ಎಂದು ಸಿದ್ದರಾಮಯ್ಯ ಆರೋಪಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ, ಮಾಜಿ ಸಂಸದ ಆರ್.ಧ್ರುವನಾರಾಯಣ್ ಮಾತನಾಡಿ, ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ಜನರ ಕಲ್ಯಾಣಕ್ಕಾಗಿ 20 ಅಂಶಗಳ ಯೋಜನೆಯನ್ನು ಜಾರಿಗೆ ತಂದರು. ಅವರನ್ನು ಬಿಟ್ಟರೆ ಮುಖ್ಯ ಮಂತ್ರಿಯಾಗಿ 5 ವರ್ಷದ ಅವಧಿ ಪೂರೈಸಿದ ಸಿದ್ದರಾಮ್ಮಯ್ಯ ಅವರು ಒಂದು ಕಪ್ಪು ಚುಕ್ಕೆಯೂ ಇಲ್ಲದೆ ಜನಪರವಾಗಿ ದಕ್ಷ ಆಡಳಿತ ನಡೆಸಿ, ಹಲವು ಯೋಜನೆಗಳ ಜಾರಿಗೆ ತಂದು ಹಸಿವು ಮುಕ್ತ ರಾಜ್ಯವನ್ನಾಗಿ ಮಾಡಿದ್ದಾರೆ ಎಂದರು. ಸರಗೂರು ತಾಲೂಕು ಕೇಂದ್ರವನ್ನಾಗಿ ಮಾಡಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಸಮಾಜದಲ್ಲಿನ ಅಂಕು–ಡೊಂಕುಗಳನ್ನು ತಮ್ಮ ಕೀರ್ತನೆ ಗಳ ಮೂಲಕ ತಿದ್ದಿದ ಸಮಾಜ ಸುಧಾರಕ ಕನಕದಾಸರ ಹೆಸರಿನಲ್ಲಿ ಭವನ ನಿರ್ಮಿಸಿರುವುದು ಸಂತಸದ ವಿಚಾರ. ಆದರೆ, ಬಿಜೆಪಿ ಸರ್ಕಾರ ರಾಜ್ಯದಲ್ಲಿ ಜಾತಿ–ಜಾತಿಗಳ ನಡುವೆ ಸಂಘರ್ಷ, ಕೋಮು ಗಲಭೆಗೆ ಅವಕಾಶ ಮಾಡಿಕೊಡುತ್ತಿದೆ ಎಂದರು.

> ರಾಜ್ಯದ ಇತಿಹಾಸದಲ್ಲೇ ಬಿಜೆಪಿಯಂಥ ಕೆಟ್ಟ ಸರ್ಕಾರವನ್ನು ಕಂಡಿಲ್ಲ. ಅಭಿವೃದ್ಧಿಗೆ ಒತ್ತು ನೀಡುತ್ತಿಲ್ಲ. ಬದಲಿಗೆ ಕೋಮು ಗಲಭೆ ಸೃಷ್ಟಿಸುತ್ತಿದೆ. ಸಂಪ್ರದಾಯದ ಹೆಸರಿನಲ್ಲಿ ಜಾತಿ ಒಡೆಯುವ ಕೆಲಸವಾಗಬಾರದು. ಆದರೆ ಬಿಜೆಪಿ ಜಾತಿ ಸಂಘರ್ಷಕ್ಕೆ ಕಾರಣವಾಗುತ್ತಿದೆ. ಇಂತಹ ಕೋಮುವಾದಿಗಳಿಗೆ ಮತ್ತೆ ಮತ ಹಾಕಬಾರದು.
> –ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

ಇದೇ ವೇಳೆ ನಿವೇಶನ ದಾನಿಗಳಾದ ಎಂ.ಎನ್. ಅನಂತಕೃಷ್ಣಮೂರ್ತಿ, ಎಂ.ಎಸ್.ಕೃಷ್ಣಪ್ಪ, ತಿಮ್ಮೇಗೌಡ, ಪುಟ್ಟಸ್ವಾಮೇಗೌಡ ಅವರನ್ನು ಸಿದ್ದರಾಮಯ್ಯ ಸನ್ಮಾನಿಸಿದರು.

ಶಾಸಕರಾದ ಅನಿಲ್ ಚಿಕ್ಕಮಾದು, ಡಾ.ಯತೀಂದ್ರ ಸಿದ್ದರಾಮಯ್ಯ, ಸಂಡೂರು ತುಕರಾಂ, ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಮಾತನಾಡಿ, ರಾಜ್ಯ ಸರ್ಕಾರದ ದುರಾಡಳಿತವನ್ನು ಖಂಡಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಎಂ.ಕೆ.ಸೋಮಶೇಖರ್, ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಬಿ.ಮಟಕೆರೆ ಗ್ರಾಪಂ ಅಧ್ಯಕ್ಷೆ ರೂಪಾಬಾಯಿ, ಉಪಾಧ್ಯಕ್ಷ ದೇವದಾಸ್, ಜಿ.ಪಂ. ಮಾಜಿ ಅಧ್ಯಕ್ಷರಾದ ಎಂ.ಪಿ.ನಾಗರಾಜು, ಕೆ.ಮರೀಗೌಡ, ಪಿ.ರವಿ, ಕುರುಬರ ಸಂಘದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಎಂ.ಬಿ.ಆನಂದ್, ಎಂ.ಎನ್.ಅನಂತಕೃಷ್ಣಮೂರ್ತಿ, ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕ್ಯಾತನಹಳ್ಳಿ ನಾಗರಾಜ್, ಕಾಂಗ್ರೆಸ್ ಮುಖಂಡರಾದ ಎಂ.ಎನ್.ಅಣ್ಣಯ್ಯಸ್ವಾಮಿ, ಜಿ.ಕೃಷ್ಣ, ಎಂ.ಕೆ. ಹರಿದಾಸ್, ಗುಣಪಾಲ್, ಬಿ.ಜವರೇಗೌಡ, ಶಂಭುಲಿಂಗ ನಾಯಕ, ಎಸ್.ಎಸ್.ಪ್ರಭುಸ್ವಾಮಿ, ಎಂ.ಸಿ.ದೊಡ್ಡನಾಯಕ, ಎಂ.ಎಸ್.ದೇವರಾಜು, ಸಂತೋಷ್, ಎಂ.ಕೆ.ಕೃಷ್ಣಪ್ಪ, ಗುಡಿಗೌಡ ಎಂ.ಎನ್.ಕುಮಾರ್, ದೇವರಾಜು, ಶೇಖರಪ್ಪ ಎಂ.ಸಿ.ಬೀರೇಗೌಡ, ಸತೀಶ್ ಗೌಡ, ಎಚ್.ಸಿ. ನರಸಿಂಹಮೂರ್ತಿ, ಸಿಂಡೇನಹಳ್ಳಿ ಗಿರೀಶ್, ಪ್ರಭುಶಂಕರ್, ಗಣೇಶ್ ಆಚಾರ್, ರಾಜನಾಯಕ, ಶಿವಮೂರ್ತಿ, ಎಂ.ಆರ್.ಆನಂದ್, ಕರಿಗೌಡ, ನಿವೃತ್ತ ಅಧಿಕಾರಿ ಎಂ.ರಾಮಯ್ಯ, ಸೇರಿದಂತೆ ಇನ್ನಿತರರಿದ್ದರು.

ಮೈ.ವಿ.ರವಿಶಂಕರ್ ಪರ ಸಚಿವ ಎಸ್.ಟಿ.ಸೋಮಶೇಖರ್ ಪ್ರಚಾರ







ಮೈಸೂರು, ಏ.8(ಆರ್‌ಕೆ)– ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರು ಇಂದು ಚುನಾವಣಾ ಪ್ರಚಾರ ಆರಂಭಿಸಿದ್ದಾರೆ.

ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ, ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್, ವಿಧಾನ ಪರಿಷತ್ ಮಾಜಿ ಸದಸ್ಯ ಗೋ. ಮಧುಸೂದನ್ ಸೇರಿದಂತೆ ಹಲವು ಗಣ್ಯರು, ಪದವೀಧರರನ್ನು ಭೇಟಿ ಮಾಡಿದ ಸಚಿವರು ಮೈ.ವಿ.ರವಿಶಂಕರ್ ಬೆಂಬಲಿಸುವಂತೆ ಮನವಿ ಮಾಡಿದರು.

ಏಪ್ರಿಲ್ 11ರಿಂದ 14ರ ವರೆಗೆ ಮೈಸೂರು ಜಿಲ್ಲೆಯಲ್ಲೇ ವಾಸ್ತವ್ಯ ಹೂಡಲಿದ್ದು, ಎಲ್ಲಾ ಮುಖಂಡರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮತದಾರರ ಬಳಿ ತೆರಳಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಒಗ್ಗಟ್ಟಾಗಿ ಶ್ರಮಿಸುವುದಾಗಿ ಸಚಿವರು ನುಡಿದರು. ಈ ಸಂದರ್ಭ ಅಭ್ಯರ್ಥಿ ಮೈ.ವಿ.ರವಿಶಂಕರ್, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಹಾಗೂ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಕುಂವೀ ಸೇರಿ 61 ಜನರಿಗೆ ಜೀವ ಬೆದರಿಕೆ

ಎಲ್ಲರಿಗೂ ರಕ್ಷಣೆ ನೀಡಲು ಎಚ್‌ಡಿಕೆ ಆಗ್ರಹ

ಬೆಂಗಳೂರು, ಏ. 8– ಕೋಮುವಾದದ ಕುರಿತು ಇತ್ತೀಚೆಗೆ ಪ್ರಖರ ಹೇಳಿಕೆಗಳನ್ನು ನೀಡಿರುವ ಸಾಹಿತಿ ಕುಂ. ವೀರಭದ್ರಪ್ಪ, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಎಚ್.ಡಿ. ಕುಮಾರಸ್ವಾಮಿ ಸಹಿತ ಒಟ್ಟು 61 ಜನರಿಗೆ ಜೀವ ಬೆದರಿಕೆ ಹಾಕಲಾಗಿದೆ.

ಸಹಿಷ್ಣು ಹಿಂದು ಹೆಸರಿನಲ್ಲಿ ಕುಂ. ವೀರಭದ್ರಪ್ಪ ಅವರಿಗೆ ಈ ಪತ್ರ ಬರೆಯಲಾಗಿದೆ. ಸಿದ್ಧರಾಗಿ, ನಿಮ್ಮ ನಿಮ್ಮ ಮನೆಯಲ್ಲಿ ನಿಮ್ಮ ಅಂತಿಮ ಶವಸಂಸ್ಕಾರಕ್ಕೆ ಸಿದ್ಧತೆ ಮಾಡಿಕೊಳ್ಳಲು ಹೇಳಿ, ದೇಶದ್ರೋಹಿ ಕುಂ.ವೀರಭದ್ರಪ್ಪ ಎಂದು ಪತ್ರದಲ್ಲಿ ಹೇಳಲಾಗಿದೆ.

ಈ ಕುರಿತು ಹೇಳಿಕೆ ನೀಡಿರುವ ಕುಂ. ವೀರಭದ್ರಪ್ಪ ಅವರು, 'ನನಗೆ ಭದ್ರಾವತಿಯಿಂದ ಜೀವ ಬೆದರಿಕೆ ಪತ್ರ ಬಂದಿದೆ. ಪತ್ರದಲ್ಲಿ ಯಾವುದೇ ಹೆಸರು, ವಿಳಾಸ ಬರೆಯದೆ ಒಬ್ಬ ಹೇಡಿ ಬರೆದ ಪತ್ರ ಇದು. ಇದರಲ್ಲಿ ಮಾಜಿ ಮುಖ್ಯಮಂತ್ರಿಗಳ ಹೆಸರೂ ಇದೆ. ನೀವು ಓದಿ ಆನಂದಿಸಿ' ಎಂದು ಹೇಳಿದ್ದಾರೆ.

ಎಡಬಿಡಂಗಿ ಸಾಹಿತಿಗಳೇ, ಎಡಬಿಂಡಂಗಿ ಸಂವಿಧಾನ ವಿರೋಧಿ ಸಾಹಿತಿಗಳೇ, ದೇಶದ್ರೋಹಿ ಸಾಹಿತಿಗಳೇ, ಅನ್ನ ಹಾಕಿದ ಮನೆಗೆ ಕನ್ನಡ ಹಾಕಿದ ಸಾಹಿತಿಗಳೇ ಮತ್ತು ಲೂಸ್‌ಟಾಕ್ ಸಿದ್ದರಾಮಯ್ಯ, ಊಸರವಳ್ಳಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಎಂದು ಪತ್ರದಲ್ಲಿ ಬರೆಯಲಾಗಿದೆ.

ಮುಸ್ಲಿಮರ ಪರವಾಗಿ, ಮುಸ್ಲಿಂ ಹೆಣ್ಣು ಮಕ್ಕಳ ಪರವಾಗಿ, ಹಿಜಾಬ್ ಪರವಾಗಿ ಮತ್ತು ಈ ದೇಶದ ಮೂಲಗ್ರಂಥ ಭಗವದ್ಗೀತೆ ವಿರುದ್ಧವಾಗಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿರುವ ಎಲ್ಲಾ ಎಡಬಿಡಂಗಿ 61+ ಸಾಹಿತಿಗಳೇ ಎಂದು ಹೀಗೆ ಸರ್ಕಾರಕ್ಕೆ ಪತ್ರ ಬರೆದವರನ್ನು ಖಂಡಿಸಲಾಗಿದೆ.

ಎಲ್ಲರಿಗೂ ತಕ್ಷಣ ಭದ್ರತೆ ನೀಡುವಂತೆ ಎಚ್‌ಡಿಕೆ ಆಗ್ರಹ: ನಾನು, ಹಿರಿಯ ಸಾಹಿತಿ ಕುಂ ವೀರಭದ್ರಪ್ಪ ಸೇರಿದಂತೆ 61 ಜನರಿಗೆ ಸಹಿಷ್ಣು ಹಿಂದೂ ಎಂಬ ಹೆಸರಿನಲ್ಲಿ ಒಡ್ಡಲಾಗಿರುವ ಜೀವ ಬೆದರಿಕೆಯನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು, ಸರಕಾರವನ್ನು ಒತ್ತಾಯ ಮಾಡಿದರು.

ಈ ಬಗ್ಗೆ ಪಕ್ಷದ ರಾಜ್ಯ ಕಚೇರಿಯಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು; ಇಂತಹ ಬೆದರಿಕೆ ಪತ್ರವನ್ನು ಲಘುವಾಗಿ ಪರಿಗಣಿಸಬೇಡಿ. ಕುಂ.ವೀರಭದ್ರಪ್ಪ ಸೇರಿ ಜೀವ ಬೆದರಿಕೆ ಒಡ್ಡಲಾಗಿರುವ ಎಲ್ಲ ಸಾಹಿತಿಗಳಿಗೆ ತಕ್ಷಣವೇ ಸರಕಾರವು ರಕ್ಷಣೆ ಕೊಡಬೇಕು ಎಂದು ಆಗ್ರಹಪಡಿಸಿದರು.

ಶ್ರೀರಾಮ ಶೋಭಾಯಾತ್ರೆ ಮೇಲೆ ಕಲ್ಲು ತೂರಾಟ: ಮುಳಬಾಗಿಲು ಪ್ರಕ್ಷುಬ್ಧ

ಮುಳಬಾಗಿಲು, ಏ. 8– ಶ್ರೀರಾಮ ಶೋಭಾಯಾತ್ರೆ ಮೇಲೆ ಕಲ್ಲು ತೂರಾಟ ನಡೆಸಿ, ಬೈಕೊಂದಕ್ಕೆ ಬೆಂಕಿ ಹಚ್ಚಿರುವ ಘಟನೆ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಇಂದು ರಾತ್ರಿ ಸಂಭವಿಸಿದೆ.

ಕಲ್ಲು ತೂರಾಟದಿಂದ ಕೆಲವು ಸಣ್ಣ–ಪುಟ್ಟ ಗಾಯಗಳಿಂದ ಗಾಯಗೊಂಡಿದ್ದರೆ, ಕೆಲವು ಕಡೆ ವಾಹನಗಳು ಜಖಂಗೊಂಡಿದ್ದು, ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ.

ಇಂದು ಪಟ್ಟಣದಲ್ಲಿ ಬಿಜೆಪಿ ವತಿಯಿಂದ ಶ್ರೀರಾಮ ಶೋಭಾಯಾತ್ರೆ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಮೆರವಣಿಗೆಯಲ್ಲಿ 'ಜೈ ಶ್ರೀ ರಾಮ್' ಎಂದು ಘೋಷಣೆ ಕೂಗುತ್ತಾ ಸಾಗುತ್ತಿದ್ದಾಗ, ಜಹಾಂಗೀರ್ ಮೊಹಲ್ಲಾದ ಬಳಿ ಏಕಾಏಕಿ ಕಲ್ಲುಗಳನ್ನು ತೂರಲಾಯಿತು. ಇದರಿಂದ ಮೆರವಣಿಗೆಗೆ ಅಡ್ಡಿಯಾಯಿತು. ಮೆರವಣಿಗೆಯಲ್ಲಿದ್ದವರು ಸಹ ಪ್ರತಿಯಾಗಿ ಕಲ್ಲು ತೂರಾಟ ನಡೆಸಿದರು. ಮತ್ತೊಂದು ಕಡೆ ಬೈಕೊಂದಕ್ಕೆ ಬೆಂಕಿ ಹಚ್ಚಲಾಯಿತು. ಜಹಾಂಗೀರ್ ಮೊಹಲ್ಲಾದ ಬಳಿಯ ಪೆಟ್ರೋಲ್ ಬಂಕ್ ಬಳಿಯೇ ಈ ಅನಾಹುತ ಸಂಭವಿಸಿದ್ದು, ಸಕಾಲದಲ್ಲಿ ಪೊಲೀಸರು ಮಧ್ಯೆ ಪ್ರವೇಶಿಸಿ ಲಘು ಲಾಠಿ ಪ್ರಹಾರ ನಡೆಸಿ ಗುಂಪನ್ನು ಚದುರಿಸಿ ಮುಂದಾಗಬಹುದಾದ ಅನಾಹುತವನ್ನು ತಪ್ಪಿಸಿದರು. ಅಲ್ಲಿಂದ ಮುಂದೆ ಶ್ರೀರಾಮನ ಶೋಭಾಯಾತ್ರೆ ಮುಂದುವರೆಸಿ ಮುಕ್ತಾಯಗೊಳಿಸಲಾಯಿತು. ಮುಳಬಾಗಿಲು ಪಟ್ಟಣ ಸೇರಿದಂತೆ ಆಯಕಟ್ಟಿನ ಜಾಗಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದ್ದು, ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ.

ಗೋಮಾಂಸ ತಿನ್ನುವವರ ಜೊತೆ ಬೇಡ, ಹಿಂದೂಗಳು ಹಿಂದೂ ಡ್ರೈವರ್ ಜೊತೆ ದೇವಾಲಯಕ್ಕೆ ಹೋಗಲಿ

ಭಾರತ್ ರಕ್ಷಣ್ ವೇದಿಕೆ

ಬೆಂಗಳೂರು, ಏ. 8– ಹಿಜಾಬ್‌ಗೆ ಆಗ್ರಹಿಸಿ ಕರ್ನಾಟಕ ಬಂದ್ ನಡೆಸಿದ ಬಳಿಕ ದೇವಾಲಯಗಳಲ್ಲಿ ಅನ್ಯಧರ್ಮದ ವ್ಯಾಪಾರಿಗಳನ್ನು ನಿರ್ಬಂಧಿಸಲಾಯ್ತು ಬಳಿಕ ಹಲಾಲ್‌ಗೆ ಜಟ್ಕಾ ಕಟ್ ಬಂತು. ಈಗ ಡ್ರೈವರ್‌ಗಳಿಗೂ ಬಿಸಿ ತಟ್ಟಿದೆ. ಹಿಂದೂಗಳು, ಹಿಂದೂಗಳ ವಾಹನದಲ್ಲೇ ದೇವಾಲಯಕ್ಕೆ ಹೋಗಲಿ ಎಂದು ಭಾರತ್ ರಕ್ಷಣಾ ವೇದಿಕೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಬಂಗೇರಾ ಹೊಸ ಅಭಿಯಾನಕ್ಕೆ ಕರೆ ಕೊಟ್ಟಿದ್ದಾರೆ.

ಹಿಂದೂಗಳು, ಹಿಂದೂಗಳ ವಾಹನದಲ್ಲೇ ದೇವಾಲಯಕ್ಕೆ ಹೋಗಬೇಕು. ಈಗಾಗಲೇ ಹಿಂದೂ ಸಮಾಜ ಒಂದಾಗಿ ಸಾಕಷ್ಟು ಅಭಿಯಾನ ಮಾಡಿ ಯಶಸ್ವಿಯಾಗಿದೆ. ನಾವು ಮತ್ತೊಂದು ಹೊಸ ಅಭಿಯಾನ ಆರಂಭ ಮಾಡಬೇಕಿದೆ ಎಂದು ಹೇಳಿ ಕರೆ ಕೊಟ್ಟಿದ್ದಾರೆ.

ಯಾರು ನಮ್ಮ ದೇವರನ್ನು ನಂಬುವುದಿಲ್ಲ. ನಮ್ಮ ದೇಶದ ಕಾನೂನಿಗೆ ಬೆಲೆ ಕೊಡುವುದಿಲ್ಲವೋ ಅವರ ವಾಹನದಲ್ಲಿ ಹೋಗಿ ನಮ್ಮ ದೇವರಿಗೆ ಹರಕೆ ಪೂಜೆ ಸಲ್ಲಿಸುತ್ತಿದ್ದೇವೆ. ಆದರೆ ಇಂದಿನಿಂದ ಹಿಂದೂ ಮಾಲೀಕರು ಮತ್ತು ಡ್ರೈವರ್‌ಗಳ ಜೊತೆಯಲ್ಲೇ ನಮ್ಮ ಧಾರ್ಮಿಕ ಕ್ಷೇತ್ರಕ್ಕೆ ಹೋಗಬೇಕು. ಈ ಮೂಲಕ ಹಿಂದೂ ಚಾಲಕರಿಗೆ ನಾವು ಆರ್ಥಿಕವಾಗಿ ಬೆಂಬಲ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಗೋಮಾಂಸ ತಿನ್ನುವ ಚಾಲಕರೊಂದಿಗೆ ಧರ್ಮ ಕ್ಷೇತ್ರಕ್ಕೆ ಹೋಗುವ ಬದಲು, ನಮ್ಮ ಹಿಂದೂ ಸಮಾಜದ ಚಾಲಕರ ವಾಹನದಲ್ಲಿ ಯಾತ್ರೆಗೆ ಹೋಗೋಣ. ಹಿಂದೂ ಸಮಾಜದ ಚಾಲಕರು ಈಗಾಗಲೇ ಬೀದಿಗೆ ಬಿದ್ದಿದ್ದಾರೆ. ಇದರಿಂದ ನಮ್ಮ ಸಮಾಜದ ಚಾಲಕರು ಆರ್ಥಿಕ ಸಹಾಯ ಮಾಡೋಣ. ಈ ಅಭಿಯಾನಕ್ಕೆ ಹಿಂದೂ ಸಂಘಟನೆಗಳು ಬೆಂಬಲ ನೀಡಿ ಯಶಸ್ವಿಗೊಳಿಸಬೇಕು ಎಂದು ಕೇಳಿಕೊಂಡಿದ್ದಾರೆ.

ಸಂಪರ್ಕ ಭಾಷೆಯಾಗಿ ಹಿಂದಿ ಬಳಕೆಗೆ ಅಮಿತ್ ಶಾ ಸಲಹೆ

ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಆಕ್ಷೇಪ

ಬೆಂಗಳೂರು, ಏ.8 (ಕೆಎಂಶಿ)–ರಾಜ್ಯಗಳು ಪರಸ್ಪರ ಸಂಪರ್ಕ ಭಾಷೆಯಾಗಿ ಹಿಂದಿಯನ್ನು ಬಳಸಬೇಕೆಂದು ಕೇಂದ್ರ ಗೃಹಸಚಿವ ಅಮಿತ್ ಶಾ ಫರ್ಮಾನು ಹೊರಡಿಸಿರುವುದಕ್ಕೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಒಬ್ಬ ಸ್ವಾಭಿಮಾನಿ ಕನ್ನಡಿಗನಾಗಿ ಈ ಹೇಳಿಕೆಯನ್ನು ತೀವ್ರವಾಗಿ ಖಂಡಿಸುತ್ತೇನೆ. ಕರ್ನಾಟಕದಲ್ಲಿ ಕನ್ನಡಕ್ಕೇ ಮೊದಲ ಸ್ಥಾನ. ಯಾವುದೇ ಒಂದು ಭಾಷೆಯನ್ನು ಹೇರಲು ಹೊರಟರೆ ಸಹಿಸಲು ಸಾಧ್ಯವಿಲ್ಲ ಎಂದು ಕಟುವಾಗಿ ಟೀಕಿಸಿದ್ದಾರೆ.

ಪ್ರತಿಭಟಿಸುವ ಕಾಲ ಸನ್ನಿಹಿತ: ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ದಿನದಿಂದ ಹಿಂದಿಯನ್ನು ರಾಷ್ಟ್ರಭಾಷೆ ಎನ್ನುವ ರೀತಿಯಲ್ಲಿ ಬಿಂಬಿಸುವ ಜೊತೆಗೆ ರಾಜ್ಯ ಭಾಷೆಗಳನ್ನು ದಮನಿಸುವ ಪ್ರಯತ್ನ ನಡೆಯುತ್ತಲೇ ಇದೆ. ಇದನ್ನು ಹಿಂದಿಯೇತರ ಭಾಷೆಗಳನ್ನಾಡುವ ರಾಜ್ಯಗಳು ಕೂಡಿ ಪ್ರತಿಭಟಿಸುವ ಕಾಲ ಸನ್ನಿಹಿತವಾಗಿದೆ. ಗುಜರಾತಿನಿಂದ ಬಂದಿರುವ ಅಮಿತ್ ಶಾ ಮಾತೃಭಾಷೆ ಗುಜರಾತಿ. ಇವರು ತಮ್ಮ ಮಾತೃಭಾಷೆಯನ್ನೇ ಕಡೆಗಣಿಸಿ ಹಿಂದಿ ಭಾಷೆಯ ಗುಲಾಮಗಿರಿ ಮಾಡುತ್ತಿರುವುದು ವಿಷಾದನೀಯ ಎಂದು ಬರೆದುಕೊಂಡಿದ್ದಾರೆ.

ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಈಶಾನ್ಯ ರಾಜ್ಯಗಳು ಸೇರಿದಂತೆ ದೇಶದ ಬಹುತೇಕ ರಾಜ್ಯಗಳು ಹಿಂದಿಯನ್ನು ಅಧಿಕೃತ ಸಂಪರ್ಕ ಭಾಷೆಯಾಗಿ ಬಳಸುವುದಿಲ್ಲ. ಅವುಗಳ ಜೊತೆಯಲ್ಲಿ ಹಿಂದಿಯಲ್ಲಿ ವ್ಯವಹರಿಸಬೇಕೆನ್ನುವುದು ಸಾಂಸ್ಕೃತಿಕ ಭಯೋತ್ಪಾದನೆಯಾಗಿದೆ. ಕೇಂದ್ರ ಗೃಹಸಚಿವ ಅಮಿತ್ ಶಾ ಹೇಳಿಕೆ ಒಕ್ಕೂಟ ವ್ಯವಸ್ಥೆಯ ಆಶಯಗಳಿಗೆ ವಿರುದ್ಧವಾಗಿರುವುದು ಮಾತ್ರವಲ್ಲ, ಮಾತೃಭಾಷೆಗಳಿಗೆ ಮಾಡಿರುವ ಅವಮಾನವಾಗಿದೆ. ಅನಗತ್ಯ ಘರ್ಷಣೆಗೆ ಎಡೆಮಾಡಿಕೊಡುವ ಈ ಬೇಜವಾಬ್ದಾರಿ ಹೇಳಿಕೆಯನ್ನು ಅಮಿತ್ ಶಾ ಅವರು ತಕ್ಷಣ ಹಿಂದೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಇಂದು ಪಾಕ್ ಪ್ರಧಾನಿ ಇಮ್ರಾನ್ ಖಾನ್ ಭವಿಷ್ಯ ನಿರ್ಧಾರ



ಇಸ್ಲಾಮಾಬಾದ್ (ಪಾಕಿಸ್ತಾನ), ಏ. 8– ಅವಿಶ್ವಾಸ ನಿಲುವಳಿಗೆ ಅವಕಾಶ ನೀಡದೇ ರಾಷ್ಟ್ರೀಯ ಅಸೆಂಬ್ಲಿ ವಿಸರ್ಜಿಸಿ ಚುನಾವಣೆಗೆ ಹೋಗುವ ತರಾತುರಿ ತೋರಿದ್ದ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್‌ಗೆ ಶನಿವಾರ (ಏಪ್ರಿಲ್ 9) ಅಗ್ನಿ ಪರೀಕ್ಷೆ ಎದುರಾಗಲಿದೆ.

ಅಸೆಂಬ್ಲಿಯಲ್ಲಿ ಅವಿಶ್ವಾಸ ನಿಲುವಳಿ ಮಂಡಿಸಿದ್ದು, ಶನಿವಾರ (ಏ. 9) ಬಹುಮತ ಸಾಬೀತು ಪಡಿಸುವಂತೆ ಸುಪ್ರೀಂಕೋರ್ಟ್ ಸೂಚಿಸಿದ್ದು, ಇದರಲ್ಲಿ ಇಮ್ರಾನ್ ಖಾನ್‌ಗೆ ಸೋಲು ಖಚಿತ ಎನ್ನಲಾಗಿದೆ.

ಮತದಾನಕ್ಕೆ ಅವಕಾಶ ನೀಡದೇ ಅಸೆಂಬ್ಲಿ ಅಂತ್ಯಗೊಳಿಸಿದ ಡೆಪ್ಯುಟಿ ಸ್ಪೀಕರ್ ಕ್ರಮ ಅಸಾಂವಿಧಾನಿಕ ಎಂದು ಗುರುವಾರ ರಾತ್ರಿಯಷ್ಟೇ ಘೋಷಿಸಿದ್ದ ಪಾಕಿಸ್ತಾನ ಸುಪ್ರೀಂ ಕೋರ್ಟ್, ಶನಿವಾರ ಅಧಿವೇಶನ ಸೇರಿ ಅಗ್ನಿ ಪರೀಕ್ಷೆ ಎದುರಿಸುವಂತೆ ತಾಕೀತು ಮಾಡಿತ್ತು.

'ಅವಿಶ್ವಾಸ ನಿಲುವಳಿ ಮತದಾನಕ್ಕೆ ಅವಕಾಶ ನೀಡದೇ ಡೆಪ್ಯುಟಿ ಸ್ಪೀಕರ್ ಖಾಸಿಮ್ ಸುರಿ ತಪ್ಪು ಮಾಡಿದ್ದಾರೆ. ನಂತರ ಪ್ರಧಾನಿ ಇಮ್ರಾನ್ ಖಾನ್ ಶಿಫಾರಸಿನ ಮೇರೆಗೆ ಅಧ್ಯಕ್ಷ ಆರಿಫ್ ಅಲ್ವಿ ಅಸೆಂಬ್ಲಿ ವಿಸರ್ಜಿಸಿದ್ದು ಕೂಡ ಅವಸರದ ಕ್ರಮ. ಅವರ ಆದೇಶಕ್ಕೂ ಕಿಮ್ಮತ್ತಿಲ್ಲ. ಹಾಗಾಗಿ ಇಮ್ರಾನ್ ಖಾನ್ ಶನಿವಾರ ಅವಿಶ್ವಾಸ ನಿಲುವಳಿಯ ಮತದಾನ ಎದುರಿಸಲೇಬೇಕು' ಎಂದು ಪಾಕಿಸ್ತಾನದ ಸರ್ವೋಚ್ಚ ನ್ಯಾಯಾಲಯದ ಪಂಚ ಸದಸ್ಯ ನ್ಯಾಯಪೀಠವು ಗುರುವಾರ ರಾತ್ರಿ ಸರ್ವಾನುಮತದ ತೀರ್ಪು ಪ್ರಕಟಿಸಿತ್ತು.

ಗುರುವಾರ ರಾತ್ರಿ ಹೊರಬಿದ್ದ ತೀರ್ಪು, ಪ್ರತಿಪಕ್ಷಗಳ ನಾಯಕ ಹಾಗೂ ಮುಂದಿನ ಪ್ರಧಾನಿ ಎಂದೇ ಬಿಂಬಿಸಲಾಗಿರುವ ಶೆಹಬಾಜ್ ಷರೀಫ್ ಅವರಿಗೆ ವರದಾನವಾಗಿದೆ. ಆದರೆ, ಪ್ರತಿಪಕ್ಷಗಳಿಗೆ ಚಳ್ಳೆಹಣ್ಣು ತಿನ್ನಿಸಿ, 90 ದಿನಗಳಲ್ಲಿ ದೇಶವನ್ನು ಸಾರ್ವತ್ರಿಕ ಚುನಾವಣೆಗೆ ದೂಡಲು ಯತ್ನಿಸಿದ್ದ ಇಮ್ರಾನ್ ಖಾನ್‌ಗೆ ಭಾರಿ ಮುಖಭಂಗವಾಗಿದೆ.

ಏ.22 ರಿಂದ ಮೇ 18 ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ

ಮೈಸೂರು ನಗರದ 26 ಸೇರಿ ಜಿಲ್ಲೆಯಲ್ಲಿ 50 ಪರೀಕ್ಷಾ ಕೇಂದ್ರ; 35,141 ವಿದ್ಯಾರ್ಥಿಗಳು ನೋಂದಣಿ

ಮೈಸೂರು, ಏ.8(ಆರ್‌ಕೆ)– ಏ.22 ರಿಂದ ಮೇ 18 ರವರೆಗೆ ರಾಜ್ಯಾದ್ಯಂತ 2021–22 ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆಯಲಿವೆ.



ಮೈಸೂರು ನಗರದ 26 ಕೇಂದ್ರಗಳು ಸೇರಿದಂತೆ ಜಿಲ್ಲೆಯಾದ್ಯಂತ ಒಟ್ಟು 50 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, 35,141 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ ಎಂದು ಪದವಿಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಉಪನಿರ್ದೇಶಕ ಡಿ.ಕೆ. ಶ್ರೀನಿವಾಸಮೂರ್ತಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. 31,241 ಹೊಸಬರು, 2921 ಪುನರಾವರ್ತಿತ ಹಾಗೂ 979 ಮಂದಿ ಖಾಸಗಿ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗುತ್ತಿದ್ದು, ಸುಗಮ ರೀತಿ ಪರೀಕ್ಷೆ ನಡೆಸಲು ಅಗತ್ಯ ಎಲ್ಲಾ ಪೂರ್ವಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ತಹಸೀಲ್ದಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಹಿರಿಯ ಪ್ರಾಂಶುಪಾಲರನ್ನೊಳಗೊಂಡ ತ್ರಿಸದಸ್ಯ ಸಮಿತಿ ರಚಿಸಲಾಗಿದ್ದು, ಜಿಪಿಎಸ್ ಅಳವಡಿಸಿರುವ ವಾಹನದಲ್ಲಿ ಜಿಲ್ಲಾ ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆಪತ್ರಿಕೆಗಳನ್ನು ಸರಬರಾಜು ಮಾಡಲು ಜವಬ್ದಾರಿ ವಹಿಸಲಾಗಿದೆ ಎಂದು ಅವರು ತಿಳಿಸಿದರು.

ಜಿಲ್ಲಾಧಿಕಾರಿ, ಅಡಿಷನಲ್ ಡಿಸಿ, ಎಸ್ಪಿ, ಜಿಲ್ಲಾ ಖಜಾನಾಧಿಕಾರಿಗಳು, ಮುಖ್ಯ ಪರೀಕ್ಷಕರೊಂದಿಗೆ ಈಗಾಗಲೇ ಸಭೆ ನಡೆಸಿ ಕಟ್ಟುನಿಟ್ಟಾಗಿ ಪರೀಕ್ಷೆ ನಡೆಸಲು ಅಗತ್ಯ ಕ್ರಮಕೈಗೊಳ್ಳುವ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸುವುದು, ಕುಡಿಯುವ ನೀರು, ಶೌಚಾಲಯದಂತಹ ಮೂಲ ಸೌಕರ್ಯ ಒದಗಿಸುವುದು, ಕೊರೊನಾ ಮುಂಜಾಗ್ರತೆಗೆ ಸಕಲ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಶ್ರೀನಿವಾಸಮೂರ್ತಿ ತಿಳಿಸಿದ್ದಾರೆ.

ಪ್ರತೀ ಪರೀಕ್ಷಾ ಕೇಂದ್ರಕ್ಕೆ ಪೊಲೀಸ್ ಬಂದೋಬಸ್ತ್ ಒದಗಿಸಿ ಕೇಂದ್ರದ ಸುತ್ತ 200 ಮೀ. ವ್ಯಾಪ್ತಿಯಲ್ಲಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸುವುದಲ್ಲದೆ, ಆ ವ್ಯಾಪ್ತಿ ಪ್ರದೇಶದಲ್ಲಿ ಜೆರಾಕ್ಸ್ ಅಂಗಡಿ, ಲೇಖನ ಸಾಮಗ್ರಿ ಮಳಿಗೆಗಳನ್ನು ಬಂದ್ ಮಾಡಿಸಲಾಗುವುದು ಎಂದು ಹೇಳಿದರು.

ಈಗಾಗಲೇ ತಾವು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಮಾಡಿಕೊಂಡಿರುವ ಪೂರ್ವಸಿದ್ಧತೆಗಳ ಪರಿಶೀಲನೆ ನಡೆಸಿದ್ದು, ನ್ಯಾಯ ಸಮ್ಮತ ಹಾಗೂ ಕಟ್ಟು ನಿಟ್ಟಾಗಿ ಪರೀಕ್ಷೆ ನಡೆಸುವ ಸಂಬಂಧ ಸಂಬಂಧಿಸಿದ ಎಲ್ಲರಿಗೂ ಸೂಚನೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5 ರಲ್ಲಿ

ತಿ.ನರಸೀಪುರ ರಸ್ತೆಗಳೆಲ್ಲಾ ಗುಂಡಿಮಯ

ಧೂಳಿನ ಕಣಜವಾಗುತ್ತಿರುವ 'ತ್ರಿವೇಣಿ ಸಂಗಮ'





● ಎಸ್.ಕುಮಾರ್

ತಿ.ನರಸೀಪುರ, ಏ.8– ಕಾವೇರಿ, ಕಪಿಲಾ, ಸ್ಫಟಿಕ ನದಿಗಳ ಸಂಗಮ ಕ್ಷೇತ್ರ ತಿ.ನರಸೀಪುರ ಪ್ರಸ್ತುತ ಎಲ್ಲಿ ನೋಡಿದರೂ ಧೂಳಿನಿಂದ ತುಂಬಿದೆ. ರಸ್ತೆಗಳೆಲ್ಲಾ ಗುಂಡಿಮಯವಾಗಿದ್ದು, ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಷ್ಟಾದರೂ ಪುರಸಭೆ ಮಾತ್ರ ಮೌನ ವಹಿಸಿರುವುದು ವಿಷಾದನೀಯ.

ಕೆಲ ವರ್ಷಗಳ ಹಿಂದೆ ನಿರ್ಮಾಣ ಮಾಡಿದ್ದ ಡಾಂಬರು ರಸ್ತೆಗಳು ನಾಮಾವಶೇಷವಾಗಿವೆ. ಇನ್ನೂ ಕೆಲವು ರಸ್ತೆಗಳು ಗುಂಡಿ ಬಿದ್ದಿದ್ದು, ಸಂಚಾರಕ್ಕೆ ಕ್ಲಿಷ್ಟಕರವಾಗಿವೆ. ರಸ್ತೆಯಲ್ಲಿನ ಹಳ್ಳ–ಕೊಳ್ಳಗಳಲ್ಲಿ ಇಳಿಸದೆ ತೆರಳಲು ದ್ವಿಚಕ್ರ ವಾಹನ ಸವಾರರು ಸರ್ಕಸ್ ಮಾಡುವ ಪರಿಸ್ಥಿತಿ ಬಂದಿದೆ.

ತಿ.ನರಸೀಪುರದ ಹಳೆ ಸ್ಟೇಟ್ ಬ್ಯಾಂಕ್ ರಸ್ತೆಯಿಂದ ತಾಲೂಕು ಕಚೇರಿಗೆ ಹೋಗುವ ನಂಜನಗೂಡು ರಸ್ತೆ, ಲಿಂಕ್ ರಸ್ತೆ, ಮಾರುಕಟ್ಟೆ ರಸ್ತೆ, ಮುರುಗನ್ ಚಿತ್ರಮಂದಿರ ಹತ್ತಿರದ ರಸ್ತೆ ಪೂರ್ಣವಾಗಿ ಹದಗೆಟ್ಟಿದ್ದು, ಅಲ್ಲಲ್ಲಿ ಗುಂಡಿಗಳು ಬಿದ್ದಿವೆ. ಎರಡು ಬಾರಿ ಮಣ್ಣು ಮುಚ್ಚಿದರೂ ಬೇಸಿಗೆ ಗಾಳಿಗೆ ಧೂಳಿನ ಅಭಿಷೇಕವಾಗುತ್ತಿದೆ. ಇದರಿಂದ ವಾಹನ ಸವಾರರಿಗೆ ಬಹಳ ತೊಂದರೆಯಾಗಿದೆ.

ಈ ರಸ್ತೆಗಳಲ್ಲಿ ಸಾಕಷ್ಟು ಬಾರಿ ವಾಹನ ಸವಾರರು ಬಿದ್ದು ಗಾಯಗೊಂಡಿರುವ ನಿದರ್ಶನಗಳಿವೆ. ತಾಲೂಕಿನ ಜನಪ್ರತಿನಿಧಿಗಳು ಅಧಿಕಾರಿಗಳು ಪ್ರತಿನಿತ್ಯ ಇದೇ ರಸ್ತೆಯಲ್ಲಿ ಓಡಾಡುತ್ತಿದ್ದರೂ, ರಸ್ತೆಗಳ ದುರವಸ್ಥೆಯ ಬಗ್ಗೆ ಕಂಡರೂ ಕಾಣದಂತೆ ಓಡಾಡುತ್ತಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಪಟ್ಟಣದ ಪುರಸಭೆಯಿಂದ ಕಾಲಕಾಲಕ್ಕೆ ಕಂದಾಯ ವಸೂಲಿ ಮಾಡಲಾಗುತ್ತಿದ್ದು, ಪುರಸಭೆಗೆ ಆದಾಯ ಬರುತ್ತಿದೆ. ಆದರೂ, ರಸ್ತೆಗಳ ಅಭಿವೃದ್ಧಿ ಕಾಮಗಾರಿ ಆರಂಭಿಸುವ ಬಗ್ಗೆ ಪುರಸಭೆಗೆ ಅರಿವೇ ಇಲ್ಲದಂತೆ ವರ್ತಿಸುತ್ತಿದೆ. ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಪುರಸಭೆಗೆ ಭೇಟಿ ನೀಡಿ ಇಲ್ಲಿನ ಕಾರ್ಯವೈಖರಿ ಬಗ್ಗೆ ಚರ್ಚಿಸಿದ್ದರೆ ಇಂತಹ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಪುರಸಭೆಯ ಬಹುತೇಕ ವಾರ್ಡ್‌ಗಳು ವರುಣಾ ವಿಧಾನಸಭಾ ಕ್ಷೇತ್ರಕ್ಕೆ ಸೇರಿರುವುದರಿಂದ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಿ ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಶಾಸಕರು ಮೀನಾಮೇಷ ಎಣಿಸುತ್ತಿರುವುದಾದರೂ ಏಕೆ ಎಂಬ ಪ್ರಶ್ನೆ ನಾಗರಿಕರಲ್ಲಿ ಮೂಡಿದೆ. ಪುರಸಭೆ, ತಾಲೂಕು ಆಡಳಿತ ಹಾಗೂ ಶಾಸಕರು ಎಚ್ಚೆತ್ತುಕೊಂಡು ಮುಂದಿನ ದಿನಗಳಲ್ಲಿ ರಸ್ತೆ ದುರಸ್ತಿ ಕೆಲಸ ಪ್ರಾರಂಭಿಸಿದ್ದರೆ. ಪುರಸಭೆಯ ಮುಂಭಾಗ ಪಟ್ಟಣದ ನಾಗರಿಕರು ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಸ್ಥಳೀಯರೊಬ್ಬರು ಪುರಸಭೆಗೆ ಎಚ್ಚರಿಕೆ ನೀಡಿದ್ದಾರೆ.

ತಿ.ನರಸೀಪುರದ ಬಹುತೇಕ ವಾರ್ಡ್‌ಗಳ ರಸ್ತೆಗಳು ಗುಂಡಿ ಬಿದ್ದಿದೆ. ಇಲ್ಲಿನ ನಿವಾಸಿಗಳು ನಿತ್ಯ ನನಗೆ ಶಾಪ ಹಾಕುತ್ತಿದ್ದಾರೆ. ಈ ಬಗ್ಗೆ ಪುರಸಭೆ ಗಮನಕ್ಕೆ ತಂದು 4 ತಿಂಗಳೇ ಕಳೆದಿದ್ದರೂ, ಮುಖ್ಯಾಧಿಕಾರಿಗಳಾಗಲೀ ಅಥವಾ ಅಧ್ಯಕ್ಷರಾಗಲೀ ಇತ್ತ ಗಮನ ಹರಿಸುತ್ತಿಲ್ಲ. ತಾತ್ಕಾಲಿಕವಾಗಿಯಾದರೂ ಗುಂಡಿಗಳನ್ನು ಮುಚ್ಚಿಸಬೇಕು. ಕುಡಿಯುವ ನೀರಿನ ಕಾಮಗಾರಿ ಹೆಸರಿನಲ್ಲಿ ಎಲ್ಲೆಂದರಲ್ಲಿ ರಸ್ತೆ ಅಗೆದು ಗುಂಡಿಗಳನ್ನು ಮುಚ್ಚಿಲ್ಲ. ಇದರಿಂದ ರಾತ್ರಿ ವೇಳೆ ಜನರು ಗುಂಡಿಯಲ್ಲಿ ಬಿದ್ದು ಗಾಯಗೊಂಡಿರುವ ಘಟನೆ ನಡೆದಿವೆ. ಬೀದಿ ದೀಪಗಳು ಸಹ ಕೆಟ್ಟು ನಿಂತಿವೆ. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಪುರಸಭೆಯಾಗಲೀ, ಕ್ಷೇತ್ರದ ಶಾಸಕರಾಗಲಿ ಇತ್ತ ಗಮನಹರಿಸುತ್ತಿಲ್ಲ. ಕೂಡಲೇ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡದಿದ್ದರೆ ಪುರಸಭಾ ಮುಂಭಾಗ ನಾಗರಿಕರ ಜೊತೆ ಸೇರಿ ಪ್ರತಿಭಟನೆ ನಡೆಸಬೇಕಾಗುತ್ತದೆ.



– ಎಸ್.ಕೆ.ಕಿರಣ್, ಪುರಸಭೆ ಸದಸ್ಯ.

ತಿ.ನರಸೀಪುರದ ಪ್ರಮುಖ ರಸ್ತೆಗಳು ಗುಂಡಿ ಬಿದ್ದಿರುವುದು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ಗುಂಡಿ ಮುಚ್ಚಲು ಮಣ್ಣು ಹಾಕಲು ಹೇಳಿದ್ದೇನೆ. ಇನ್ನೆರಡು ದಿನಗಳಲ್ಲಿ ಗುಂಡಿ ಮುಚ್ಚಿ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುವು ಕೊಡುತ್ತೇನೆ.



– ಮದನ್‌ರಾಜ್.ಎಸ್, ಪುರಸಭಾಧ್ಯಕ್ಷ.

ಪಟ್ಟಣದ ಎಲ್ಲಾ ರಸ್ತೆಗಳು ಗುಂಡಿಮಯವಾಗಿವೆ. ಶಾಲಾ ಮಕ್ಕಳು, ವಯೋವೃದ್ಧರು, ಹೆಂಗಸರು ಸೇರಿದಂತೆ ವಾಹನ ಸವಾರರು ಈ ರಸ್ತೆಗಳಲ್ಲಿ ಸಂಚರಿಸುವುದು ದುಸ್ತರವಾಗಿದೆ. ಅಲ್ಲದೇ ಮಳೆಗಾಲದಲ್ಲಿ ಈ ರಸ್ತೆ ಬಿದ್ದಿರುವ ಗುಂಡಿಗಳು ಕಾಣಿಸದೇ ಸಾಕಷ್ಟು ಅಪಘಾತ ಸಂಭವಿಸಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಶಾಸಕರು ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕು.



– ಅರ್ಜುನ್, ಪುರಸಭಾ ಸದಸ್ಯ.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ, ಡಾ.ಹೆಚ್.ಸಿ.ಮಹದೇವಪ್ಪ ಲೋಕೋಪಯೋಗಿ ಸಚಿವರಾಗಿದ್ದಾಗ ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ರಸ್ತೆಗಳು ಸಾಕಷ್ಟು ಅಭಿವೃದ್ಧಿಯಾಗಿದ್ದವು. ಪ್ರಸ್ತುತ ಪುರಸಭೆಯವರು 24x7 ಕುಡಿಯುವ ನೀರಿನ ಕಾಮಗಾರಿಗಾಗಿ ರಸ್ತೆಗಳನ್ನು ಅಗೆದಿರುವುದರಿಂದ ಜನಸಾಮಾನ್ಯರಿಗೆ ತೊಂದರೆಯಾಗಿದೆ. ಅಲ್ಲದೇ ಮಕ್ಕಳಿಂದ ಹಿಡಿದು ಎಲ್ಲಾ ವಯೋಮಾನದವರು ಈ ರಸ್ತೆಗಳಲ್ಲಿ ಸಂಚರಿಸಲು ಸರ್ಕಸ್ ಮಾಡಬೇಕಿದೆ. – ಕೆ.ಎಸ್.ಪ್ರಭುಸ್ವಾಮಿ, ಪಟ್ಟಣ ನಿವಾಸಿ.



ಸರಗೂರು ತಾಲೂಕಿನ ಮೊಳೆಯೂರು ಗ್ರಾಮದ ಶ್ರೀಬಿಲ್ ಕುಮಾರಸ್ವಾಮಿ ದೇವಸ್ಥಾನದ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಕನಕ ಭವನ ಉದ್ಘಾಟನಾ ಸಮಾರಂಭದಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ 'ಮೈಸೂರು ಮಿತ್ರ' ಪತ್ರಿಕೆ ಓದುವುದರಲ್ಲಿ ನಿರತರಾಗಿರುವುದು. ಈ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಶಾಸಕ ಅನಿಲ್ ಚಿಕ್ಕಮಾದು, ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ ಇನ್ನಿತರರಿದ್ದಾರೆ.

ಕೆಡಿಪಿಗೆ ನೇಮಕ



ತಿ. ನರಸೀಪುರ, ಏ.8(ಎಸ್‌ಕೆ)– ತಾಲೂಕು ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಮಿತಿಗೆ ನಾಮನಿರ್ದೇಶಕರನ್ನಾಗಿ ಪಟ್ಟಣದ ತ್ರಿವೇಣಿ ನಗರದ ನಿವಾಸಿ ಹಾಗೂ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಎಂ ಮಿಥುನ್ ಅವರನ್ನು ನೇಮಕ ಮಾಡಲಾಗಿದೆ ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ಮಾಲತಿ ಅವರು ಆದೇಶ ನೀಡಿದ್ದಾರೆ.

ಭ್ರಷ್ಟಾಚಾರದ ವಿರುದ್ಧ, ಅಭಿವೃದ್ಧಿ ಪರ ನನ್ನ ಹೋರಾಟ: ಸುಮಲತಾ



ಕೆ.ಆರ್.ನಗರ, ಏ.8– ನಾನು ಸಂಸದೆಯಾಗಿ ಆಯ್ಕೆಯಾದ ದಿನದಿಂದಲೇ ಭ್ರಷ್ಟಾಚಾರದ ವಿರುದ್ಧ ಅಭಿವೃದ್ಧಿ ಪರ ಹೋರಾಟ ಮಾಡುತ್ತಿದ್ದೇನೆ ಎಂದು ಸಂಸದೆ ಸುಮಲತಾ ತಿಳಿಸಿದರು.

ಪಟ್ಟಣದಲ್ಲಿ ನಡೆದ ಪುರಸಭಾಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ರಾಜಕೀಯ ಹೊಸತು. ಆದರೆ ಅಂಬರೀಶ್ ಅವರಿಂದ ಒಂದಿಷ್ಟು ರಾಜಕೀಯ ಮಾಡುವುದನ್ನು ಕಲಿತಿದ್ದೇನೆ ಎಂದರು.

ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿ, ರೈತ ಸಂಘದ ಎಲ್ಲಾ ಮುಖಂಡರು, ಕಾರ್ಯಕರ್ತರು ನನ್ನನ್ನು ಬೆಂಬಲಿಸಿದ್ದಾರೆ. ಅದೇ ರೀತಿ ಕಾಂಗ್ರೆಸ್‌ನಿಂದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕೋಳಿ ಪ್ರಕಾಶ್ ಸಹ ಚುನಾವಣೆಯಲ್ಲಿ ನನ್ನ ಪರ ಕೆಲಸ ಮಾಡಿದ್ದರು. ಆದ್ದರಿಂದ ಅವರ ಪರ ಮತದಾನ ಮಾಡಲು ಬಂದಿದ್ದೇನೆ. ಆದರೆ ಅವರು ಅವಿರೋಧವಾಗಿ ಆಯ್ಕೆಯಾಗಿರುವುದು ಸಂತೋಷ ತಂದಿದೆ ಎಂದರು.

ನೂತನ ಪುರಸಭಾಧ್ಯಕ್ಷರಿಗೆ ಬಡವರ, ನೊಂದವರ ಪರ ಕೆಲಸ ಮಾಡುವಂತೆ ತಿಳಿಸಿದ್ದೇನೆ. ಅಲ್ಲದೇ ಪುರಸಭೆಯಲ್ಲಿ ಭ್ರಷ್ಟಾಚಾರ ನಡೆಯದಂತೆ ಎಚ್ಚರಿಕೆ ವಹಿಸಿ ಕೆಲಸ ಮಾಡುವ ಮೂಲಕ ಒಳ್ಳೆಯ ಹೆಸರನ್ನು ಪಡೆಯುವಂತೆಯೂ ತಿಳಿಸಿದ್ದೇನೆ ಎಂದರು.

ಇದೇ ವೇಳೆ ಪುರಸಭಾಧ್ಯಕ್ಷ ಕೋಳಿ ಪ್ರಕಾಶ್ ಸಂಸದೆ ಸುಮಲತಾ ಅವರನ್ನು ಅಭಿನಂದಿಸಿದರು. ತಾ.ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಪುರಸಭಾ ಮಾಜಿ ಅಧ್ಯಕ್ಷ ಕೆ.ಜೆ.ಸುಬ್ರಮಣ್ಯ, ಸದಸ್ಯರಾದ ನಟರಾಜ್, ಮುಖಂಡರಾದ ಗೀತಾ, ಎಂ.ಎಸ್.ಮಹದೇವ್, ಲೋಕೇಶ್, ನಾಗೇಶ್, ಜಗದೀಶ್, ಮಹೇಶ್, ಪ್ರಸನ್ನ, ಮಹದೇವ ಸೇರಿದಂತೆ ಇನ್ನಿತರರಿದ್ದರು.

ಹುಣಸೂರಲ್ಲಿ ಕುಂದುಕೊರತೆ ಆಲಿಸಿದ ಪೊಲೀಸರು



ಹುಣಸೂರು, ಏ.8(ಕೆಕೆ)– ನಿಮ್ಮ ಅನಿಸಿಕೆ, ಸಲಹೆ, ಅಭಿಪ್ರಾಯ, ದೂರನ್ನು ನಾಗರಿಕರು ಮುಕ್ತವಾಗಿ ನೀಡಿದರೆ ನಾವು ಕ್ರಮ ಕೈಗೊಳ್ಳಲು ಸಾಧ್ಯ ಎಂದು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಚೇತನ್ ತಿಳಿಸಿದರು.

ನಗರದ ಗ್ರಾಮಾಂತರ ಠಾಣೆಯ ಆವರಣದಲ್ಲಿ ನಡೆದ ನಾಗರಿಕರ ಸಭೆಯಲ್ಲಿ ಭಾಗವಹಿಸಿದ್ದ ನಾಗರಿಕರು ಮತ್ತು ಮುಖಂಡರ ಅಭಿಪ್ರಾಯ ಮತ್ತು ದೂರನ್ನು ಆಲಿಸಿ ಮಾತನಾಡಿದ ಅವರು, ನೀವು ಮುಕ್ತವಾಗಿ ಮಾತನಾಡಿ ಮಾಹಿತಿ ನೀಡಿದರೆ, ನಾವು ಅಧಿಕಾರಿಗಳಿಗೆ ಸೂಚನೆ ನೀಡಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ನಾಗರಿಕರು ಠಾಣಾ ಅಧಿಕಾರಿಗಳಿಗೆ ಮತ್ತು ಡಿವೈಎಸ್‌ಪಿ ಅವರಿಗೆ ದೂರವಾಣಿ ಮುಖಾಂತರ ಸಹ ದೂರನ್ನು ನೀಡಬಹುದು. ಅಲ್ಲದೆ 112ಗೂ ಸಹ ಕರೆ ಮಾಡಿ ತಮ್ಮ ಸಮಸ್ಯೆಗಳನ್ನು ತಿಳಿಸಬಹುದು ಎಂದರು.


ಕೆಲವು ನಾಗರಿಕರ ಸಮಸ್ಯೆಗಳನ್ನು ಸ್ಥಳದಲ್ಲೇ ಅಧಿಕಾರಿಗಳಿಗೆ ತಿಳಿಸಿ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು. ಇನ್ನು ಕೆಲವು ಸಮಸ್ಯೆಗಳಿಗೆ ಶೀಘ್ರವೇ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ರೈತ ಹೊಂಬೇಗೌಡ ಮಾತನಾಡಿ, ಹನಗೋಡು ಭಾಗದಲ್ಲಿ ರೈತರ ಸ್ಟಾರ್ಟರ್ ಮತ್ತು ಮೋಟಾರ್‌ಗಳು, ಮೈಕ್ರೋ ಜೆಟ್‌ಗಳು ಕಳ್ಳತನವಾಗುತ್ತಿದ್ದು ಕ್ರಮ ಕೈಗೊಳ್ಳಬೇಕು ಎಂದರು.

ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರ್ ಕುಮಾರ್ ಮಾತನಾಡಿ, ಕ್ರಿಮಿನಲ್ ಪ್ರಕರಣ ಮತ್ತು ಸಿವಿಲ್ ಪ್ರಕರಣಗಳು ಸಹ ಆದಷ್ಟು ಠಾಣಾ ಮಟ್ಟದಲ್ಲೇ ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳಬೇಕು ಎಂದರು. ಕಿರಿಜಾಜಿ ಮಹದೇವ್ ಮಾತನಾಡಿ, ಕೋರ್ಟ್ ವೃತ್ತದಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿದ್ದು, ಟ್ರಾಫಿಕ್ ಸಿಗ್ನಲ್ ಅಳವಡಿಸಬೇಕು ಎಂದರು.

ಮಹದೇವಮ್ಮ ಮಾತನಾಡಿ, ಕಟ್ಟೆಮಳಲವಾಡಿಯಲ್ಲಿ ಅನೇಕರು ಮನೆಯಲ್ಲಿನ ಅಂಗಡಿಗಳಲ್ಲಿ ಮದ್ಯ ವ್ಯಾಪಾರ ಮಾಡು ತ್ತಿದ್ದು, ಕ್ರಮ ಕೈಗೊಳ್ಳಬೇಕೆಂದರು. ಡಿವೈಎಸ್‌ಪಿ ರವಿಪ್ರಸಾದ್, ನಗರ ಠಾಣಾಧಿಕಾರಿ ಸಿ.ಎನ್.ರವಿ, ಗ್ರಾಮಾಂತರ ಠಾಣಾಧಿಕಾರಿ ಚಿಕ್ಕಸ್ವಾಮಿ, ಹರಿಹರ ಆನಂದಸ್ವಾಮಿ, ನಿಂಗರಾಜ್ ಮಲ್ಲಾಡಿ, ತೊಂಡಾಳು ಶಂಕರ್, ಕಿರಂಗೂರು ಸ್ವಾಮಿ, ಗಣಪತಿ, ಪೈಲ್ವಾನ್ ಮಹೇಶ್, ಕಲ್ಕುಣಿಕೆ ಬೀರೇಶ್, ಅಜ್ಗರ್‌ಪಾಶಾ ಇತರರು ಹಾಜರಿದ್ದರು.

ಬೋನಿಗೆ ಬಿದ್ದ ಚಿರತೆ



ಹಂಪಾಪುರ, ಏ.8(ರಾಜೇಶ್)– ಇಲ್ಲಿಗೆ ಸಮೀಪದ ಎಂ.ಕನಕಹಳ್ಳಿ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಚಿರತೆ ಬಿದ್ದಿದೆ.

ಗ್ರಾಮದಲ್ಲಿ ಆಗಾಗ್ಗೆ ಚಿರತೆ ಕಾಣಿಸಿಕೊಳ್ಳುತ್ತಿತ್ತು ಈ ಹಿನ್ನೆಲೆಯಲ್ಲಿ ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಅರಣ್ಯ ಇಲಾಖೆ ಮನವಿ ಸಲ್ಲಿಸಿದ್ದರು. ಅದರಂತೆ ಗ್ರಾಮದ ರೈತ ಕುಮಾರಸ್ವಾಮಿ ಅವರ ಕೋಳಿ ಫಾರಂನಲ್ಲಿ 4 ದಿನಗಳ ಹಿಂದೆ ಇರಿಸಿದ್ದ ಬೋನಿಗೆ ಗುರುವಾರ ರಾತ್ರಿ ಚಿರತೆ ಬಿದ್ದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ರಕ್ಷಿಸಿದರು. ಈ ವೇಳೆ ಮಾತನಾಡಿದ ವಲಯಾಧಿಕಾರಿ ಮಧು, ಚಿರತೆ ದಾಳಿಯಿಂದ ಸಾವನ್ನಪ್ಪಿದ ಹಸು, ಆಡು, ಕುರಿ ಸೇರಿದಂತೆ ಇನ್ನಿತರ ಸಾಕು ಪ್ರಾಣಿಗಳ ಮಾಲೀಕರಿಗೆ ಸೂಕ್ತ ಪರಿಹಾರ ನೀಡಲಾಗುವುದು. ಅಲ್ಲದೇ ಚಿರತೆಯನ್ನು ನಾಗರಹೊಳೆ ಅರಣ್ಯಕ್ಕೆ ಬಿಡಲಾಗುವುದು ಎಂದು ತಿಳಿಸಿದರು.

ಟಾರ್ಪಲಿನ್ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನ

ಹಿರೀಕ್ಯಾತನಹಳ್ಳಿ, ಏ. 8– ಗಾವಡಗೆರೆ ರೈತ ಸಂಪರ್ಕ ಕೇಂದ್ರದಿಂದ ಗಾವಡಗೆರೆ ಹೋಬಳಿ ವ್ಯಾಪ್ತಿಯ ರೈತರು ಟಾರ್ಪಲಿನ್ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಗಾವಡಗೆರೆ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಹೆಚ್.ಎನ್. ಶ್ರೀಕಾಂತ್ ತಿಳಿಸಿದ್ದಾರೆ. ಎಲ್ಲಾ ವರ್ಗದ ರೈತರು ಅರ್ಜಿಯೊಂದಿಗೆ ಆಧಾರ್ ಕಾರ್ಡ್ ಪ್ರತಿ, ಪಹಣಿ, ಬ್ಯಾಂಕ್ ಪುಸ್ತಕ ಜೆರಾಕ್ಸ್, ಹಾಗೂ ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿ ವರ್ಗದ ರೈತರು ಜಾತಿ ಪ್ರಮಾಣ ಪತ್ರ ಜೆರಾಕ್ಸ್ ಲಗತ್ತಿಸಬೇಕು ಸಾಮಾನ್ಯ ವರ್ಗದ ರೈತರಿಗೆ ಯಾವುದೇ ಜಾತಿ ದೃಢೀಕರಣ ಬೇಕಾಗಿರುವುದಿಲ್ಲ. ರೈತರು ಇದರ ಸದುಪಯೋಗ ಪಡೆದುಕೊಳ್ಳ ಬೇಕು ಎಂದು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ

ಬನ್ನೂರು, ಏ.8(ಪ್ರಭು)– ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಬನ್ನೂರು, ಚಾಮನಹಳ್ಳಿ, ಸಂತೇಮಳ, ಚಾಮನಹಳ್ಳಿ ಕೊಪ್ಪಲು, ಹನುಮನಾಳು, ಬೀಡನಹಳ್ಳಿ, ಮಾರೇಗೌಡನಹಳ್ಳಿ, ಬಾಣಗವಾಡಿ, ಯಡಹಳ್ಳಿ, ದಾಸೇಗೌಡನಕೊಪ್ಪಲು ಗ್ರಾಮಗಳಲ್ಲಿ ಏ.9 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಪುಟ್ಟಸ್ವಾಮಿ ನಿಧನ



ಸುತ್ತೂರು, ಏ.8– ನಂಜನಗೂಡು ತಾಲೂಕಿನ ಕುಪ್ಪರವಳ್ಳಿ ಗ್ರಾಮದ ನಿವಾಸಿ ಪುಟ್ಟಸ್ವಾಮಿ (70) ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಪತ್ರಿಕಾ ಛಾಯಾಗ್ರಾಹಕ ಮಹೇಶ್ ಸೇರಿದಂತೆ ಇಬ್ಬರು ಪುತ್ರರು ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಏ.9 ರಂದು(ಶನಿವಾರ) ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಂಜನಗೂಡಿನಲ್ಲಿ ಬಿಜೆಪಿ ಸಂಸ್ಥಾಪನಾ ದಿನಾಚರಣೆ



ನಂಜನಗೂಡು, ಏ. 8– ಉತ್ತರ ಪ್ರದೇಶದಲ್ಲಿ ಬಿಜೆಪಿ ಪಕ್ಷ ಮತ್ತೆ ಅಧಿಕಾರ ಹಿಡಿಯುವ ಮೂಲಕ ಇತಿಹಾಸ ಸೃಷ್ಟಿಸಿದೆ. ಕರ್ನಾಟಕದಲ್ಲೂ ಕೂಡ ಪಕ್ಷವನ್ನು ಅಧಿ ಕಾರಕ್ಕೆ ತರಲು ಕಾರ್ಯಕರ್ತರು ಸಮರ್ಥವಾಗಿ ಪಕ್ಷ ಸಂಘಟನೆಗೊಳಿಸಿ ಎಂದು ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ಅವರು ತಾಲೂಕಿನ ಹೆಗ್ಗಡಹಳ್ಳಿ ಗ್ರಾಮದಲ್ಲಿ ಬಿಜೆಪಿ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಶೋಭಾಯಾತ್ರೆಗೆ ಚಾಲನೆ ನೀಡಿ ನಂತರ ಕಾರ್ಯಕರ್ತರೊಡನೆ ಎಲ್‌ಇಡಿ ಪರದೆ ಮೂಲಕ ನರೇಂದ್ರಮೋದಿ ಅವರ ಭಾಷಣವನ್ನು ವೀಕ್ಷಣೆ ನಡೆಸಿದ ನಂತರ ಮಾತನಾಡಿದರು.


1980ರಲ್ಲಿ 2 ಸ್ಥಾನ ಪಡೆಯುವ ಮೂಲಕ ಆರಂಭವಾದ ಬಿಜೆಪಿ ಪಕ್ಷ ಇಂದು 303 ಸ್ಥಾನಗಳನ್ನು ಪಡೆದು ಬೃಹತ್ ಪಕ್ಷವಾಗಿ ಹೊರಹೊಮ್ಮಿದೆ. ಸಮರ್ಥ ನಾಯಕತ್ವದ ಕೊರತೆಯಿಂದಾಗಿ ಬೇರೆ ಬೇರೆ ದೇಶಗಳು ಆರ್ಥಿಕ ಸಂಕಷ್ಟ ದಿಂದ ನಲುಗುತ್ತಿವೆ. ಶ್ರೀಲಂಕಾ ದೇಶದಲ್ಲೇ ಪೆಟ್ರೋಲ್ ಬೆಲೆ 200 ರೂ.ಗಡಿ ದಾಟಿದೆ ಆದರೆ ನಮ್ಮ ದೇಶದ ಆರ್ಥಿಕತೆ ಸುಭದ್ರತೆಯಿಂದ ಕೂಡಿರುವುದು ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ ಮತ್ತು ಸಮರ್ಥ ನಾಯಕತ್ವ ಕಾರಣ. ರೈತರು ಬಡವರಿಗೆ ಆಹಾರ ಭದ್ರತೆಯಿಂದ ಪಡಿತರ ಆಹಾರ ಧಾನ್ಯಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ ಎಂದರು.

ಬಿಜೆಪಿ ತಾಲೂಕು ಅಧ್ಯಕ್ಷ ಹೊರಳವಾಡಿ ಪಿ.ಮಹೇಶ್ ಮಾತನಾಡಿ, ಪಕ್ಷದ ಹಿರಿಯ ನಾಯಕರು ತ್ಯಾಗ ಬಲಿದಾನಗಳಿಂದ ಬಿಜೆಪಿ ಪಕ್ಷವನ್ನು ಕಟ್ಟಿದ್ದಾರೆ. ಅದರ ಫಲವಾಗಿ ಇಂದು 10 ಕೋಟಿಗೂ ಹೆಚ್ಚಿನ ಕಾರ್ಯಕರ್ತರನ್ನು ಒಳಗೊಂಡಂತಹ ಬೃಹತ್ ಪಕ್ಷವಾಗಿ ಹೊರಹೊಮ್ಮಿದೆ. ಬೂತ್ ಮಟ್ಟದಲ್ಲಿ ಪಕ್ಷವನ್ನು ಸದೃಢಗೊಳಿಸುವ ಸಲುವಾಗಿ ಕಾರ್ಯಕರ್ತರು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಾಧನೆಗಳು ಕ್ಷೇತ್ರದಲ್ಲಿ ಶಾಸಕ ಬಿ.ಹರ್ಷವರ್ಧನ್ ಅವರ ಅಭಿವೃದ್ಧಿ ಕೆಲಸಗಳನ್ನು ಜನರಿಗೆ ತಿಳಿಸಿ ಪಕ್ಷ ಸಂಘಟನೆಗೊಳಿಸಿ ಎಂದರು.

ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗ ನಾಯಕ, ಹಗಿನವಾಳು ಗ್ರಾಪಂ ಅಧ್ಯಕ್ಷ ರಂಗರಾಮು, ಹುಲ್ಲಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್, ಮುಖಂಡ ಕುರಿಹುಂಡಿ ಮಹೇಶ್, ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಗಂಗಾಧರ, ತಾಪಂ ಮಾಜಿ ಸದಸ್ಯ ಕೊಂಗಳ್ಳಿಬಸವ ರಾಜು, ಶಿವಣ್ಣ, ಹುಲ್ಲಹಳ್ಳಿಶಕ್ತಿ ಕೇಂದ್ರ ಅಧ್ಯಕ್ಷ ಪರಶಿವಮೂರ್ತಿ, ಮುಖಂಡರಾದ ಶಿವರುದ್ರ, ಪುಟ್ಟಸ್ವಾಮಿ, ಅಂಕನಾಯಕ, ಸೇರಿದಂತೆ ಬಿಜೆಪಿ ಕಾರ್ಯಕರ್ತರು ಇದ್ದರು.

ಪಂಜಾಬ್ ವಿರುದ್ಧ ಗುಜರಾತ್ ಟೈಟನ್ಸ್‌ಗೆ ರೋಚಕ ಗೆಲುವು

ಮುಂಬೈ, ಏ.8– ಶುಭ್‌ಮನ್ ಗಿಲ್ ಭರ್ಜರಿ ಅರ್ಧಶತಕದ ನೆರವಿನಿಂದ ಪಂಜಾಬ್ ಕಿಂಗ್ಸ್ ವಿರುದ್ಧ ಗುಜರಾತ್ ಟೈಟನ್ಸ್ 6 ವಿಕೆಟ್‌ಗಳ ರೋಚಕ ಗೆಲುವು ಸಾಧಿಸಿದೆ.



ಇಲ್ಲಿನ ಬ್ರೆಬೋರ್ನ್ ಕ್ರೀಡಾಂ ಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ 9 ವಿಕೆಟ್ ನಷ್ಟಕ್ಕೆ 189 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಮಯಾಂಕ್ ಅಗರ್ವಾಲ್ ಕೇವಲ 5 ರನ್ ಗಳಿಸಿ ಔಟಾದರು. ಇವರ ಹಿಂದೆಯೇ ಜಾನಿ ಬೈರ್ ಸ್ಟೋ 8 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಶಿಖರ್ ಧವನ್ ಕೂಡ 35 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಮತ್ತೊಂದೆಡೆ ಬಿರುಸಿನ ಅರ್ಧಶತಕ ಸಿಡಿಸಿದ ಲಿಯಾಮ್ ಲಿವಿಂಗ್‌ಸ್ಟೋನ್ ತಂಡದ ಭಾರೀ ಮೊತ್ತಕ್ಕೆ ಕಾರಣರಾದರು. ಅಲ್ಲದೇ 27 ಎಸೆತಗಳಲ್ಲಿ 4 ಸಿಕ್ಸರ್, 7 ಬೌಂಡರಿ ಒಳಗೊಂಡ 64 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ರಾಹುಲ್ ಚಹರ್ 22, ಶಾರುಕ್ ಖಾನ್ 15, ಹರ್ಷದೀಪ್ ಸಿಂಗ್ 10 ರನ್ ಗಳಿಸಿದರು. ಟೈಟನ್ಸ್ ಪರ ರಶೀದ್ ಖಾನ್ 3, ದರ್ಶನ್ ನಲ್ಕಂಡೆ 2, ಮೊಹಮ್ಮದ್ ಶಮಿ, ಲಾಕಿ ಫರ್ಗ್ಯೂಸನ್ ಮತ್ತು ಹಾರ್ದಿಕ್ ಪಾಂಡ್ಯ ತಲಾ ಒಂದೊಂದು ವಿಕೆಟ್ ಹಂಚಿಕೊಂಡರು.

ನಂತರ 190 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ ಟೈಟನ್ಸ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 190 ರನ್ ಗಳಿಸುವ ಮೂಲಕ ಜಯದ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಮ್ಯಾಥ್ಯೂ ವೇಡ್ 6 ರನ್ ಗಳಿಸಿ ನಿರ್ಗಮಿಸಿದರು. ನಂತರ ಶುಭಮನ್ ಗಿಲ್ ಜೊತೆಗೂಡಿದ ಸಾಯಿ ಸುದರ್ಶನ್ 2ನೇ ವಿಕೆಟ್‌ಗೆ 101 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 35 ರನ್ ಗಳಿಸಿದ್ದ ಸುದರ್ಶನ್ ಔಟಾದರು. ಮತ್ತೊಂದೆಡೆ ಪಂಜಾಬ್ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಗಿಲ್ 1 ಸಿಕ್ಸರ್, 11 ಬೌಂಡರಿ ಒಳಗೊಂಡ 96 ರನ್ ಗಳಿಸಿ ಔಟಾಗುವ ಮೂಲಕ 4 ರನ್‌ನಿಂದ ಶತಕದಿಂದ ವಂಚಿತರಾದರು. ಇವರ ಹಿಂದೆಯೇ 27 ರನ್ ಗಳಿಸಿದ್ದ ಹಾರ್ದಿಕ್ ಪಾಂಡ್ಯ ರನೌಟ್ ಆಗುವ ಮೂಲಕ ನಿರಾಸೆ ಮೂಡಿಸಿದರು. ಅಂತಿಮವಾಗಿ ಗೆಲ್ಲಲು ಕೊನೆಯ ಎರಡು ಎಸೆತಗಳಲ್ಲಿ 12 ರನ್ ಬೇಕಿದ್ದಾಗ ರಾಹುಲ್ ತೇವಾಟಿಯ 2 ಸಿಕ್ಸರ್ ಸಿಡಿಸಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಉಳಿದಂತೆ ತೆವಾಟಿಯಾ 13, ಡೇವಿಡ್ ಮಿಲ್ಲರ್ 6ರನ್ ಗಳಿಸಿದರು. ಶುಭ್‌ಮನ್ ಗಿಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

Crystal City MUDA & RERA Aprd.
30x40 / 30x50
40 Acre Premium Layout
Fully Developed
5 Mins from Kuvempu Nagar
90714 01234

REQUIRED
We Required an Supervisor/ Diploma in Mechanical with 2 to 3 years experience Computer Knowledge to work at BPCL- Mysore-16 Age 25 to 30 Years. Contact
9845011816

WANTED
Diploma Holder in Electrical Engg.,
Fresher / Experienced for immediate appointment.
Contact: **9845118777**

JOB OPPORTUNITY
STORE MANAGER
SALES MAN
For a Branded Retail Showroom in **MYSORE** and **MANDYA** with Sales experience in any Field/ Industry with Good Knowledge.
Call:- 99010 22110, 99004 99700

SITES FOR SALE
MUDA APPROVED
* 54x64 N/E corner @ KBL Gardenia, Vijayanagar 4th Stage.
* 30x40, S/E corner @ Silicon Valley, Opposite to De-Paul School, Basthipura.
Call: 9900466811

SITES FOR SALE
LVR ENCLAVE
MUDA Approved
40x60
Adjacent to Preethi Layout Srirampura 2nd Stage.
Call: 9900466811

FARM SITES
5 minutes from Siddharta Layout, Bannur Road, with Amenities. Ready for construction. 65x95 (6000 sft) Rs 375/sft Contact
76767 71396

SITE FOR SALE
50x70, South Facing Site, No. 1799, near Chandan Veterinary Clinic, Udayaravi Road, (ISKCON Temple), Kuvempunagar 'K' Block, Mysore-23.
Contact: **8861121189**

SITE FOR SALE
40x40 (W), near Devegowda Circle, Saibaba Temple, Bannur Road, Mysore.
Call : **94486 01655**

LBC Trust, Mysore
REQUIRES
OFFICE Assistant
(Male / Female)
10th/ PUC, Salary: 10,000/-
Date: 10.04.2022 (Sunday)
12 PM onwards.
Call Naveen: **9844430224**

6ನೇ ವರ್ಷದ ಸವಿನೆನಪು



ಮಹಾ ಪರಿನಿರ್ವಾಣ – 9/4/16
L.K. ಚಿಕ್ಕಮಾಯಗಯ್ಯ
ಶಿಕ್ಷಕರು

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷವಾದರೂ ಸದಾನಿಮ್ಮ ನೆನಪಿನಲ್ಲಿರುವ
ಭಾಸ್ಕರ್ C ಮತ್ತು ಕುಟುಂಬವರ್ಗ

FOR SALE
1.25 acres well maintained Coffee Estate with 1800 sft furnished modern Villa with 2 Bedrooms, large living room, Kitchen, Dining plus 4 room staff quarters with Bathroom in good condition 1.5 kms from Somwarpet town, Kodagu PLUS coffee estate good condition 8.39 acres on river side with 27 cents empty site on main road - 2.5 kms from Somwarpet town, Kodagu.
Call - 98452 89105 or 98451 27746
email ; coorgprop@gmail.com

LONG TERM & CRASH COURSE
I & II PUC (PCMB /Cs) & SSLC
K-CET / NEET / JEE
Creative Teaching by young and Experienced, Student friendly True Teachers Mysuru @ City Branch
100% Result (or) Money back
For Admission Call Pranesh: **9611012411**

SAARATHI MOTOR CORPORATION
We are hiring for the following job
1. Service Manager - 1 Post.
2. Service Advisor - 2 Post.
3. Marketing Executive- 4 Post.
4. Two Wheeler Mechanice - 4 Post.
5. Tele Caller - 2 Post.

SRI HARI VOC
10th phase adichungiri road , kuvempunagar mysore.
Please contact
8197331627 / 8892762006

WANTED
OFFICE SPACE FOR RENT 10,000 SQFT
Near Alanahalli Ring Road, Devegowda Circle
Contact:
99456 29640

MYSORE RACE CLUB LIMITED
P.B.No.11, Race Course Road, MYSORE 570 010
Tel.No.2521675; Email:secretary@mysoreraceclub.com

REQUIRES MANAGER
For its Club House at Mysore

The selected candidate will be overall in-charge of the management of the Club House including administration, accounts, food & beverage and banqueting. Preference will be given to those who have adequate experience in the management of first class residential Clubs or Hotels. Emoluments will be commensurate with the qualifications and experience.

Please apply within 10 days of this advertisement giving full details of qualification, experience, age, salary drawn and expected to the Secretary & CEO, Mysore Race Club Ltd at **secretary@mysoreraceclub.com**

S.M.GOLD
ಗಿರಿವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5150
ನೀವು ಗಿರಿವಿಯಿಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವು ಬಿಡಿಸಿ ನಿಮ್ಮ ಚಿನ್ನದ ಪ್ಯೂರಿಟಿಯ ಗುಣಮಟ್ಟಕ್ಕೆ ಅನುಗುಣವಾಗಿ ತೆಗೆದುಕೊಂಡು ಉಳಿದ ಹಣವನ್ನು ಕೊಡುತ್ತೇವೆ. (T&C) ಕೂಡಲೇ ಸಂಪರ್ಕಿಸಿ :
8050518881

ಮಾರಾಟಕ್ಕೆ ಇದೆ
ಮುಡಾ ಅನುಮೋದಿತ
ಮನೆ ನಿರ್ಮಿಸಲು ಸಿದ್ಧವಾಗಿದೆ
30X40
ಉತ್ತರಾಭಿಮುಖ 46.5 ಲಕ್ಷ
ರಿಂಗ್ ರೋಡ್ ಒಳಗೆ ಲಲಿತಾದ್ರಿ ನಗರ ಮತ್ತು IPS ಲೇಔಟ್ ಗೆ ಹೊಂದಿಕೊಂಡಂತೆ
Call: 97409 55559

Orange City-Mysore
Booking Open @ Just Rs.525/Sqft, Dimension- 30x40, 30x50, 40x60
Located @ Madikeri-Mysore Highway, NEAR TO NEW KIADB LAND
For Booking Contact
8904181226/8904181227



BOOKINGS OPEN FOR
Construction of Brand New Architecture Designed Houses
Architect Designed New Houses
MUDA APPROVED
20'x40' - 27.5 Lakhs
30'x40' - 40 Lakhs
Near St. Joseph's Central School, Hunsur Road, Mysore.
88840-01233 / 9986537600

MYSORE RACE CLUB LIMITED
P B No. 11, Racecourse Road, Mysore – 570 010
Tel. No. 0821-2521675, Email : mysoreraces@gmail.com

TENDER NOTIFICATION
Sealed Tenders are invited for running the following stalls at the Mysore Race Club premises on Inter Venue Betting and on-course race days for the period **1st May 2022 to 30th April 2023**

- **Vegetarian Canteen**
- **Non – Vegetarian Canteen**
- **Cool Drinks Stall**
- **Ice Cream Stall**
- **Fruits Stall**
- **Fresh Fruit Juice Stall**
- **Coffee / Tea Stall**
- **Bakery**
- **Vehicle Parking Lot**

The tender forms can be obtained from the office of the Mysore Race Club Ltd., during office hours on any working day by paying cash/DD/online payment of **Rs.5000/-*** (non–refundable) for vehicle parking, veg. and non – veg stalls and Rs. 500/-* (non – refundable) for other stalls. The sealed tenders shall be submitted to the Secretary & CEO, Mysore Race Club Ltd., Racecourse Road, Mysore – 570 010, within 7 days from the date of publication of this advertisement.

The Mysore Race Club Ltd. reserves the right to accept or reject any or all tender(s) without assigning any reason.

*GST applicable extra
Date : 08/04/2022

By order,
Secretary & CEO,
Mysore Race Club Ltd.

ಭಾರತದ ಹೆಸರಾಂತ ಪ್ರಸಿದ್ಧ ಬ್ರಾಂಡೆಡ್ ಕಂಪನಿಗಳ
ರೆಡಿಮೇಡ್ ಬಟ್ಟೆಗಳು ಮತ್ತು ಶೂಗಳು
ಮಾರಾಟ 2 ಸ್ಥಳಗಳಲ್ಲಿ
100% ಅಸಲಿ ಬ್ರಾಂಡ್‌ನ ಉಡುಪುಗಳು ಮತ್ತು ಶೂಗಳು
100000 ವಿವಿಧ ಬಗೆಯ (ವೆರೈಟಿ) ಕಂಪನಿಗಳ ಉಡುಪುಗಳನ್ನು ನೇರ ಮಾರಾಟ ಮಾಡಲಾಗುತ್ತಿದೆ

ಪುರುಷರ ಟಿ ಶರ್ಟ್ಸ್, ಶರ್ಟ್ಸ್, ಪ್ಯಾಂಟ್ಸ್, ಜೀನ್ಸ್, ಜಾಕೆಟ್ಸ್, ಲೋವರ್ ಬರ್ಮುಡ, ಸ್ವೆಟರ್ಸ್ ಇತ್ಯಾದಿ. ಮಹಿಳೆಯರ ಬ್ರಾಂಡೆಡ್ ಟಾಪ್ಸ್, ಕುರ್ತಿ, ಪಲಾಜೊ, ಸ್ಕರ್ಟ್ಸ್, ನೈಟ್‌ಗೌನ್, ಟ್ರ್ಯಾಕ್ ಪ್ಯಾಂಟ್, ಶರ್ಟ್ಸ್, ಟಿ ಶರ್ಟ್ಸ್, ಜಿಮ್ ಪ್ಯಾಂಟ್, ಬ್ರಾ, ಪ್ಯಾಂಟಿ ಹಾಗೂ ಕಾಲೇಜ್ ಬ್ಯಾಗ್ಸ್, ಆಫೀಸ್ ಬ್ಯಾಗ್ಸ್, ಲ್ಯಾಪ್‌ಟಾಪ್ ಬ್ಯಾಗ್ಸ್, ವ್ಯಾನಿಟಿ ಬ್ಯಾಗ್ಸ್, ಬೆಲ್ಟ್ಸ್ ಹಾಗೂ ಕಾಸ್ಮೆಟಿಕ್ಸ್ ಬಾರಿ ಕಡಿಮೆ ದರದಲ್ಲಿ ಲಭ್ಯ

ಮೈಸೂರು ನಗರದ ನಂಜರಾಜ ಬಹದ್ದೂರ್ ಛತ್ರ ಮತ್ತು ಉದಯಗಿರಿಯ ಸಫಾ ಫಂಕ್ಷನ್ ಹಾಲ್‌ನಲ್ಲಿ ಮಾರಾಟ

5 ದಿನ ಮಾತ್ರ | ಏಪ್ರಿಲ್ 9th, 10th, 11th, 12th & 13th 2022

ಪುರುಷರ EXCALIBUR LOTTO Raymond GUESS Being human
ಎಂಆರ್‌ಪಿ 2000 ಬೆಲೆ ಬಾಳುವ ಟಿ–ಶರ್ಟ್ಸ್, ಶರ್ಟ್, ಜಾಕೆಟ್ & ವಿಂಡ್‌ಚೀಟರ್ **ಕೇವಲ ರೂ. 350 to 800**

ಮಹಿಳೆಯರ VERO MODA MANGO W BIBA UNITED COLORS OF BENETTON
ಎಂಆರ್‌ಪಿ 1000–1500 ಬೆಲೆ ಬಾಳುವ ಟಾಪ್, ಫ್ರಾಕ್, ಕುರ್ತಿ, ಪಲಾಜೋ, ಸ್ಕರ್ಟ್ಸ್, ನೈಟ್ ಗೌನ್ **ಕೇವಲ ರೂ. 250 to 500**

FLYING MACHINE INDIAN TERRAIN ARROW parx PARK AVENUE ColorPlus ಎಂಆರ್‌ಪಿ ರೂ. 2000/– ರಿಂದ 3000/– ಪುರುಷರ ಶರ್ಟ್ಸ್ **ಕೇವಲ ರೂ. 700**

Pepe Jeans U.S. POLO ASSN. FLYING MACHINE Mast & Harbour HRX Roadster ಎಂಆರ್‌ಪಿ ರೂ. 5000/– ಪುರುಷರ ಜೀನ್ಸ್ ಪ್ಯಾಂಟ್ **ಕೇವಲ ರೂ. 650 to 1000**

UNITED COLORS OF BENETTON HRX Roadster ಎಂಆರ್‌ಪಿ ರೂ. 5000/– ಸ್ವೆಟರ್ಸ್ & ಫುಲ್‌ಓವರ್ಸ್ **ಕೇವಲ ರೂ. 600 ಮಾತ್ರ**

PUMA SKECHERS adidas UNITED COLORS OF BENETTON SAY IT LOUD ಕಾಲೇಜ್ ಬ್ಯಾಗ್ಸ್, ಆಫೀಸ್ ಬ್ಯಾಗ್ಸ್, ಲ್ಯಾಪ್‌ಟಾಪ್ ಬ್ಯಾಗ್ಸ್, ವ್ಯಾನಿಟಿ ಬ್ಯಾಗ್ಸ್
ಎಂಆರ್‌ಪಿ ರೂ. 2000/– ರಿಂದ 4000/– **ಕೇವಲ ರೂ. 400 to 800**

NIKE Timberland adidas ARROW Reebok WOODLAND GAS PUMA HRX Roadster **And many more brands**
ಎಂಆರ್‌ಪಿ ರೂ. 8000/– ಬೆಲೆ ಬಾಳುವ ಸ್ಯಾಂಡಲ್ಸ್, ಚಪ್ಪಲ್ಸ್ & ಶೂಗಳು **ಕೇವಲ ರೂ. 450 to 2500**

enamor ಬ್ರಾ, ಪ್ಯಾಂಟೀಸ್, ಟ್ರ್ಯಾಕ್ ಪ್ಯಾಂಟ್ಸ್, ಶರ್ಟ್ಸ್, ಟಿ–ಶರ್ಟ್ಸ್, ಟಾಪ್ಸ್, ಕೆಮಿಸೋಲ್, ನೈಟ್‌ವೇರ್, ಜಿಮ್ ಪ್ಯಾಂಟ್ಸ್ ಇತ್ಯಾದಿ } ಎಂಆರ್‌ಪಿ ರೂ. 1500/– **ಕೇವಲ ರೂ. 80 to 500**

ಸ್ಥಳ
ಸಫಾ ಫಂಕ್ಷನ್ ಹಾಲ್
ಅಜೀಜ್ ಸೇಠ್ ಜೋಡಿ ರಸ್ತೆ, (ಭಾರತ್ ಪೆಟ್ರೋಲ್ ಬಂಕ್ ಪಕ್ಕ) ಉದಯಗಿರಿ, ಮಹದೇವಪುರ ಮುಖ್ಯರಸ್ತೆ, ಮೈಸೂರು–07

ನಂಜರಾಜ ಬಹದ್ದೂರ್ ಛತ್ರ
ವಿನೋಬ ರಸ್ತೆ, ಮೆಟ್ರೋಪೋಲ್ ಸರ್ಕಲ್ ಹತ್ತಿರ, ಮೈಸೂರು – 570001

ಮೈಸೂರು ಮಿತ್ರ
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com



Suave. Stylish. Just like you.
The Mercedes-Benz A-Class Limo.

Driving off in a Mercedes-Benz A-Class Limo is now easier than easy with Retail Of The Future. Reach out to your nearest Franchise Partner today for special benefits on select variants.

MBUX with 'Hey Mercedes' and Mercedes me connect | Active Brake Assist | Powerful 4 cylinder diesel engine with NANOSLIDE® | Complete peace of mind with 8 year warranty**

EMI starting ₹49 900* with Star Agility | Assured Buy-back value up to 62%
*EMI – Starting at Forty Nine Thousand Nine Hundred Only.

Mercedes-Benz Financial

Akshaya Motors: Mysore - 9108535903 | **Website:** www.akshayamotors.mercedes-benz.co.in

*Terms and Conditions Apply. **The 8 year warranty coverage is for Engine & Transmission of A-Class Limousine (V177). The Finance offer is by Mercedes-Benz Financial. Finance is at the sole discretion of the financier. Mercedes-Benz Financial is a business division of Daimler Financial Services India Pvt. Ltd. CIN: U67190TN2010FTC077890. For technical specifications of the model available in India, please refer to the product brochure or contact the nearest Mercedes-Benz Franchise Partner. Accessories, colors and fitments shown may not be part of standard specification. The A-Class meets Bharat Stage VI emission norms. Akshaya Motors - CIN: U34300KA1998PTC023605.

